
ತಿಂಗಳ ಪತ್ರಿಕೆ

ಫೆಬ್ರವರಿ, ಮಾರ್ಚ್
1996

ವಿಶೇಷ ಸಂಚಿಕೆ



- ಯೋಜನಾ ನೀತಿಗಳು ಮತ್ತು ಮಹಿಳೆಯರು - ಒಂದು ಟೀಕೆ
- ಕರ್ನಾಟಕದಲ್ಲಿ ಪಂಚಾಯತ್‌ರಾಜ್ ಹಾಗೂ ಮಹಿಳಾ ಮೀಸಲಾತಿ
- ಕರ್ನಾಟಕ ಕೃಷಿ ನೀತಿ ಮತ್ತು ಮಹಿಳೆ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 11 ಸಂಚಿಕೆ : 2

ಫೆಬ್ರವರಿ-ಮಾರ್ಚ್ - 1996

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ : **3-00 ರೂ.**
ವಾರ್ಷಿಕ ಚಂದಾ : **25 ರೂ.**
ಆಜೀವ ಚಂದಾ : **300 ರೂ.**

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ...

ಮುಖಪುಟ ಚಿತ್ರ : **ಸರಸ್ವತಿ ದು.**

ಪಡಿಯಚ್ಚು ಪ್ರಾಯೋಜಕರು: **ಶ್ರೀಮತಿ ಶೈಲಜ**

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು-೫೬೦ ೦೬೭



ಸಂಪಾದಕೀಯ

ರಾಜಕೀಯ ಹಾಗೂ ಅಧಿಕಾರ ನಮ್ಮ ಜೀವನದ ಎಲ್ಲಾ ಅಂಶಗಳನ್ನು ಪ್ರಭಾವಿಸುತ್ತಿರುವ ಸಂದರ್ಭದಲ್ಲಿ ಚುನಾವಣೆಯ ತೀರ್ಪು ನಮ್ಮ ಮುಂದಿದೆ. ರಾಜಕಾರಣಿಗಳ ಸ್ವಾರ್ಥ, ಅವರ ಅಸಾಮರ್ಥ್ಯತೆಯನ್ನು ಜನ ಚುನಾವಣೆ ಯಲ್ಲಿ ಎತ್ತಿಹಿಡಿದಿದ್ದಾರೆ. ನ್ಯಾಯಕ್ಕಾಗಿ ಬದ್ಧತೆಯಿಂದ ಹೋರಾಡುವ ಎಲ್ಲಾ ಪ್ರಗತಿಪರ ಗುಂಪುಗಳೂ ಇಂದು ರಾಜಕೀಯದ ಸಮೀಕ್ಷೆ ನಡೆಸಬೇಕಾಗಿರುವ ಅಗತ್ಯ ನಮ್ಮ ಮುಂದಿದೆ. ಈ ನಾಡಿಗೆ ರಾಜಕೀಯ ಪರ್ಯಾಯದ ಅಗತ್ಯ ಇದೆ. ಈ ರಾಜಕೀಯ ಪರ್ಯಾಯ ಆರ್ಥಿಕ, ಸಾಮಾಜಿಕ, ಅಧಿಕಾರ ವ್ಯವಸ್ಥೆ, ಯಲ್ಲಿ ಕ್ರಾಂತಿಕಾರಕ ಬದಲಾವಣೆ ತರುವುದರ ಮೂಲಕ ಮಹಿಳೆಯರ ಬದುಕನ್ನೂ ಹಸನುಗೊಳಿಸಬೇಕಾಗಿದೆ. ಹಾಗಿದ್ದರೆ ಈ ರಾಜಕೀಯ ಪರ್ಯಾಯ ರೂಪಿಸುವಲ್ಲಿ ಮಹಿಳಾ ಚಳುವಳಿಯ ಪಾತ್ರವೇನು ? ಎಂಬು ದನ್ನು ಚಳುವಳಿಯಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬ ಮಹಿಳೆಯೂ ಗಂಭೀರವಾಗಿ ಯೋಚಿಸಬೇಕಾಗಿದೆ.

ಚುನಾವಣೆಯ ಫಲಿತಾಂಶದಲ್ಲಿ ಭಯ, ಆತಂಕಗಳನ್ನು ಹುಟ್ಟಿಸುವ ಸಂಗತಿಯೆಂದರೆ ಧರ್ಮದ ಬೇರುಗಳಲ್ಲಿ ಬದಲಾವಣೆ ಬಯಸುವ ಅನೇಕರು ಭಾರತೀಯ ಜನತಾ ಪಕ್ಷದತ್ತ ಒಲವು ತೋರಿಸಿರುವುದು. ಭ್ರಷ್ಟ ರಾಜಕೀಯ ರಾಜಕಾರಣದಿಂದಾಗಿ ಇಂದು ಎಲ್ಲಾ ಸೆಕ್ಯೂಲರ್ ಫೋರ್ಸ್‌ಗಳನ್ನು ಮೀರಿ ಮೂಲಭೂತವಾದ ತನ್ನ ಮುಷ್ಠಿಯನ್ನು ಬಿಗಿಗೊಳಿಸತೊಡಗಿದೆ. ಮೂಲಭೂತ ವಾದ ಭಾರತದ ರಾಜಕಾರಣದಲ್ಲಿ ಅಧಿಕಾರದೆಡೆ ತನ್ನ ಕರಾಳ ಹಸ್ತಗಳನ್ನು ಹಮ್ಮಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಮಹಿಳಾ ಚಳುವಳಿ ಎಚ್ಚರಿಕೆ ಯಿಂದ ಹೆಜ್ಜೆ ಹಾಕುವುದು ಅಗತ್ಯವಾಗುತ್ತದೆ.

ಕೇಂದ್ರದಲ್ಲಿ ಬಿ.ಜೆ.ಪಿ. ಪಕ್ಷ ಅಧಿಕಾರಕ್ಕೆ ಬಂದಿದೆ ಹಿಂದುಳಿದ ವರ್ಗ – ವಿಶೇಷವಾಗಿ ಮಹಿಳೆಯರು, ಹರಿಜನರು ಹಾಗೂ ಮುಸ್ಲಿಂ ಜನಾಂಗಗಳ ಬದುಕು ಅಸಹನೀಯವಾಗುವ ಸಂಭವ ಹೆಚ್ಚು. ಸಮಾನ ನಾಗರಿಕ ಸಂಹಿತೆ – ಬೇಕು ಎಂಬ ಬೇಡಿಕೆಯೊಡನೆ ಹೋರಾಡುತ್ತಿರುವ ಎಲ್ಲಾ ಮಹಿಳಾ ಗುಂಪುಗಳೂ ತುಂಬಾ ಕ್ಲಿಷ್ಟವಾದ ಸನ್ನಿವೇಶವನ್ನು ಎದುರಿಸ ಬೇಕಾಗುತ್ತದೆ. ಸಮಾನ ನಾಗರಿಕ ಸಂಹಿತೆ ಬೇಕು – ಎನ್ನುವ ನಮ್ಮ ಬೇಡಿಕೆ, ಲಿಂಗ ಸಮಾನತೆ ಅಪೇಕ್ಷೆಯ ಹಿನ್ನಲೆಯುಳ್ಳದ್ದು ಎಂಬುದನ್ನು ಕೋಮುವಾದಿ ಗಳು ಹಾಗೂ ಅವರ ಅಧಿಕಾರ ಪಕ್ಷಕ್ಕೆ ಸಾಬೀತು ಪಡಿಸುವಲ್ಲಿ ನಮ್ಮ ಹಾದಿ

ಯೇನು ಎಂಬುದನ್ನು ನಾವು ಸ್ಪಷ್ಟ ಪಡಿಸಕೊಳ್ಳಬೇಕಾಗುತ್ತದೆ. ಕೋಮು ವಾದಿಗಳು ಅವಕಾಶ ವಾದಿಗಳಾಗಿ ತಮ್ಮ ಜನಾಂಗ ದ್ವೇಷಕ್ಕಾಗಿ ಈ ಬೇಡಿಕೆ ಯನ್ನು ಬಳಸಿಕೊಳ್ಳಬಹುದಾದ ಸಂದರ್ಭ, ಅಧಿಕಾರ ಇರುವಾಗ ನಮ್ಮ ಹೊಣೆಯನ್ನು ನಾವು ಜವಾಬ್ದಾರಿಯುತವಾಗಿ ನಿರ್ವಹಿಸಬೇಕಾಗಿದೆ. ಸಮಾನ ನಾಗರಿಕ ಸಂಹಿತೆಯ ಬಗ್ಗೆ ಜವಾಬ್ದಾರಿಯುತ ನಿಲುವು ತೆಗೆದುಕೊಂಡು ಕೋಮುವಾದಿಗಳೊಡನೆ ನಮಗಿರುವ ಭಿನ್ನತೆಗಳನ್ನು ಹೆಜ್ಜೆ ಹೆಜ್ಜೆಗೂ ಸ್ಪಷ್ಟ ಪಡಿಸಬೇಕಾಗುತ್ತದೆ.

ಮಹಿಳೆಯರನ್ನು ಭಾರತೀಯ ಸಂಸ್ಕೃತಿಯೊಡನೆ ಸಮೀಕರಿಸುವ ಬಿ.ಜೆ.ಪಿ. ಸರ್ಕಾರ ಸತಿ ಸಹಗಮನ ಪದ್ಧತಿಯನ್ನು ವೈಭವೀಕರಿಸಿ ಬಿಡುತ್ತದೆ. ಪೋಲಂಕಿಯವರ 'ಸೀತಾಯಣ' ಪ್ರಕಟವಾದಾಗ ಸೀತೆಯ ಪಾತಿವ್ರತ್ಯ ಕಲ್ಪನೆಗೆ ವಿರೋಧವಾಗಿ ಸೀತೆ ಚಿತ್ರಿಸಲ್ಪಟ್ಟಿದ್ದಾಳೆಂದು ಬಿ.ಜೆ.ಪಿ. ಕಾರ್ಯ ಕರ್ತರು ಗಲಾಟೆ ಮಾಡಿರುವುದನ್ನು ನಾವು ಮರೆಯುವಂತಿಲ್ಲ. ನಿತ್ಯ ಜೀವನ ದಲ್ಲಿ ಮೂಲಭೂತವಾದಿಗಳ ಹಿಡಿತ ನಮ್ಮೆಲ್ಲರನ್ನೂ ಬಿಗಿಗೊಳಿಸುವ ಮುನ್ನವೇ ನಾವೆಲ್ಲರೂ ರಾಜಕೀಯದ ಪರ್ಯಾಯ ವ್ಯವಸ್ಥೆ ಕುರಿತು ಗಂಭೀರ ವಾಗಿ ಯೋಚಿಸಬೇಕಾಗಿದೆ. ರಾಜಕೀಯದ, ಅಧಿಕಾರದ ಹೊರಗೆಯೇ ಇದ್ದು ನಾವು ಹೋರಾಡುತ್ತೇವೆ, ಬದಲಾವಣೆ ತರುತ್ತೇವೆ ಎನ್ನುವ ಮಾತು ಕನಸಿನ ಮಾತಾಗಿ ಬಿಡಬಹುದೇನೋ ಎಂಬುದನ್ನು ಇಂದಿನ ವಾಸ್ತವ ಸ್ಥಿತಿ ನಮಗೆ ದೃಢಪಡಿಸತೊಡಗಿದೆ. ಹಾಗಾಗಿ ರಾಜಕೀಯ ಪರ್ಯಾಯ ವ್ಯವಸ್ಥೆ ರೂಪಿಸುವಲ್ಲಿ ಸಕ್ರಿಯ ರಾಜಕಾರಣದಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಬಗೆ ಯನ್ನು ಕುರಿತು ಮಹಿಳಾ ಚಳುವಳಿ ಗಂಭೀರವಾಗಿ ಆಲೋಚಿಸಬೇಕಾಗಿದೆ.

ಯೋಜನಾ ನೀತಿಗಳು ಮತ್ತು ಮಹಿಳೆಯರು - ಒಂದು ಟೀಕೆ

ನಿಲಾಂಜನ ಬಿಸ್ವಾಸ್

"ಮಹಿಳೆಯರ ಕಲ್ಯಾಣಾಭಿವೃದ್ಧಿ" ಸ್ಥಾನವನ್ನು 'ಮಹಿಳೆಯರ ಸಶಕ್ತತೆ' ಎಂಬ ಘೋಷಣೆ ಆಕ್ರಮಿಸಿಕೊಳ್ಳುವುದರೊಂದಿಗೆ ಕಳೆದ ನಾಲ್ಕುವರೆ ದಶಕಗಳ ಹಂತದಲ್ಲಿ ಮಹಿಳೆಯರ ಮೇಲಿನ ರಾಜ್ಯದ ಉತ್ಪ್ರೇಕ್ಷೆ/ಆಡಂಬರತೆಯಲ್ಲಿ ಒಂದು ಸ್ಪಷ್ಟ ಬದಲಾವಣೆಯಾಗಿದೆ. ಈ ಬದಲಾವಣೆ ಯಾಕೆ ಆಗಿದೆ? ಹಲವಾರು ದಶಕಗಳ ಯೋಜನೆಗಳು ಹೆಂಗಸರ ಬದುಕನ್ನು ಉತ್ತಮಗೊಳಿಸದಿದ್ದರೂ ಯಾವ ಹಂತದಲ್ಲಿ ಕಲಕಿವೆ, ಕುಂಠಿತಗೊಳಿಸಿವೆ?

ಮಹಿಳೆಯರಿಗೆ ಸಂಬಂಧಪಟ್ಟಂತಹ ಯೋಜನೆಗಳ ರೀತಿಯನ್ನು ವಿಶ್ಲೇಷಿಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ. ಮಹಿಳೆಯರ ಬಗೆಗಿನ ಯೋಜನೆಗಳನ್ನು ಪ್ರತ್ಯೇಕವಾಗಿ ವೀಕ್ಷಿಸುವುದು ಸಾಧ್ಯವಿಲ್ಲ. ಸರ್ಕಾರದ ನೀತಿಯುಕ್ತ ಹೊಗಳಿಕೆ ಕಾರ್ಯಕ್ರಮಗಳು ಒಂದು ರಾಜಕೀಯ-ಆರ್ಥಿಕತೆಯ ಸಂದರ್ಭದಲ್ಲಿ ಹುಟ್ಟಿಕೊಳ್ಳುತ್ತವೆ ಹಾಗೂ ಅನೇಕ ಸಂಗತಿಗಳಿಂದ, ಬಹುಪಾಲು ವಿರೋಧಾಭಾಸದ ಸಂಗತಿಗಳಿಂದಲೇ ನಿರ್ಧರಿಸಲ್ಪಡುತ್ತವೆ. ಸಾಮಾನ್ಯವಾಗಿ ನಡೆಯುವಂತೆ "ಮಹಿಳೆಯರ ಸ್ಥಿತಿ"ಯನ್ನು ಉತ್ತಮಗೊಳಿಸುವ ದೃಷ್ಟಿಕೋನದ ಪ್ರತ್ಯೇಕ ಯೋಜನೆಗಳು ಅಥವಾ ಕಾರ್ಯಕ್ರಮಗಳು ವಿಫಲಗೊಂಡಿರುವುದಕ್ಕೆ ರಾಜ್ಯ ಜೊತೆ ಜೊತೆಯಾಗಿ ಅನುಸರಿಸಿದ ಬೃಹತ್ ಯೋಜನಾ ನೀತಿಗಳ ಫಲಿತಾಂಶಗಳೇ ಕಾರಣವಾಗಿವೆ. ಆದ್ದರಿಂದ ವಿಶಾಲವಾದ ಚೌಕಟ್ಟಿನೊಳಗೆ ಗುರುತಿಸಿರದೆ, ಯೋಜನೆಗೋಸ್ಕರ ಮಹಿಳೆಯರಿಗೆ ಯೋಜನೆಯನ್ನು ರೂಪಿಸುವ ಕೆಲಸ ಅರ್ಥಹೀನವಾದದ್ದು. ಈ ಲೇಖನದ ಮೊದಲ ಭಾಗದಲ್ಲಿ ಈ ವಿಶಾಲವಾದ ಚೌಕಟ್ಟು ಹಾಗೂ ಇದರಲ್ಲಿ ಮಹಿಳೆಯರು ಹಾಗೂ ಯೋಜನಾ ನೀತಿಗಳ ಪ್ರಶ್ನೆಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ಹಿನ್ನೆಲೆ

ಸ್ವಾತಂತ್ರ್ಯಾನಂತರದಲ್ಲಿ ಪೋಸ್ಟ್ ಕಲೋನಿಯಲ್ ಭಾರತದ ಅಧಿಕಾರಿಶಾಹಿ ವರ್ಗದವರು ಆಧುನಿಕ ಆರ್ಥಿಕ ನೀತಿಯನ್ನು ಬೆಳೆಸುವ ಕೆಲಸಕ್ಕೆ ಪ್ರಾಮುಖ್ಯತೆ ನೀಡಿದರು. ಹಾಗಾಗಿ ಆರ್ಥಿಕ ಬೆಳವಣಿಗೆಯೇ ಅತ್ಯಂತ ಪ್ರಮುಖ ವಿಚಾರವಾಯಿತು. ಆದಾಗ್ಯೂ, ಅಭಿವೃದ್ಧಿ ಸಂತವು ಸಾಮಾಜಿಕ ನ್ಯಾಯ ಮತ್ತು ಸಾಮೂಹಿಕ ಕಲ್ಯಾಣಾಭಿವೃದ್ಧಿ ಶಿಸ್ತುಗಳನ್ನು ಅಳವಡಿಸಿಕೊಂಡ ದ್ವಿಧ್ರುವಗಳ ಜಗತ್ತಿನ ಸಂದರ್ಭದಲ್ಲಿಯೇ ನಡೆಯತೊಡಗಿತ್ತು. ಪ್ರಥಮ ಹಂತದ ಯೋಜನಾ ನೀತಿ ಸ್ವಾವಲಂಬಿತನ ಹಾಗೂ ಕಲ್ಯಾಣಾಭಿವೃದ್ಧಿಯನ್ನು ರಾಜ್ಯದ ಮುಖ್ಯ ಗುರಿಯನ್ನಾಗಿಸಿತು.

ವಾಸ್ತವದಲ್ಲಿ ಇದರರ್ಥವೇನಾಗಿತ್ತೆಂದರೆ ಬಂಡವಾಳಶಾಹಿತ್ವ ಆರ್ಥಿಕ ಬೆಳವಣಿಗೆಯೊಂದಿಗೆ ಬಡತನ ನಿರ್ಮೂಲನ, ಸಮುದಾಯ ಅಭಿವೃದ್ಧಿ ಹಾಗೂ ಭೂ ಸುಧಾರಣೆಯಂತಹ ಸಂಮಿಶ್ರ ಕಲ್ಯಾಣಾಭಿವೃದ್ಧಿ ಕಾರ್ಯಕ್ರಮಗಳು ರೂಪುಗೊಂಡವು.

ಆಧುನಿಕ ಆರ್ಥಿಕ ನೀತಿಯ ಪರಿವರ್ತನೆಯನ್ನು ತುರ್ತು ಕೈಗಾರಿಕರಣ, ಕೃಷಿ ಆಧುನೀಕರಣ, ಟೆಕ್ಸ್‌ಟೈಲ್ ನಂತಹ ಕೆಲವು ಕೈಗಾರಿಕೆಗಳನ್ನು ಯಾಂತ್ರೀಕರಣಗೊಳಿಸುವುದರೊಂದಿಗೆ ಹಮ್ಮಿಕೊಳ್ಳಲಾಯಿತು. ಜೊತೆಗೆ ಕಲ್ಯಾಣಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಸಾರ್ವಜನಿಕ ಉದ್ಯಮದ ಅಭಿವೃದ್ಧಿಯನ್ನು ಹಮ್ಮಿಕೊಳ್ಳಲಾಯಿತು.

1965ರ ಆಹಾರ ಸಮಸ್ಯೆಯ ಬಿಕ್ಕಟ್ಟಿನ ಸ್ಥಿತಿಯಲ್ಲಿ ಸ್ವಾವಲಂಬಿತನ ಹಾಗೂ ಕಲ್ಯಾಣಾಭಿವೃದ್ಧಿಯಂತಹ ಜೋಡಿ ಯೋಜನಾ ನೀತಿಗಳಿಂದ ಆರ್ಥಿಕ ಬೆಳವಣಿಗೆಯನ್ನಾಗಲೀ ಅಥವಾ ಸಾಮಾಜಿಕ ನ್ಯಾಯವನ್ನಾಗಲೀ ಸಾಧಿಸುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಯಿತು. ಆರ್ಥಿಕತೆಗೆ ಬಲವಾದ ಪೆಟ್ಟು ಬಿದ್ದಿತ್ತಲ್ಲದೇ ಎರಡು ದಶಕಗಳ ಕಾಂಗ್ರೆಸ್ ಆಡಳಿತದ ಬಗ್ಗೆಗಿನ ಭ್ರಮನಿರಸನ ಸಾರ್ವಜನಿಕವಾಗಿಯೇ ವ್ಯಕ್ತಗೊಂಡಿತ್ತು. 60 ಹಾಗೂ 70ರ ದಶಕಗಳ ಕೊನೆಯಲ್ಲಿ ಬಡ ರೈತರ, ಬುಡಕಟ್ಟು ಜನಾಂಗ, ದಲಿತ ಹಾಗೂ ಮಹಿಳೆಯರ ಬಲವತ್ತರವಾಗಿರುವ ಚಳುವಳಿಗಳು ದೇಶದುದ್ದಕ್ಕೂ ಹುಟ್ಟಿಕೊಂಡವಲ್ಲದೇ ಅಭಿವೃದ್ಧಿ ಹಂತಹ ತರ್ಕಗಳನ್ನೇ ಪ್ರಶ್ನೆ ಮಾಡತೊಡಗಿದವು. ಆಧುನಿಕ ಅಭಿವೃದ್ಧಿಯು

ಅಸಮಾನತೆಯ ಒತ್ತಡಗಳಿಗೆ ಕಾರಣವಾಯಿತು ಎಂಬುದನ್ನು ಗಮನಿಸಲಾಯಿತು. ಈ ಅಸಮಾನತೆಯ ಒತ್ತಡಗಳು ಮೇಲ್ವರ್ಗದವರಲ್ಲಿ ಸಂಪತ್ತಿನ ಕ್ರೋಢೀಕರಣ, ಜನಸಂಖ್ಯೆಯ ಒಂದು ಭಾಗದ ಲಾಲಿಸುವಿಕೆ, ಹಾಗೂ ನಗರದ ವಲಸೀಕರಣವನ್ನು ಜಾಗೃತಗೊಳಿಸಿದವು. ಇದು ಭೂಮಿಯು ಕಳೆದುಕೊಳ್ಳುವಿಕೆ ಹಾಗೂ ಪರಿಸರ ವಿನಾಶಕ್ಕೂ ಕಾರಣವಾಯಿತು. ಕಲ್ಯಾಣಾಭಿವೃದ್ಧಿ ಕಾರ್ಯಕ್ರಮಗಳು ಪೋಸ್ಟ್ ಕಲೋನಿಯಲ್ ವರ್ಗದ, ಜಾತಿಯ ಅಥವಾ ಲಿಂಗ ತಾರತಮ್ಯದ ಅಸಮಾನತೆಯ ಬಗೆಗಿನ ಒಂದು ವಿಮರ್ಶಾ ಗ್ರಹಿಕೆಯೊಂದಿಗೆ ಯಾವತ್ತೂ ರೂಪುಗೊಂಡಿರಲಿಲ್ಲ; ಹೆಚ್ಚೆಂದರೆ ಇವು ಅನುಕಂಪದ-ಭಿಕ್ಷೆಯಾಗಿ ರೂಪುಗೊಂಡಿದ್ದುವು, ಹಾಗೂ ಸೇವೆ ಸಲ್ಲಿಸಿದ್ದವು; ಕೆಟ್ಟದ್ದಾಗಿ ಎಂದರೆ ಇವು ವಾಸ್ತವದ ಶೋಷಣೆಯ ರಚನೆಗಳನ್ನು ಬಲಗೊಳಿಸಿದವು.

ಸಾರ್ವಜನಿಕ ಅತೃಪ್ತಿ ಬೆಳೆದ ಹಾಗೆಯೇ ಸರ್ಕಾರವೂ ನ್ಯಾಯಯುತ ಅಂಗೀಕಾರತ್ವದ ಬಲವಾದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಬ್ಯಾಂಕುಗಳ ರಾಷ್ಟ್ರೀಕರಣ ಹಾಗೂ ದೊರೆಗಳ ಸ್ವಂತ ವೆಚ್ಚಕ್ಕೆ ಸರ್ಕಾರ ಕೊಡುವ ಹುಟ್ಟುವಳಿ ಹಣದ ರದ್ದತಿ ಇಂತಹವುಗಳ ಮೂಲಕ ಎಡಪಂಥೀಯರನ್ನು ಒಳಗೊಳ್ಳಲು ಪ್ರಯತ್ನಿಸಿದ್ದಾಗ್ಯೂ, ಬಲವತ್ತರವಾಗಿದ್ದ ವಿರೋಧವನ್ನು, ಚಳುವಳಿಗಳನ್ನು ಒಳಗೊಳ್ಳಲು/ತಡೆಗಟ್ಟಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

ನ್ಯಾಯಯುತ ಅಂಗೀಕಾರತ್ವದಲ್ಲಿನ ಬಿಕ್ಕಟ್ಟಿನ ಪರಿಸ್ಥಿತಿಯ ಫಲವೇ 1976ರ ತುರ್ತು ಪರಿಸ್ಥಿತಿಯ ಜಾರಿಗೊಳಿಸುವಿಕೆಗೆ ಕಾರಣವಾದದ್ದು. ಹಾಗೂ ಎಲ್ಲಾ ರೀತಿಯ ಅಸಮ್ಮತಿಯನ್ನು ಬಗ್ಗು ಬಡಿಯಲು ತುರ್ತು ಪರಿಸ್ಥಿತಿಯನ್ನು ಬಳಸಿಕೊಳ್ಳಲಾಯಿತು. ಹಿಂಸಾತ್ಮಕವಾಗಿದ್ದ ಜನಸಂಖ್ಯಾ ನಿಯಂತ್ರಣದ ಕಾರ್ಯಕ್ರಮದಲ್ಲಿ 4.3 ಮಿಲಿಯನ್ ಸಂತಾನಶಕ್ತಿ ಹರಣವನ್ನು ಏಪ್ರಿಲ್ 1976ರಿಂದ ಮಾರ್ಚ್ 1977ರಲ್ಲಿ ನಿರ್ದಿಷ್ಟ ಗುರಿಯನ್ನಾಗಿ ಮಾಡಿಕೊಳ್ಳಲಾಗಿತ್ತು. ಬಲವಂತವಾಗಿ ಮಾಡುತ್ತಿದ್ದ ಸಂತಾನಶಕ್ತಿ ಹರಣ ಕಾರ್ಯಕ್ರಮವು ಬಡಜನರು, ಅನಕ್ಷರಸ್ಥರು, ಕೆಳಜಾತಿಯವರು ಹಾಗೂ ಮುಸ್ಲಿಂ ಜನಾಂಗವನ್ನು ಬಲಿಪಶುವನ್ನಾಗಿ ಮಾಡಿತು. ತುರ್ತು ಪರಿಸ್ಥಿತಿಯ ಈ ಅತಿರೇಕಗಳಿಗಾಗಿ ಆಡಳಿತದಲ್ಲಿದ್ದ ಸರ್ಕಾರವು ಮುಂದಿನ ಚುನಾವಣೆಯಲ್ಲಿ ಬೆಲೆತೆತ್ತಬೇಕಾಯಿತು. ಈ ಸಂದರ್ಭದಲ್ಲಿ ಚುನಾಯಿತಗೊಂಡ ಹೊಸ ಸಂಮಿಶ್ರ ಸರ್ಕಾರವು (ಇದು ರಾಜ್ಯದ ವಾಣಿಜ್ಯ, ಕೆಳಜಾತಿ ಹಾಗೂ ರೈತರ ಪ್ರತಿನಿಧಿಗಳ ಲಾಬಿಯನ್ನೊಳಗೊಂಡಿತ್ತು). ಜನ ಸಾಮಾನ್ಯರಿಗೆ ಹೆಚ್ಚು ಜವಾಬ್ದಾರಿಯಾಗಿರುವಂತೆ ಕಾಣಿಸಿಕೊಳ್ಳುವುದು ಅನಿವಾರ್ಯವಾಗಿತ್ತು.

ಹೊಸ ಮಹಿಳಾ ಚಳವಳಿಯ ಹುಟ್ಟು-ತುರ್ತು ಪರಿಸ್ಥಿತಿಯ ನಂತರದ ವಸ್ತುಸ್ಥಿತಿ. ಇದು ಬೆಳೆಯುತ್ತಿರುವ ಮಹಿಳೆಯರ ಮೇಲಿನ ಹಿಂಸಾಚಾರದ ಸಮಸ್ಯೆಯೊಂದಿಗೆ ರಾಜ್ಯವನ್ನು ವಿರೋಧಿಸಿದ್ದರಿಂದ ಇದು ಸರ್ಕಾರವನ್ನು ಸಮರ್ಥವಾಗಿ ಅಲುಗಾಡಿಸುವ ಮತ್ತೊಂದು ಒತ್ತಡವಾಯಿತು. ರಾಜ್ಯದ ಅಭಿವೃದ್ಧಿ ವ್ಯಾಖ್ಯಾನದಲ್ಲಿ ಮುಖ್ಯ ಬದಲಾವಣೆ ಆಗಿ ಆರನೆಯ ಯೋಜನೆಯಲ್ಲಿ (1980–85) ಜನಪ್ರಿಯ ಚಳುವಳಿಗಳ ಭಾಷೆಯನ್ನು ಜಾಗೃತವಾಗಿ ಬಳಸಿಕೊಳ್ಳಲಾಯಿತು. ಮೂರು ದಶಕಗಳ ಕಾಲ ಹೊಂಚು ಹಾಕಿದ್ದ ಕಲ್ಯಾಣಾಭಿವೃದ್ಧಿ' ಘೋಷಣೆ ಜನರ ಕಣ್ಣುಗಳಲ್ಲಿ ಅದರ ಎಲ್ಲಾ ನಂಬಿಕೆಯನ್ನೂ ಕಳೆದುಕೊಂಡುದರಿಂದ ಅದರ ಸ್ಥಾನವನ್ನು 'ಹೋಲಿಸ್ಟಿಕ್ ಡೆವಲಪ್‌ಮೆಂಟ್' ಎಂಬ ಘೋಷಣೆ ಆಕ್ರಮಿಸಿಕೊಂಡಿತು. ಪ್ರಥಮ ಬಾರಿಗೆ ಆರನೆಯ ಯೋಜನೆಯಲ್ಲಿ ಮಹಿಳೆಯರನ್ನು ಒಂದು ವಿಶೇಷ ಅಧ್ಯಾಯದಲ್ಲಿ ಸೇರಿಸಲಾಯಿತು.

ಆರ್ಥಿಕ ಬೆಳವಣಿಗೆ, ಮತ್ತೆ ಸುಧಾರಿಸಿಕೊಂಡ ಎಂಭತ್ತರ ದಶಕದಲ್ಲಿ ಘೋಷಣೆಯಲ್ಲಿ ಬದಲಾವಣೆಯಾಯಿತು ಎಂಬುದನ್ನು ಗಮನಿಸುವುದು ಅಗತ್ಯ. 'ಹೋಲಿಸ್ಟಿಕ್ ಡೆವಲಪ್‌ಮೆಂಟ್'ಗೆ ಬದಲಾದ ಭಾಷೆ ರಾಜ್ಯದ ಬೃಹತ್ ಯೋಜನೆಗಳ ಬಗ್ಗೆಗಿನ ಪುನರ್ ವಿಮರ್ಶೆಯ ಮೇಲಿನ ಆಧಾರದಿಂದ ಅದುದಲ್ಲ, ಬದಲಾಗಿ ಈ ಬೃಹತ್ ಯೋಜನಾ ನೀತಿಗಳು ಖಾಸಗೀ ಬಂಡವಾಳಕ್ಕೆ ಸೇವೆ ಸಲ್ಲಿಸುವ ಉದ್ದೇಶದಿಂದ ತ್ವರಿತಗೊಳಿಸಲ್ಪಟ್ಟ ಸಂದರ್ಭದಲ್ಲಿ ಇವು ಚಲಾವಣೆಗೆ ಬಂದದ್ದು.

1991ರಲ್ಲಿ ಸಾಕಷ್ಟು ಸುಧಾರಣೆಗೊಳಗಾದ ಆರ್ಥಿಕತೆ-ಸ್ಥಳೀಯ ಉದ್ಯಮದ ಬಿಡಿ ಭಾಗಗಳನ್ನು ಜೋಡಿಸಿ ರಫ್ತುಗೊಳಿಸುವ ಹಾಗೂ ಗ್ರಾಹಕರ ತೃಪ್ತಿಗೋಸ್ಕರ ಸ್ಥಳೀಯ ಮಾರುಕಟ್ಟೆಗಳನ್ನು ಸೃಷ್ಟಿಸಿದ್ದರಿಂದ 80ರಲ್ಲಿಯೇ ಆರ್ಥಿಕ ಉದಾರೀಕರಣ ಪ್ರಾರಂಭ

ಗೊಂಡಿತ್ತು. (ಸಾರ್ವಜನಿಕ ಉದ್ಯಮದ ಸಂಬಳದಲ್ಲಿ ಪೂರ್ವಭಾವಿಯಾಗಿರದ ಏರಿಕೆಗೆ ಅನುಗುಣವಾಗಿ). ಖಾಸಗೀಕರಣ ಹಾಗೂ ಜಾಗತೀಕರಣ ಬೆಳವಣಿಗೆಯಾದ ಹಾಗೆ ಅಸಂಘಟಿತ ಕ್ಷೇತ್ರವನ್ನು ವಿಸ್ತೀರ್ಣಗೊಳಿಸುವ ಹಾಗೂ ಮಹಿಳಾ ಕಾರ್ಮಿಕರನ್ನು ದಿನಗೂಲಿಗಳನ್ನಾಗಿಸುವ ರೀತಿಯ ಉತ್ಪಾದನೆಯಲ್ಲಿನ ಬದಲಾವಣೆ 80ರ ದಶಕದಲ್ಲಿ ನಡೆಯಿತು. 1991ರ ಜೂನ್‌ನಿಂದ ರಾಜನಿಕ ಹೊಂದಾಣಿಕೆಯ ಕಾರ್ಯಕ್ರಮದ ಅಡಿ ನಡೆದ ಸಂಪೂರ್ಣ ಉದಾರೀಕರಣದಿಂದಾಗಿ ಆರ್ಥಿಕ ಮುಕ್ತ ನೀತಿಯು ಸ್ಥಿತಿಯು ಸರಿಯೆಂಬ ತಾರ್ಕಿಕ ನಿರ್ಣಯಕ್ಕೆ ಬರಲಾಯಿತು.

ಅಭಿವೃದ್ಧಿ ಸಂವಾದ, ಭಾಷೆಯಲ್ಲಿ ನಡೆದ ಮೂರನೆಯ ಬದಲಾವಣೆಯು ಆರ್ಥಿಕತೆಯಲ್ಲಿ ಪರಿಚಯಿಸಲ್ಪಟ್ಟ ಮೂಲಭೂತ ಬದಲಾವಣೆಗಳ ಜೊತೆ ಕಾಕತಾಳೀಯವಾಗಿರುವುದನ್ನು ನಾವು ಕಾಣುತ್ತೇವೆ. ರಾಜನಿಕ ಹೊಂದಾಣಿಕೆ ಕಾರ್ಯಕ್ರಮದ ನಂತರ ದಾಖಲೆಯಾದ 8ನೆಯ ಯೋಜನೆಯಲ್ಲಿ 'ಅಭಿವೃದ್ಧಿ' ಕಲ್ಪನೆಯು 'ಸಶಕ್ತತೆ'ಯ ಕಲ್ಪನೆಗೆ ಎಡೆ ಮಾಡಿಕೊಟ್ಟಿತು.

ಯುನೈಟೆಡ್ ನೇಷನ್ಸ್‌ನಂತಹ ಅಂತರ್‌ರಾಷ್ಟ್ರೀಯ ಸಂಸ್ಥೆ ಗುರುತರ ಪಾತ್ರ ವಹಿಸಿದಂತಹ ಹಾಗೂ ಯುದ್ಧಾನಂತರದ, ದ್ವಿ-ಧ್ರುವ ಜಗತ್ತಿನ ಸಂದರ್ಭದಲ್ಲಿ ಸಾಮೂಹಿಕ ಕಲ್ಯಾಣಾಭಿವೃದ್ಧಿಗೆ ಸಾಮಾಜಿಕ ನ್ಯಾಯದಂತಹ ಘೋಷಣೆಯು ರೂಪಗೊಂಡಿದ್ದರೆ 'ಸಶಕ್ತತೆ' ಘೋಷಣೆಯು ಸ್ಥಾನ ಅಲಂಕರಿಸಿದ್ದು ಮೂಲಭೂತವಾಗಿ ಬದಲಾವಣೆ ಹೊಂದಿರುವಂತಹ ಸಂದರ್ಭದಲ್ಲಿಯೇ ಆಗಿದೆ. ಹಿಂದಿನ ಮುಖ್ಯವಾದ ಸಮಾಜವಾದದ ರಾಜ್ಯಗಳು ಪತನಗೊಂಡಿವೆ. ಯುನೈಟೆಡ್ ನೇಷನ್ಸ್‌ನ ಪ್ರಾಬಲ್ಯ ಜಗತ್ತಿನ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಭಾವಪೂರ್ಣವಾಗಿ ಸ್ಥಾಪಿತಗೊಂಡಿದೆ, ಯುನೈಟೆಡ್ ನೇಷನ್ಸ್ ಜೊತೆಗೆ ಬೆಳೆಯುತ್ತಿರುವ ಹಣಕಾಸು ಹಾಗೂ ವಾಣಿಜ್ಯ ಸಂಸ್ಥೆಗಳಂತಹ ಜಾಗತಿಕ ವಾಣಿಜ್ಯ ಸಂಸ್ಥೆಗಳು (W.T.O.)ಜಗತ್ತಿನ ಆರ್ಥಿಕತೆಯ ಮೇಲೆ ಕಾರ್ಪೊರೇಟ್ ಬಂಡವಾಳ ಹಿಡಿತ ಸಾಧಿಸುವುದನ್ನು ಒಗ್ಗೂಡಿಸಲು ಸಹಾಯಿಸುತ್ತಿರುವಂತಹ ಅಪ್ರಸ್ತುತತೆ ಅಧಿಕವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆರ್ಥಿಕ ಉದಾರೀಕರಣದ ಜೊತೆಗೆ ಆರ್ಥಿಕ ಬೆಳವಣಿಗೆಗೆ ಹಾಗೂ ಸಾರ್ವಜನಿಕ ಉದ್ಯಮದಲ್ಲಿ ಬಂಡವಾಳ ಹೂಡುವಿಕೆಯಿಂದ ರಾಜ್ಯ ಹಿಂತೆಗೆದುಕೊಳ್ಳುತ್ತಿರುವುದು ಬಹುಪಾಲು ಜನರ ಮೇಲೆ ಆಳವಾದ ಪರಿಣಾಮಗಳನ್ನು ಉಂಟುಮಾಡುತ್ತದೆ, ರಾಜ್ಯವೇ ಒಪ್ಪಿಕೊಂಡ ಹಾಗೆ ಮಹಿಳೆಯರು ಇದರಿಂದ ಬಲವಾದ ಪೆಟ್ಟನ್ನು ಅನುಭವಿಸುತ್ತಾರೆ.

ಈ ರೀತಿಯ ದೇಶದ ಆರ್ಥಿಕತೆಯ ವಿಶಾಲವಾದ ಬದಲಾವಣೆಗಳ ಹಾಗೂ ಬದಲಾದ ಜಗತ್ತಿನ ವ್ಯವಸ್ಥೆಯ ಹಿನ್ನೆಲೆಯಲ್ಲಿ ನಾವು ಮಹಿಳೆಯರ ಕುರಿತಾದ ರಾಜ್ಯದ ಪ್ರತಿಕ್ರಿಯೆ ರೂಪುಗೊಂಡಿರುವುದನ್ನು ಗಮನಿಸಬೇಕಾಗುತ್ತದೆ.

ಮಹಿಳೆಯರು ಮತ್ತು ಯೋಜನೆಯ ಮೊದಲ ಹಂತ

ಯೋಜನೆಯ ಮೊದಲ ಹಂತದಲ್ಲಿ ಕಲ್ಯಾಣಾಭಿವೃದ್ಧಿ ಪ್ರಸ್ತಾಪದೊಡನೆಯೇ "ಮಹಿಳೆಯರ ಪ್ರಶ್ನೆಯೂ" ಕಲ್ಯಾಣಾಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿಯೇ ನಿರ್ವಹಿಸಲ್ಪಡಬಹುದು ಎಂಬುದನ್ನು ಆರಿಸಲಾಗಿತ್ತು. ಬಡತನ ನಿರ್ಮೂಲನ ಹಾಗೂ ಭೂ ಸುಧಾರಣೆಗಳು ಮಹಿಳೆಯರನ್ನು ನಿರ್ಲಕ್ಷಿಸಿದ ಹಾಗೆ 'ಮಹಿಳೆಯರ ಉದ್ಧಾರ'ಕ್ಕಾಗಿಯೇ ಕೆಲವು ಸಮುದಾಯ ಅಭಿವೃದ್ಧಿ ಯೋಜನೆಗಳು ರೂಪಗೊಂಡವು.

ಮೊದಲ (1951-56) ಹಾಗೂ ಎರಡನೆಯ (1956-61) ಪಂಚವಾರ್ಷಿಕ ಯೋಜನೆಗಳು ಹೆಂಗಸರನ್ನು, ವಿಶೇಷವಾಗಿ ಹಳ್ಳಿಗಾಡು ಹೆಂಗಸರನ್ನು ಒಳಗೊಳ್ಳುವ ಸಲುವಾಗಿ ಮಹಿಳಾ ಮಂಡಲಗಳನ್ನು ಸ್ಥಾಪಿಸುವುದನ್ನು ಸಮರ್ಥಿಸಿದವು. 'ಅಮೇರಿಕಾದ ಹೋಲಿ ಸೈನ್ಸ್ ಎಕ್ಸ್‌ಟೇನ್‌ಷನ್' ಕಲ್ಪನೆಯನ್ನು ಸ್ವೀಕರಿಸಿಕೊಂಡು ಮಹಿಳೆಯರಿಗೆ ಹೊಲಿಯುವ, ತೋಟಗಾರಿಕೆ ಹಾಗೂ ಜಾಮ್ ಮಾಡುವಂತಹ ನೈಪುಣ್ಯತೆಗಳನ್ನು ಕಲಿಸಿಕೊಡಲಾಯಿತು. ಈ ಗ್ರಹಿಕೆಯು ಮಧ್ಯಮ ವರ್ಗದ ಮಹಿಳೆಯರಿಗೆ ದೊರಕುವ ವಿರಾಮ ವೇಳೆಯ ಕಲ್ಪನೆಯಲ್ಲಿ ರೂಪುಗೊಂಡಿದ್ದು, ಹಳ್ಳಿಗಾಡು ಮಹಿಳೆಯರ ಗೃಹ ಹಾಗೂ ವ್ಯವಸಾಯ ಸಂಬಂಧಿತ ಶ್ರಮದ ವಾಸ್ತವದ ಬದುಕಿಗೆ ಕುರುಡಾಗಿತ್ತು.

ಮೂರನೆಯ (1961–66) ಹಾಗೂ ನಾಲ್ಕನೆಯ (1969–74) ಪಂಚವಾರ್ಷಿಕ ಯೋಜನೆಗಳು ದೇಶದ ಆಹಾರ ಬಿಕ್ಕಟ್ಟು ಹಾಗೂ ಪತನಗೊಳ್ಳುತ್ತಿರುವ ಆರ್ಥಿಕತೆಯಲ್ಲಿ ನ್ಯಾಯಯುತ ಅಂಗೀಕಾರತ್ವವನ್ನು ತೋರಿಸಿಕೊಡಬೇಕಾದ ಸರ್ಕಾರಕ್ಕಿದ್ದ ಅಗತ್ಯದ ಹಂತದಲ್ಲಿ ರೂಪುಗೊಂಡವು. ಕೈಗಾರಿಕೋದ್ಯಮಕ್ಕೆ ಹಲವಾರು

ಬಗೆಯ ಸಂಪನ್ಮೂಲಗಳನ್ನು ಒದಗಿಸಿದ ಆರ್ಥಿಕ ನೀತಿಗಳ ಜೊತೆಯಲ್ಲಿಯೇ ಕೆಲವೇ ಮಹಿಳೆಯರಿಗೆ ಲಾಭದಾಯಕ ವಾದ ಸಮಾನ ವೇತನ, ಹೆರಿಗೆ ಭತ್ಯೆ – ಮಹಿಳಾ ವಿಶಿಷ್ಟ ಕಾರ್ಮಿಕ ಕಾನೂನುಗಳು ಅಸಂಘಟಿತ ಉದ್ಯಮದಲ್ಲಿ ಈ ಸಂದರ್ಭದಲ್ಲಿಯೇ ಜಾರಿಗೊಳಿಸಲ್ಪಟ್ಟವು. ಕುಟುಂಬ ಯೋಜನಾ ನೀತಿಗಳು ಹೆಚ್ಚಿನ ಪ್ರಮಾಣದಲ್ಲಿ ರೂಪು ಗೊಂಡು ಕುಟುಂಬ ಯೋಜನಾ ಕಲ್ಪನೆಯು ನಿರ್ದಿಷ್ಟ ಗುರಿ ತಲುಪುವುದಾಗಿದ್ದು 1971ರಲ್ಲಿ ಉದಾರ ನೀತಿಯ ಆಧಾರದ ಮೇಲೆ ಕುಟುಂಬ ಯೋಜನೆಯ ಭಾಗವಾಗಿ M.T.P. (ಗರ್ಭಪಾತದ) ಕಾನೂನನ್ನು ಜಾರಿಗೊಳಿಸ ಲಾಯಿತು.

ಕಲ್ಯಾಣ ಯೋಜನೆಯ ಕಲ್ಪನೆಯು 5ನೆಯ ಯೋಜನೆ ಯಲ್ಲಿಯೂ ಸಹ ಮುಂದುವರಿಯಿತು (1974–78). ಆದಾಗ್ಯೂ ಈ ಸಂದರ್ಭದ ಹೊತ್ತಿಗೆ ಹುಟ್ಟಿನ ಸಂಖ್ಯೆ ಯಲ್ಲಿ ಯೋಜಿಸಿದ್ದ ಗುರಿ 1000ಕ್ಕೆ 25ರಷ್ಟು ಕಡಿತ ಗೊಳಿಸುವುದು ಸಾಧ್ಯವಾಗಿರಲಿಲ್ಲ. ಆದ್ದರಿಂದ ಕುಟುಂಬ ಯೋಜನೆಯ ಕಾರ್ಯಕ್ರಮವನ್ನು ಹಿಂಸಾತ್ಮಕವಾಗಿ ನಡೆಸಲು ನಿರ್ಧರಿಸಲಾಯಿತು. ಒಂದು ಕಡೆ ಸಾರ್ವಜನಿಕ ಆರೋಗ್ಯ ಹಾಗೂ ಇನ್ನೊಂದೆಡೆ ಕುಟುಂಬ ಯೋಜನೆಯ ಮಧ್ಯದ ವೆಚ್ಚದ ಪ್ರಮಾಣದಲ್ಲಿದ್ದ ವಿಕೃತ/ವಿರೂಪ ರೂಪಗಳು ಹೆಚ್ಚು ಸ್ಪಷ್ಟವಾಗಿ ಕಂಡುಬಂದವು. ಒಟ್ಟು ಆರೋಗ್ಯ ನಿಧಿಯ ಮೊತ್ತದಲ್ಲಿ ಆರೋಗ್ಯಕ್ಕಾಗಿ ವ್ಯಯಿಸಿದ ವೆಚ್ಚದ ಪ್ರಮಾಣ 1951–56ರಲ್ಲಿ 64.5% ಇದ್ದುದು 1974–79ರಲ್ಲಿ 34.1% ಇಳಿದುಬಿಟ್ಟಿತ್ತು. ಜನಸಂಖ್ಯಾ ನಿಯಂತ್ರಣಕ್ಕೆ ವ್ಯಯಿಸಿದ್ದು 1951-56ರಲ್ಲಿ 0.5% ನಿಂದ 1974–79ರ ಹೊತ್ತಿಗೆ 22.1%ಗೆ ದೃಢ ವಾಗಿ ಬೆಳೆಯಲ್ಪಟ್ಟಿತು.

"ಮಹಿಳೆಯರಿಗೆ ಗೃಹಿಣಿಯರಾಗಿ ನಿಭಾಯಿಸಲು ನೈಪುಣ್ಯತೆ ಹಾಗೂ ಜ್ಞಾನ ಗಳಿಕೆಗೋಸ್ಕರ ಕಾರ್ಯಾಂಗ ಅಕ್ಷರ ಕಲಿಕೆಯ ಕಾರ್ಯಕ್ರಮವನ್ನು" ಐದನೆಯ ಯೋಜನೆಯು ಸಮರ್ಥಿಸಿದುದನ್ನೂ ಸಹ ನಾವು ಗಮನಕ್ಕೆ ತೆಗೆದುಕೊಳ್ಳಬಹುದಾಗಿದೆ.

ಮೊದಲೇ ತಿಳಿಸಿದ ಹಾಗೆ ಆರನೆಯ ಯೋಜನೆಯಷ್ಟ ರಲ್ಲಿ (1980–81) ಯೋಜನಾ ನೀತಿಯ ಭಾಷೆ ಯಲ್ಲಿ ಬದಲಾವಣೆಯಾಯಿತು. ಅತ್ಯಂತ ಮುಖ್ಯ ವಾಗಿ ಪ್ರಭಾವಿಸಿದ್ದ ವಿಚಾರವೆಂದರೆ ಯು.ಎನ್. ಅಂತರ್ ರಾಷ್ಟ್ರೀಯ ದಶಕವೆಂದು ಘೋಷಿಸಿದ್ದು. ಇದಕ್ಕಿಂತ ಮುಂಚಿತವಾಗಿಯೇ ಯು.ಎನ್.ನ ಬೇಡಿಕೆಯಿಂದಾಗಿ ರಾಜ್ಯವು ಭಾರತದ ಮಹಿಳೆಯರ ಸ್ಥಾನ-ಮಾನ ವಿವೇಚಿಸಲು ಒಂದು ಕಮಿಟಿಯನ್ನು ರಚಿಸಿತು (CSWI). ಈ ಕಮಿಟಿಯು "ಟು ವರ್ಡ್ಸ್ ಈಕ್ವಾಲಿಟಿ" ಎನ್ನುವಂತಹ ವ್ಯಾಪಕವಾಧ ವರದಿಯನ್ನು 1974ರ ಡಿಸೆಂಬರ್‌ನಲ್ಲಿ ಹೊರತಂದಿತು. ಈ ವರದಿಯು ಸಾಮಾಜಿಕ ಬದಲಾವಣೆ ಹಾಗೂ ರಾಷ್ಟ್ರೀಯ ಅಭಿವೃದ್ಧಿಯ ಪ್ರಚೋದಕ ಶಕ್ತಿ ಗಳು ಬಹುಪಾಲು ಮಹಿಳೆಯರಿಗೆ ಪ್ರತಿಕೂಲವಾಗಿ ಬಾಧಿಸಿರುವುದಲ್ಲದೇ ಹೆಂಗಸರ ಸ್ಥಾನ-ಮಾನಗಳಲ್ಲಿ ಹೆಚ್ಚಿನ ತಾರತಮ್ಯಗಳನ್ನು ಪರಿಚಯಿಸಿದಾವೆ ಎಂಬು ದನ್ನು ಸ್ಪಷ್ಟವಾಗಿ ತೋರಿಸಿತು.

ಈ ಸಂದರ್ಭದಲ್ಲಿ ಆರನೆಯ ಯೋಜನೆಯು (1980-85) "ಹೋಲಿಸ್ಟಿಕ್ ಡೆವಲಪ್‌ಮೆಂಟ್" ಯೋಜನೆ ಯನ್ನು ಸಮರ್ಥಿಸಿ ಆರೋಗ್ಯ, ವಿದ್ಯಾಭ್ಯಾಸ ಮತ್ತು ಕೆಲಸ ಇವುಗಳನ್ನು ಪ್ರಮುಖ ವಿಭಾಗಗಳೆಂದು ಗುರುತಿಸ ಲಾಯಿತು. ಈ ವಿಚಾರಗಳನ್ನೇ ಏಳನೆಯ ಯೋಜನೆ ಯಲ್ಲಿಯೂ ಸಹ ಮುಂದುವರಿಸಿಕೊಂಡು ಹೋಗ ಲಾಯಿತು. (1985–89)

ಇವೆಲ್ಲದರ ಫಲವಾಗಿ 80ರ ದಶಕವು ಯೋಜನೆ ಹಾಗೂ ಕಾರ್ಯಕ್ರಮಗಳ ಹಂತದಲ್ಲಿ 'ಮಹಿಳಾ ಅಭಿವೃದ್ಧಿ'ಯನ್ನು ಬೆಂಬಲಿಸಿದುದನ್ನು ಕಾಣಬಹುದು. ಮಹಿಳೆಯರ ಮೇಲಿನ ಹಿಂಸೆಗೆ ಸಂಬಂಧಿಸಿದಂತೆ ತುಂಡು-ತುಂಡಾದ ಕಾನೂನುಗಳು ಜಾರಿಗೆ ಬಂದವು. ಅಭಿವೃದ್ಧಿ ಕಲ್ಪನೆಯು ಮಹಿಳಾ ಸಶಕ್ತತೆಯೊಂದಿಗೆ 1986ರಲ್ಲಿ ರಾಷ್ಟ್ರೀಯ ಶಿಕ್ಷಣದ ಯೋಜನೆಯಲ್ಲಿ ಸ್ಥಾನ ಪಡೆಯಿತು. ಈ ಶಿಕ್ಷಣ ನೀತಿಯು ಮಹಿಳಾ ಸಶಕ್ತತೆಗೋಸ್ಕರ ಶಿಕ್ಷಣ ವನ್ನು ವೃತ್ತಿಪರಗೊಳಿಸುವುದನ್ನು ಸಮರ್ಥಿಸಿತು. ಮಹಿಳಾ ಅಭಿವೃದ್ಧಿ ಹಾಗೂ ಶಿಕ್ಷಣ ಕಾರ್ಯಕ್ರಮಗಳು ಪ್ರಾಯೋಗಾತ್ಮಕವಾಗಿ ಕೆಲವು ರಾಜ್ಯಗಳಲ್ಲಿ ಸ್ಥಾಪಿತ ಗೊಂಡವು. ಬಡತನ ನಿರ್ಮೂಲನ ಯೋಜನೆಯ ಪರಿಧಿಯನ್ನು ದ್ವಾಕ್ರಾ ಹಾಗೂ ಟ್ರೈಸೆಮ್‌ನಂತಹ ಸ್ಕೀಮ್‌ಗಳಿಂದ ಆರ್ಥಿಕ ಉತ್ಪನ್ನಗಳ ಯೋಜನೆಗಳನ್ನು ಒಳಗೊಳ್ಳುವಂತೆ ವಿಸ್ತರಿಸಲಾಯಿತು.

80ರಲ್ಲಿ ಮಹಿಳೆಯರ ಅಭಿವೃದ್ಧಿ

ಏಳನೆಯ ಯೋಜನೆಯ ಸಂದರ್ಭಕ್ಕಾಗಲೇ ಮಹಿಳೆ

ಯರು ಸಂಬಂಧವಾಗಿ ರಾಜ್ಯ ಹೇಳುವುದಕ್ಕೂ ಹಾಗೂ ವಾಸ್ತವವಾಗಿ ಮಾಡುತ್ತಿರುವುದಕ್ಕೂ ಸಾಕಷ್ಟು ಅಂತರ ವಿದೆ ಎಂಬುದು ನಿಚ್ಚಳವಾಯಿತು. ನಾಲ್ಕು ದಿಕ್ಕುಗಳು ಇದರಲ್ಲಿ ಮುಖ್ಯವಾದವುಗಳು. 80ರಲ್ಲಿ ಪ್ರಾರಂಭವಾದ ಆರ್ಥಿಕ ಉದಾರೀಕರಣ ನೀತಿಯು ಮಹಿಳೆಯರ ಶ್ರಮದ ಮೇಲೆ ಗುರುತರವಾದ ಪ್ರಭಾವವನ್ನು ಬೀರಿತು. ಆಧುನಿಕ ವ್ಯವಸಾಯದ ಮಾದರಿಯ ಅಳವಡಿಕೆಗಳು, ಹೊಸ ಬೆಳೆಯ ವಿಧಗಳು ಮತ್ತು ಹೊಸ ತಾಂತ್ರಿಕತೆಗಳು ಮಹಿಳೆಯರ ಶ್ರಮದ ಮೇಲೆ ಆಕ್ರಮಣ ನಡೆಸಿವೆ, ಹಳ್ಳಿ ಗಾಡು ಪ್ರದೇಶಗಳಲ್ಲಿ ಚೌಕಾಸಿ/ಕರಾರು ಅವಕಾಶಗಳೇ ಇಲ್ಲದಂತಹ ಕಾರ್ಪೆಟ್ ತಯಾರಿಸುವ, ಬೀಡಿ ಕಟ್ಟು ವಂತಹ ವ್ಯವಸಾಯೇತರ ಚಟುವಟಿಕೆಗಳಲ್ಲಿ ಹೆಂಗಸರ ಶ್ರಮ ಹೆಚ್ಚುತ್ತಿರುವುದು ಕಂಡುಬಂದಿದೆ.

ಪಟ್ಟಣದ ಪ್ರದೇಶಗಳಲ್ಲಿ ಆಧುನಿಕ ಕೈಗಾರಿಕಾ ಕ್ಷೇತ್ರದ ಖಾಸಗೀಕರಣ ದೆಚ್ಚುತ್ತಾ ಹೋದಂತೆ ಹೆಂಗಸರು ದಿನ ಗೂಲಿಗಳಾಗಬೇಕಾದುದು ಅನಿವಾರ್ಯವಾಗಿ ಹೆಚ್ಚುತ್ತಾ ಹೋಯಿತು. ಹೆಂಗಸರು ಅಸಂಘಟಿತ ಹಾಗೂ ವಿದ್ಯುಕ್ತ ವಲ್ಲದ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ತಳ್ಳ ಲ್ಪಟ್ಟರು. ಸಾಮಾಜಿಕ ಅಭದ್ರತೆ, ಕಡಿಮೆ ವೇತನ, ಅಧಿಕ ಕೆಲಸದ ಅವಧಿ ಹಾಗೂ ಒಂದಿಷ್ಟು ಕರಾರು/ ಚೌಕಾಸಿ ಅಧಿಕಾರ—ಇವು 80ರಲ್ಲಿ ಮಹಿಳೆಯರ ಕೆಲಸಗಳ ಮುಖ್ಯ ಲಕ್ಷಣಗಳಾದುವು. ಬದಲಾದ ಆರ್ಥಿಕತೆಯಿಂದ ಈ ವಿಭಾಗದ ಹೆಂಗಸರು 80ರಲ್ಲಿ ಹಲವಾರು ಹೋರಾಟ ಗಳಲ್ಲಿ ಭಾಗವಹಿಸಿದರು. ಬಹಳಷ್ಟು ಸಂದರ್ಭದಲ್ಲಿ ಇವರು ಬಲವತ್ತರವಾದ (Militant) ಹೋರಾಟಗಳನ್ನು ರಾಜ್ಯದ ವಿರುದ್ಧ ಮಾಡಿದರು. ಈ ದಶಕದಲ್ಲಿ ಹಳ್ಳಿ ಗಾಡು ಹಾಗೂ ಪಟ್ಟಣವಾಸಿ ಬಡ ರೈತರು, ಮೀನು ಗಾರರು, ಕಟ್ಟಡದ ಕೆಲಸಗಾರರು, ಸ್ವ–ಉದ್ಯೋಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಒಂದುಗೂಡಿದುದು ಕಂಡುಬರುತ್ತದೆ.

80ರಲ್ಲಿ ಕಣ್ಣಿಗೆ ಹೊಡೆಯುವಂತೆ ಇದ್ದ ಇನ್ನೊಂದು ಗುರುತರವಾದ ಸಂಗತಿಯೆಂದರೆ ಬಡಜನರು ಹಾಗೂ ಅನಕ್ಷರಸ್ಥ ಮಹಿಳೆಯರ ಮೇಲೆ ಬಲಾತ್ಕಾರವಾಗಿ ನಡೆಸಲು ಜನಸಂಖ್ಯಾ ನಿಯಂತ್ರಣದ ನೀತಿಯನ್ನು ಹೆಚ್ಚು ಬಿಗಿಗೊಳಿಸಲಾಯಿತು. ಹಾರ್ಮೋನುಗಳ ಮೇಲೆ ಹಾಗೂ ದೀರ್ಘ ಅವಧಿಯಲ್ಲಿ ಪ್ರಭಾವ ಮಾಡಬಲ್ಲಂತಹ ಹಾಗೂ ಹೆಂಗಸರಿಗೆ ತಾವೇ ನಿಯಂತ್ರಣ ಮಾಡಲಾಗ ದಂತಹ ಗರ್ಭನಿಯಂತ್ರಣಗಳ ತಾಂತ್ರಿಕತೆಯನ್ನು ಪರೀಕ್ಷೆಗೆ ಒಳಪಡಿಸದೇ ತರುವ ಪ್ರಯತ್ನಗಳು ಹೆಚ್ಚಾಗುತ್ತಾ ಹೋದ ಹಾಗೆ ವೈದ್ಯಕೀಯ ನೀತಿ/ ನಿಯಮಗಳು ಮುರಿಯಲ್ಪಟ್ಟವು ಇದಕ್ಕನುಗುಣವಾಗಿ ಆರೋಗ್ಯ ನಿಧಿ ಯೋಜನೆಯಿಂದ ಆರೋಗ್ಯದ ಮೇಲಿನ ವೆಚ್ಚ 1974–79ರಲ್ಲಿ 34.1% ಇದ್ದುದು 1986–91 ರಲ್ಲಿ 25.8%ಗೆ ಇಳಿಯಿತು. ಹಾಗೆಯೇ ಜನಸಂಖ್ಯಾ ನಿಯಂತ್ರಣ ವೆಚ್ಚವು 1974-79ರಲ್ಲಿ 22.1% ಇದ್ದುದು 1986-91ರಲ್ಲಿ 24.7%ಗೆ ಏರಿತು. ಹೀಗೆ ಜನರು ತಮ್ಮ ಕುಟುಂಬ ಸಂಖ್ಯೆಯನ್ನು ಮಿತಿಗೊಳಿಸುವತ್ತ ಸಂಪನ್ಮೂಲ ಗಳನ್ನು ತಿರುಗಿಸಿದುದರಿಂದ ಮೂಲಭೂತ ಆರೋಗ್ಯದ ಕಡೆಯ ಗಮನವನ್ನು ನಿರ್ಲಕ್ಷಿಸಲಾಯಿತು.

80ರ ದಶಕದ "ಮಹಿಳೆಯ ಅಭಿವೃದ್ಧಿ"ಯಲ್ಲಿ ಹೆಂಗಸರ ಮೇಲಿನ ಹಿಂಸೆಯು ಹೆಚ್ಚಾಯಿತು. ಹೆಂಗಸರ ಸಂಖ್ಯೆಯು 1981ರಲ್ಲಿ 1000ಕ್ಕೆ 934 ಆಗಿದ್ದು 1991 ರಲ್ಲಿ 1000ಕ್ಕೆ 927ರಷ್ಟು ಇಳಿದಿದೆ.

1961ರಲ್ಲಿ 133.55 ಲಕ್ಷ ಇದ್ದುದು 1991ರಲ್ಲಿ 318.49 ಲಕ್ಷಗಳಷ್ಟು 'ಕಾಣೆಯಾಗುತ್ತಿರುವ ಹೆಣ್ಣು ಮಕ್ಕಳ' ಸಂಖ್ಯೆಯ ಹೆಚ್ಚಳವನ್ನು ಇತ್ತೀಚಿನ ಗಣನೆ ತೋರಿಸಿದೆ. ನ್ಯೂನ್ಯ ಪೋಷಣೆಯ ಹಿಂಸೆಯ ಜೊತೆಗೆ ಭ್ರೂಣ ಹತ್ಯೆ ಹಾಗೂ ಹೆಣ್ಣು ಮಕ್ಕಳ ಕೊಲೆ ಎರಡು ಮುಖ್ಯ ಕಾರಣಗಳು ಹೆಣ್ಣು ಮಕ್ಕಳ ಬದುಕನ್ನು ತಿಂದು ಹಾಕುತ್ತಿವೆ. ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಯ ಘಟನೆಗಳೂ ಕೂಡಾ ನಾಟಕೀಯವಾಗಿ ಹೆಚ್ಚಾಗುತ್ತಲಿವೆ. 1992ರಲ್ಲಿ 11,112 ಅತ್ಯಾಚಾರದ ಪ್ರಕರಣಗಳು ಹಾಗೂ 31,000 ಹೆಣ್ಣು ಮಕ್ಕಳನ್ನು ದೈಹಿಕವಾಗಿ ಹಿಂಸಿಸಿದ ಪ್ರಕರಣಗಳು ವರದಿಯಾಗಿವೆ. 1983 ರಿಂದ 1991ರ ಮಧ್ಯದಲ್ಲಿ ವರದಕ್ಷಿಣೆ ಸಾವಿನ ಪ್ರಕರಣ 11 ಬಾರಿಯಷ್ಟು ಹೆಚ್ಚಾಗಿರುವುದು ಕಂಡು ಬರುತ್ತದೆ. ಹೀಗೆ ಹೆಂಗಸರ ಬದುಕಿನಲ್ಲಿರುವ ನ್ಯಾಯ ಬದ್ಧಗೊಳಿಸಿರುವ ಹಿಂಸೆಯನ್ನು ತೆಗೆದುಹಾಕಲಾಗಿದೆ ಎಂದು ಹೇಳಿಕೊಳ್ಳುತ್ತಿದ್ದರೂ, ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸೆಯನ್ನು ಎದುರಿಸುವಲ್ಲಿ ರಾಜ್ಯ ಇಚ್ಛೆ ತೋರದಿರುವುದು ಕಂಡುಬರುತ್ತದೆ.

ನಾಲ್ಕನೆಯ ಮುಖ್ಯ ಸಂಗತಿಯೆಂದರೆ ಮೂಲಭೂತ ವಾದದ ಬೆಳವಣಿಗೆ ಮತ್ತು ವಿಶಿಷ್ಟವಾಗಿ ಮಹಿಳೆಯರ

ಆಸಕ್ತಿಗಳನ್ನು ನೇರವಾಗಿ ಕಡೆಗಾಣಿಸುವ ರೀತಿಯಲ್ಲಿ ಕೋಮುವಾದಿಗಳ ಒತ್ತಡಗಳಿಗೆ ವಿಶೇಷ ರಿಯಾಯಿತಿಗಳನ್ನು ನೀಡುವಲ್ಲಿನ ರಾಜ್ಯದ ಪಾತ್ರಕ್ಕಾಗಿ 80ರ ದಶಕವನ್ನು ನೆನಪಿಸಿಕೊಳ್ಳಲಾಗುತ್ತದೆ. 1986ರಲ್ಲಿ ಮುಸ್ಲಿಂ ಮಹಿಳಾ ಬಿಲ್ ಜಾರಿಗೊಂಡುದದರಿಂದ ಜೀವನಾಂಶದ ವಿಚಾರವು ಸೆಕ್ಯೂಲರ್ ಪರಿಧಿಯಿಂದ ಮೂಲಭೂತವಾದಿಗಳ ಮಡಿಲಿಗೆ ಜಾರಲ್ಪಟ್ಟಿತು ಮತ್ತೆ ಪಿತೃಪ್ರಧಾನ್ಯ ಹಾಗೂ ಪರಂಪರೆಗಳನ್ನು ರಾಜ್ಯ ಸ್ಪಷ್ಟವಾಗಿ ಬಲಪಡಿಸಿತು. ಹೀಗೆಯೇ 1987ರಲ್ಲಿ ರಾಜ್ಯವು ಸತಿ ಪದ್ಧತಿಯ ವೈಭವತ್ವವನ್ನು ಶಿಕ್ಷಿಸಲು ತಿರಸ್ಕರಿಸಿದ್ದು ವಿಧವಾ ಹತ್ಯೆಯಿಂದ ಲಾಭ ಪಡೆಯಲು ಹವಣಿಸಿದ್ದ ಧರ್ಮ ಹಾಗೂ ವಾಣಿಜ್ಯಕ್ಕೆ ಜೊತೆಯಾಗಿ ದಕ್ಕಿದ ವಿಜಯವಾಗಿತ್ತು.

ಶ್ರಮ ಶಕ್ತಿ ಮತ್ತು ರಾಷ್ಟ್ರೀಯ ತಾತ್ವಿಕ ಯೋಜನೆ

ಏಳನೆಯ ಯೋಜನೆಯ ಕೊನೆಯ ವೇಳೆಗೆ ರಾಜ್ಯವು ಸ್ವ-ಉದ್ಯೋಗಿ ಹಾಗೂ ವಿದ್ಯುಕ್ತವಲ್ಲದ ಕ್ಷೇತ್ರಗಳಲ್ಲಿರುವ ಮಹಿಳೆಯರ ಸ್ಥಾನ-ಮಾನಗಳನ್ನು ವಿವೇಚಿಸಲು ಒಂದು ರಾಷ್ಟ್ರೀಯ ಕಮೀಷನ್ನನ್ನು ಸ್ಥಾಪಿಸಿತು. ಮೊದಲೇ ಗಮನಿಸಿದ ಹಾಗೆ 80ರಲ್ಲಿ ರಾಜ್ಯವು ಖಾಸಗೀ ಬಂಡವಾಳವನ್ನು ದಿನಕೂಲಿಯಿಂದ ಹೆಚ್ಚಿಸುವ ವಿದ್ಯುಕ್ತವಲ್ಲದ ಕ್ಷೇತ್ರ ಹೆಚ್ಚಿಸುವಲ್ಲಿ ಚುರುಕಾಗಿಯೇ ಮಧ್ಯ ಪ್ರವೇಶ ಮಾಡಿತ್ತು. ಸಂಘಟಿತ ಕ್ಷೇತ್ರದಲ್ಲಿ ಉತ್ಪಾದನೆ ಕಡಿಮೆಯಾದ ಹಾಗೆ ಲೆಕ್ಕಾಚಾರಕ್ಕಾಗಿಯಾದರೂ 'ಉತ್ಪಾದನಾ ಕೆಲಸ'ದ ಪರಿಧಿ ಹೆಚ್ಚಿಸುವ ಪ್ರಯತ್ನಗಳನ್ನು ಮಾಡಲೇ ಬೇಕಿತ್ತು. ಇದರ ಜೊತೆಗೆ ರಾಜ್ಯ ನೀತಿಯ ನ್ಯಾಯತ್ವಕ್ಕೆ ಭಯ ಹುಟ್ಟಿಸುವ ಅಸಂಘಟಿತ ಕ್ಷೇತ್ರದ ವಿರೋಧ ಕೂಡಾ ಕಂಡುಬಂದಿತು. ರಾಜ್ಯದ ಬೃಹತ್ ಯೋಜನೆಗಳ ಬಗೆಗಿನ ಟೀಕೆಗಳನ್ನು ಮುಚ್ಚಿಹಾಕಲು ಮಾಡಿದ ಸಹಕಾರ ಕಾರ್ಯಕ್ರಮಗಳ ಸಂದರ್ಭದಲ್ಲಿ ನ್ಯಾಷನಲ್ ಕಮಿಷನ್ ಸ್ಥಾಪಿತವಾಯಿತು.

ಬಹುತೇಕ ಮಹಿಳೆಯರು-90% ಅಸಂಘಟಿತ ಕ್ಷೇತ್ರಗಳಲ್ಲಿಯೇ ದುಡಿಯುವ ಮಹಿಳೆಯರ ಕುರಿತಾದ-ರಾಜ್ಯವು ಅವಶ್ಯ ಬಿದ್ದಾಗ ರೂಪಿಸಿದ ಯೋಜನೆಯ ಸಂಪೂರ್ಣ ಕ್ರಮಬದ್ಧ ಆಪಾದನೆಯಾಗಿದ್ದ ಈ ನ್ಯಾಷನಲ್ ಕಮಿಷನ್‌ನ ಶ್ರಮಶಕ್ತಿ ವರದಿಯು 1988ರಲ್ಲಿ ಬಿಡುಗಡೆಯಾಯಿತು. 80ರಲ್ಲಿ ಮಹಿಳೆಯರಿಗೋಸ್ಕರವೇ ಪ್ರಾರಂಭವಾದ ಬಡತನ ನಿರ್ಮೂಲನ ಹಾಗೂ ಆದಾಯ ಉತ್ಪನ್ನ ಯೋಜನೆಗಳು ನಿರುದ್ಯೋಗ ಸಮಸ್ಯೆಯ ಹೊರ ಮೈ ತಟ್ಟಲೂ ಕೂಡಾ ಅಸಮರ್ಥವಾಗಿವೆ ಎಂದು ಈ ವರದಿಯು ಹೇಳಿತು. ರಾಜ್ಯದ ಬೃಹತ್ ಯೋಜನೆಗಳ ಮರು ಪರಿಶೀಲನೆ ಹಾಗೂ ನಿರ್ಲಕ್ಷಿಸಲ್ಪಟ್ಟ ಕೆಲಸಗಾರರಿಗೆ ರಕ್ಷಣೆ ಒದಗಿಸುವಲ್ಲಿ ರಾಜ್ಯದ ಹೊಣೆಗಾರಿಕೆ ಹಾಗೂ ತೊಡಗಿಸಿಕೊಳ್ಳುವಿಕೆ ಅಗತ್ಯವಿದೆಯೆಂದು ಈ ವರದಿಯು ಕರೆ ಇತ್ತಿತ್ತು.

ಬರುವ ದಶಕದ ಯೋಜನೆಗೆ ಮಾರ್ಗದರ್ಶಿಯಾಗ ಬಲ್ಲಂತಹ ದಾಖಲೆಯಾದ ಮಹಿಳೆಯರಿಗಾಗಿ ರಾಷ್ಟ್ರೀಯ ತಾತ್ವಿಕ ಯೋಜನೆಯನ್ನು (National perspection plan for women) ರಾಜ್ಯವು 1988ರಲ್ಲಿಯೇ ಪ್ರಕಟಿಸಿತು. ಶ್ರಮಶಕ್ತಿ ವರದಿ ಹಾಗೂ ಮುಂಚಿತವಾಗಿ ಬಂದಿದ್ದ C S.W I. ವರದಿಗೆ ಸಂಪೂರ್ಣ ವಿರೋಧವಾಗಿ ಈ N.P.P.ಯು ರಾಜ್ಯದ ಬೃಹತ್ ಯೋಜನೆಗಳನ್ನು ಸಂಪೂರ್ಣವಾಗಿ ಬೆಂಬಲಿಸಿತು.

N.P.P.ಯು 'ಆರ್ಥಿಕ ಅಭಿವೃದ್ಧಿ' ಮತ್ತು 'ಆರ್ಥಿಕತೆಯೊಳಗೆ ಮಹಿಳೆಯರನ್ನು ಒಳಗೊಳ್ಳುವ' ಯತ್ನಕ್ಕೆ ಕರೆಕೊಟ್ಟಿತು. ಈ ರೀತಿಯ ಮುಖ್ಯವಾಹಿನಿಯ ಅಭಿವೃದ್ಧಿಯ ಫಲವಾಗಿಯೇ ಮಹಿಳೆಯರ ಕಡೆಗಾಣಿಸುವಿಕೆ ನಡೆದಿದೆ ಎಂಬ ವಾಸ್ತವವನ್ನು-ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವ ಶಿಫಾರಸ್ಸುಗಳು ಸಂಪೂರ್ಣವಾಗಿ ನಿರ್ಲಕ್ಷಿಸಿವೆ ಎಂಬ ತೀಕ್ಷ್ಣವಾದ ಟೀಕೆಯನ್ನು ಮಹಿಳಾ ಸಂಘಟನೆಗಳು ತಕ್ಷಣವಾಗಿ N.P.P.ಯ ಬಗ್ಗೆ ವ್ಯಕ್ತಪಡಿಸಿದವು. N.P.P.ಯು ಬರಲಿದ್ದುದರ ರುಚಿಯನ್ನು ಆಗಲೇ ನಮಗೆ ನೀಡಿತ್ತು. ಆರ್ಥಿಕ ಅಭಿವೃದ್ಧಿಯು ಬೃಹತ್ ಯೋಜನೆಗಳನ್ನು ನಿರ್ದಾಕ್ಷಿಣ್ಯವಾಗಿ ಅನುಸರಿಸಿದ್ದಲ್ಲದೇ ರಾಜನಿಕ ಹೊಂದಾಣಿಕೆಯ ಯೋಜನೆಯ ಅಡಿ ಆರ್ಥಿಕ ಉದಾರೀಕರಣ ನೀತಿ ತಂದುದು ಈ ದಿಕ್ಕಿನಲ್ಲಿ ನಡೆದ ದೊಡ್ಡ ಹಾರುವಿಕೆಯೇ ಅಗಿತ್ತು.

ಎರಡನೆಯ ಯೋಜನೆಯು(1992-96) ಅಭಿವೃದ್ಧಿ ಯೋಜನೆಗೆ ವಿರುದ್ಧವಾಗಿ 'ಮಹಿಳೆಯರ ಸಶಕ್ತತೆ' ಯೋಜನೆಯನ್ನು ಜಾರಿಗೊಳಿಸಿತು. ಮೊದಲೇ ಗಮನಿಸಿದ ಹಾಗೆ ದೇಶದ ಹಾಗೂ ಪ್ರಪಂಚದ ರಾಜಕೀಯ ಆರ್ಥಿಕತೆಗಳಲ್ಲಿ ನಡೆದ ಆಳವಾದ ಬದಲಾವಣೆ

ಗಳಲ್ಲಿನಂತಹ ನಿರ್ದಿಷ್ಟವಾದ ಸಂದರ್ಭದಲ್ಲಿಯೇ ಭಾಷೆಯಲ್ಲಿನ ಬದಲಾವಣೆ ನಡೆಯುತ್ತಿದೆ.

'ಮಹಿಳಾ ಸಶಕ್ತತೆ'ಯ ಕಲ್ಪನೆಯು ಮಹಿಳಾ ಚಳುವಳಿಯ ಆಶಯಗಳನ್ನು ಹೋಲುವ ರೀತಿಯಲ್ಲಿಯೇ ಕಾಣಿಸಿಕೊಂಡಿದ್ದರಿಂದ ಹಾಗೂ ಸ್ವಾಯತ್ತ ಕ್ಷೇತ್ರಗಳಲ್ಲಿ ಇದು ಸುಲಭ ಒಪ್ಪಿಗೆ ಪಡೆಯುತ್ತಿರುವುದರಿಂದ ಈ ಕಲ್ಪನೆಯನ್ನು ಜಾಗರೂಕತೆಯಿಂದ ವೀಕ್ಷಿಸಬೇಕಾಗುತ್ತದೆ.

'ಯಾರ ಸಶಕ್ತತೆ' – ?

ಮೂಲಭೂತವಾಗಿ ಮಾರುಕಟ್ಟೆಗೆ ಪ್ರಾಮುಖ್ಯತೆ ನೀಡಿದ ಮೂರು ಯುನೈಟೆಡ್ ನೇಷನ್ಸ್‌ನ ಕಾನ್‌ಫರೆನ್ಸ್‌ನ ಹೇಳಿಕೆಗಳಿಗೆ ಇಂಡಿಯ ಸಹಿದಾರನಾಗಿದೆ. ಪ್ರತಿಯೊಂದು ಹೇಳಿಕೆಗಳಲ್ಲಿಯೂ 'ಸಶಕ್ತತೆ'ಯು ಮೂಲಭೂತವಾಗಿರುವ ಝೇಂಕಾರದ ಪದವಾಗಿದೆ. ಯಾವ ಸಂದರ್ಭದಲ್ಲಿ ಸಶಕ್ತತೆಯನ್ನು ಬೇಕು ಎಂದು ನೋಡಲಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ. ಕೋಪನ್ ಹೇಗನ್ ಸಾಮಾಜಿಕ ಶೃಂಗಸಭೆಯು ಹೇಳಿಕೆ ನೀಡುತ್ತದೆ, "ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳೆರಡರಲ್ಲೂ ಜನರ ಸಾಮರ್ಥ್ಯಗಳು, ಸಂಪನ್ಮೂಲಗಳು ಹಾಗೂ ಅವಕಾಶಗಳನ್ನು ಅತ್ಯುನ್ನತಗೊಳಿಸಲು ಜನರನ್ನು ಸಶಕ್ತಗೊಳಿಸುವಂತಹ ಉಚ್ಚ ಉತ್ಪಾದನಾ ನೀತಿಗಳು ಹಾಗೂ ಹಣ ವ್ಯಯಿಸುವಿಕೆ". ಈ ರೀತಿಯಾಗಿ ಅಭಿವೃದ್ಧಿಯನ್ನು ಹೆಚ್ಚು ಮಾಡುವುದಕ್ಕೋಸ್ಕರ ಸ್ಪಷ್ಟವಾದ ಸಶಕ್ತತೆಯು ಒಂದು ತಂತ್ರವಾಗಿದೆ ಹಾಗೂ ಇದು ಮುಕ್ತ–ಆರ್ಥಿಕ ಒತ್ತಡಗಳಿಗೆ ನೇರವಾಗಿ ಅಂಟಿಕೊಂಡಿದೆ.

W T.O. ನಂತಹ ಹಣಕಾಸು ಹಾಗೂ ವಾಣಿಜ್ಯ ಲಾಬಿಗಳಿಂದ ಮಾದರಿಯುತ ಮೂರನೆಯ ಜಗತ್ತಿನ ರಾಷ್ಟ್ರದ ಅಧಿಕಾರ ಹಾಗೂ ನ್ಯಾಯಾಧಿಕಾರ ಕಳೆತಳ್ಳಲ್ಪಟ್ಟಂತಹ ಸಂದರ್ಭದಲ್ಲಿ ಸಶಕ್ತತೆಯು ಒಂದು ಉಪಯುಕ್ತ ಕಲ್ಪನೆಯಾಗಿ ಮೂಡಿ ಬಂತು. ಈ ಸಶಕ್ತತೆಯ ಕಲ್ಪನೆಯು ಸಾಮಾಜಿಕ ಪ್ರಗತಿಗೆ ರಾಜ್ಯಕ್ಕಿದ್ದ ಹೊಣೆಗಾರಿಕೆಯನ್ನು ವ್ಯಕ್ತಿಗೆ ಬದಲಾಯಿಸಿತು. ರಾಜ್ಯದಿಂದ ವಾಸ್ತವದಲ್ಲಿ ಎಷ್ಟೇ ಕೆಟ್ಟದ್ದಾಗಿ ಜಾರಿಗೊಂಡಿದ್ದರೂ 'ಸಮುದಾಯ ಪ್ರಗತಿ'ಯ ಗ್ರಹಿಕೆ ಸಾಮಾಜಿಕ ನ್ಯಾಯದ ನಿರೀಕ್ಷಣಗಳನ್ನು ಒಳಗೊಂಡಿದ್ದರೆ 'ಸಶಕ್ತತೆ'ಯಲ್ಲಿ ಅಡಕವಾಗಿರುವ 'ವೃತ್ತಿ ಪ್ರಗತಿ'ಯು ಯಾವುದೇ ರೀತಿಯ 'ಸಾಮಾಜಿಕ' ನ್ಯಾಯದ ಅಗತ್ಯವನ್ನು ಅವಶ್ಯವಿಲ್ಲದಂತೆ ಮಾಡಿದೆ.

ಯಾವಾಗ ರಾಜ್ಯವು ಮಹಿಳೆಯರಿಗಾಗಿ ಸಶಕ್ತತೆಯನ್ನು ಪಣಕ್ಕೊಡ್ಡಿತೋ ಆಗ ಇದು ದೊಡ್ಡದಾಗಿ ಕಂಡಿದ್ದರೂ ಇದರ ಎಲ್ಲಾ ರೀತಿ ಬಳಸಲ್ಪಡಬಹುದಾದ ರೀತಿಯಿಂದಾಗಿ ಇದು ಅರ್ಥಹೀನ ಪದವಾಯಿತು. ಲಾಭಗಳನ್ನು ಹಾಗೂ ಬಹುಪಾಲು ಮಹಿಳೆಯರ ಸಂಪನ್ಮೂಲಗಳ ಪ್ರವೇಶಿಕೆಗೆ ತಡೆಯೊಡ್ಡುವ ಅಸಮಾನತೆಗಳನ್ನು ಅಥವಾ ಶೋಷಣೆಯ ರಚನೆಗಳನ್ನು ಇದು ಗಣನೆಗೆ ತೆಗೆದುಕೊಳ್ಳುವುದಿಲ್ಲ. (ರಾಜ್ಯದ ರಚನೆಯೇ ಇದಕ್ಕೊಂದು ಉದಾಹರಣೆಯಾಗಿದೆ). ಇದು ಮಹಿಳೆಯರೆಲ್ಲರನ್ನೂ ಒಂದೇ ಪಂಗಡಕ್ಕೆ ಇಳಿಸಿಬಿಡುತ್ತದೆ. ಮತ್ತು ಹೆಂಗಸರನ್ನು ಬೇರ್ಪಡಿಸುವ ವರ್ಗ, ಜಾತಿ ಮತ್ತು ಧರ್ಮಗಳ ಆಳವಾದ ವರ್ಗೀಕರಣವನ್ನು ನಿರ್ಲಕ್ಷಿಸುತ್ತದೆ. ಅದು 'ಅಭಿವೃದ್ಧಿ'ಯಾಗಲೀ ಅಥವಾ 'ಸಶಕ್ತತೆ'ಯಾಗಲೀ ಎಲ್ಲಾ ಮಹಿಳೆಯರಿಗಾಗಿ ಎನ್ನುವ ಯಾವುದೋ ಒಂದು ಆಮ್ನಿ ಬಸ್ ತಂತ್ರವನ್ನು ನೀಡುತ್ತದೆ. ವರ್ಗೀಕರಣದ ಅಸ್ತಿತ್ವವೇ ಇದಕ್ಕೆ ತಕ್ಷಣದ ವಿರೋಧಾಭಾಸವನ್ನು ವ್ಯಕ್ತಪಡಿಸುತ್ತದೆ.

ಮಹಿಳಾ ಸಶಕ್ತತೆಯನ್ನು ಸ್ಪಷ್ಟವಾಗಿ ಸರ್ಕಾರೇತರ ಗುಂಪುಗಳನ್ನು ಒಳಗೊಳ್ಳುವ ಮೂಲಕವೇ ಸಾಧಿಸುವುದು ಅನಿವಾರ್ಯವಾಯಿತು. ಆರ್ಥಿಕ ಅಭಿವೃದ್ಧಿ ಸಾಮಾಜಿಕ ಕ್ಷೇತ್ರಗಳಲ್ಲಿ ಹಣ ವ್ಯಯಿಸುವಿಕೆಯ ಜೊತೆಗೆಯೇ ಸಮುದಾಯ ಪ್ರಗತಿಗಳಿಂದ ರಾಜ್ಯವು ಹಿಂತೆಗೆಯುವುದರ ಜೊತೆಗೆ ಇದ್ದ ಈ ಸಲಹೆಯನ್ನು 8ನೆಯ ಯೋಜನೆಯಲ್ಲಿ ಬಲವಾಗಿ ಸಮರ್ಥಿಸಲಾಯಿತು. ಹಲವಾರು ವರ್ಷಗಳಿಂದ ಒಂದು ತಳಪಾಯ ಬೆಳೆಸಿಕೊಂಡಿರುವ, ಅಲ್ಪ ಸಂಬಳ, ಹಾಗೂ ಅಸಂಘಟಿತರಾದಾಗ್ಯೂ ಸಿದ್ಧ ಕೆಲಸಗಾರರನ್ನು ಒಳಗೊಳ್ಳುವ, ಜನರಿಂದ ಒಳ್ಳೆಯವರೆನಿಸಿಕೊಂಡ, ಆದರೆ ತುಂಬಾ ಮುಖ್ಯವಾಗಿ ಸಾರ್ವಜನಿಕರಿಗೆ ಯಾವುದೇ ಹೊಣೆಗಾರಿಕೆ ಹೊಂದಿರದ ಸರ್ಕಾರೇತರ ಸಂಸ್ಥೆಗಳ ಒಳಗೊಳ್ಳುವಿಕೆ ಕೆಲವು ರಾಜಕೀಯ ಕಾರ್ಯಕ್ರಮಗಳ ರೂಪರೇಖೆಗಳನ್ನೇ ಹೊಂದಿಸಿಬಿಡುವ ಬಲವಾದ ತಂತ್ರವಾಗಿದೆ.

"ರಾಚನಿಕ ಹೊಂದಾಣಿಕೆ ಕಾರ್ಯಕ್ರಮದ ನಂತರದ ಅಭಿವೃದ್ಧಿಗಳು ಮತ್ತು ಮಹಿಳೆಯರು"

ರಾಚನಿಕ ಹೊಂದಾಣಿಕೆ ಕಾರ್ಯಕ್ರಮದ ಸಂದರ್ಭದಲ್ಲಿ 'ಸಶಕ್ತತೆ'ಯ ಅವಧಿಯಲ್ಲಿ ನಡೆದ ಕೆಲವು ಅಭಿವೃದ್ಧಿಗಳು ಮರುವೀಕ್ಷಣೆಗೆ ಯೋಗ್ಯವಾಗಿವೆ. ಶಿಕ್ಷಣ ರಂಗದಲ್ಲಿ ಇದ್ದ ಬಜೆಟ್ ಹಂಚಿಕೆಗಳು ಇಳಿಮುಖವಾಗಿವೆ. ಇಂದಿನ ಯೋಜನೆಯು ಒಟ್ಟು ವೆಚ್ಚದ 3%ನ್ನು ಮಾತ್ರ ಶಿಕ್ಷಣಕ್ಕೆ ಹಂಚಿದೆ. ಐದನೆಯ ಯೋಜನೆಯಲ್ಲಿ ಮಹಿಳೆಯರ ಸಶಕ್ತತೆಗೆ ಪಕ್ವ ಗುರಿ ಎಂದುಕೊಂಡಿದ್ದ ವೃತ್ತಿದಾಯಕ ತಂತ್ರಕ್ಕೆ ಬಜೆಟ್ ಹೆಚ್ಚಿಸುವ ಬದಲು ಕಡಿತಗೊಳಿಸಲಾಯಿತು. ವೃತ್ತಿದಾಯಕ ಶಿಕ್ಷಣದಲ್ಲಿ ಹಂಚುವಿಕೆಯು 1994–95ರಲ್ಲಿ 88.5ಕೋಟಿ ಇದ್ದುದು 1995–96ರಲ್ಲಿ 82 ಕೋಟಿಗೆ ಇಳಿಯಿತು.

ಹತ್ತಿರ ಹತ್ತಿರ ಎರಡು ದಶಕಗಳ 'ಜೆಂಡರ್-ಸೆನ್ಸಿಟಿವಿಟಿ' ಶಿಕ್ಷಣದ ಯೋಜನೆಯ ನಂತರವೂ 60%ಮಹಿಳಾ ಅನಕ್ಷರತೆಯನ್ನು ನಾವು ಹೊಂದಿದ್ದೇವೆ. ಉನ್ನತ ಪ್ರಾಥಮಿಕ ಶಿಕ್ಷಣದ ಹಂತ ಮುಟ್ಟುವ ಮೊದಲೇ ಶಾಲೆ ಬಿಟ್ಟುಬಿಡುವ ಹುಡುಗಿಯರ ಸಂಖ್ಯೆ 57% ಹಾಗೂ ಎಸ್.ಸಿ./ಎಸ್.ಟಿ. ವಂಗಡಗಳಲ್ಲಿ 90% ಮಹಿಳಾ ಅನರಕ್ಷರತೆ ಇರುವುದು ಆಘಾತಕರ ವಿಚಾರವಾಗಿದೆ.

ಆರೋಗ್ಯ ಕ್ಷೇತ್ರದಲ್ಲಿ, ಆರೋಗ್ಯ ನಿಧಿಯಿಂದ, ಆರೋಗ್ಯದ ಮೇಲಾದ ವೆಚ್ಚದ ಪ್ರಮಾಣವು 1951–56ರಲ್ಲಿ 64.5% ಇದ್ದುದು, 1991-92ರಲ್ಲಿ 24-6%ಗೆ ಇಳಿದಿದೆ. ಜನಸಂಖ್ಯಾ ನಿಯಂತ್ರಣದ ವೆಚ್ಚವು 1951-56ರಲ್ಲಿ 0.5% ಇದ್ದುದು 1991–92ರಲ್ಲಿ 21.1%ಗೆ ಏರಿದೆ.

ಬಹು ರಾಷ್ಟ್ರೀಯ ಕಂಪನಿಗಳಾದ ಅಪ್‌ಜಾನ್ ಲಿಮಿಟೆಡ್, ಡಿಪೋ ಪ್ರೋವೇರಾದಂತಹ ಅಪಾಯಕಾರಿ ಕುಟುಂಬ ನಿಯಂತ್ರಣದ ನಿರ್ಮಾತೃಗಳಿಗೆ ಅವರ ವಸ್ತುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಲು ಅವಕಾಶ ವಿತ್ತಾಗಿನಿಂದ ಮುಕ್ತ ಆರ್ಥಿಕ ನೀತಿಯು ಮಹಿಳೆಯರ ಆರೋಗ್ಯದ ಮೇಲೆ ನೇರವಾದ ಪ್ರಭಾವ ಹೊಂದಿದೆ. ಮುಕ್ತ ಮಾರುಕಟ್ಟೆಯಲ್ಲಿ ದೊರೆಯುವ ದೀರ್ಘಕಾಲದ ಹಾಗು, ಹಾರ್ಮೋನಲ್ ಗರ್ಭ ನಿಯಂತ್ರಣಗಳು ಬಡ ಮಹಿಳೆಯರಲ್ಲಿ ಸಾಂಕ್ರಾಮಿಕ ಪ್ರಮಾಣದಲ್ಲಿ ಅನಾರೋಗ್ಯ ಹರಡುವುದಕ್ಕೆ ಸಾಮರ್ಥ್ಯ ಹೊಂದಿವೆ. ಜಾಗತಿಕ ಬ್ಯಾಂಕ್ ಭಾರತದ ಆರೋಗ್ಯ ಕ್ಷೇತ್ರಕ್ಕೆ ಸೂಚಿಸಿದ ಸಲಹೆಗಳಿಗೆ ಆಜ್ಞಾನುವರ್ತಿಯಾಗಿಯೇ ರಾಜ್ಯವು ಜನಸಂಖ್ಯಾ ನಿಯಂತ್ರಣವನ್ನು ಹೆಚ್ಚಿಸಲು ಇಚ್ಛಿಸುತ್ತದೆ ಎಂಬುದು 1993ರಲ್ಲಿ ಜನಸಂಖ್ಯಾ, ಪಾಲಿಸಿಯ ಮೇಲೆ ಸ್ವಾಮಿನಾಥನ್ ಕಮಿಟಿ ಮುಂದಿಟ್ಟ ಸಲಹೆಗಳಿಂದ ಸ್ಪಷ್ಟವಾಗುತ್ತದೆ. ಎರಡಕ್ಕಿಂತ ಹೆಚ್ಚು ಮಕ್ಕಳಿರುವವರನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ನಿಷೇಧಿಸುವಂತಹ ಹಾಗೂ ಜನರ ಕುಟುಂಬದ ಸಂಖ್ಯೆ ಮಿತಿಗೊಳಿಸಲು ಸೈನ್ಯ ಹಾಗೂ ಪ್ಯಾರಾ ಮಿಲಿಟರಿ ಒತ್ತಡಗಳನ್ನು ಬಳಸುವಂತಹ ಪೂರ್ವಭಾವಿಯಾಗಿರದ ರೀತಿಯ ಹಿಂಸೆಗಳನ್ನು ಕಮಿಟಿಯು ಸಲಹೆಯು ಒಳಗೊಂಡಿತ್ತು. 90ರಲ್ಲಿ ಹಳ್ಳಿಗಾಡು ಮಹಿಳೆಯರು ಸ್ವಉದ್ಯೋಗಿಗಳಾಗುತ್ತಿರುವುದು ಇದ್ದಕ್ಕಿದ್ದ ಹಾಗೆ ಹೆಚ್ಚಾಗತೊಡಗಿದೆ, ವ್ಯವಸಾಯೇತರ ಚಟುವಟಿಕೆಗಳು ಅಲ್ಪ ಆದಾಯ ಹಾಗೂ ಅಲ್ಪ ಉತ್ಪಾದನಾ ಲಕ್ಷಣಗಳನ್ನು ಹೊಂದಿವೆ; ನಗರ ಮಹಿಳಾ ಕಾರ್ಮಿಕರು ಹೆಚ್ಚು ಹೆಚ್ಚಾಗಿ ದಿನಗೂಲಿಗಳಾಗಿ ದುಡಿಯುತ್ತಿದ್ದಾರೆ.

ತಿಂಗಳಿಗೆ ಸರಾಸರಿ ಸೇವಿಸುತ್ತಿದ್ದ ಆಹಾರ ಧಾನ್ಯಗಳು 1989-90ರಲ್ಲಿ 14.0 ಕಿಲೋ ಇದ್ದುದು 1992ರಲ್ಲಿ 13.5 ಕಿ.ಲೋ.ಗೆ ಇಳಿದುದು ಕಂಡುಬರುತ್ತದೆ. ಪಟ್ಟಣ ಪ್ರದೇಶಗಳಲ್ಲಿ ಇದು 1989-90ರಲ್ಲಿ 11ಕಿ.ಲೋ.ಇದ್ದುದು 1992ರಲ್ಲಿ 10.7 ಕಿ.ಲೋಗೆ ಇಳಿಯಿತು. ಬಡವರ ಕೊಳ್ಳುವ ಶಕ್ತಿ ಇಳಿಮುಖವಾಗಿರುವುದನ್ನು ಅಗತ್ಯವಾಗಿ ತೋರಿಸುವ ಆಹಾರಧಾನ್ಯ. ಆಹಾರಧಾನ್ಯ ಸಂಗ್ರಹಣೆ ಸಾಕಷ್ಟು ಇದೆ ಎಂದು ಸರ್ಕಾರ ಹೇಳಿಕೊಂಡಾಗ್ಯೂ ಸಹ ನಿರಂತರವಾಗಿ ಆಹಾರಧಾನ್ಯ ಸೇವಿಸುವಿಕೆಯಲ್ಲಿ ಇಳಿಮುಖವಾಗಿದೆ. ಈ ರೀತಿಯಾಗಿ ರಾಚನಿಕ ಹೊಂದಾಣಿಕೆ ಕಾರ್ಯಕ್ರಮದ ನಂತರದ ದಿನಗಳಲ್ಲಿ ಬಡವರು ಕಡಿಮೆ ಎನ್ನುವುದರ ಮೂಲಕ ಬದುಕಲು ಪ್ರಯತ್ನಿಸುತ್ತಿದ್ದಾರೆ. ಆದಾಗ್ಯೂ ಗೊತ್ತಿರುವ ಸಂಗತಿಯೆಂದರೆ ಮನೆಗಳಲ್ಲಿ ಆಹಾರ ಸೇವಿಸುವಿಕೆ ಕಡಿಮೆಯಾಗುವುದು ಎಂದರೆ ಹಸಿವನ್ನು ಕುಟುಂಬದವರೆಲ್ಲರೂ ಸಮನಾಗಿ ಹಂಚಿಕೊಳ್ಳುತ್ತಾರೆಂದು ಅರ್ಥವಲ್ಲ. ಪಿತೃ ಪ್ರಾಧಾನ್ಯತೆಯಲ್ಲಿ ಮುಳುಗಿ ಹೋಗಿರುವ ಸಂಪ್ರದಾಯ ಹಾಗೂ ಗಂಡು ಮಕ್ಕಳಿಗಿರುವ ಬೇಡಿಕೆಯಿಂದಾಗಿ ಹೆಂಗಸರು ಹಾಗೂ ಹೆಣ್ಣುಮಕ್ಕಳು ತಮ್ಮ ಆಹಾರ ಸೇವಿಸುವಿಕೆಯನ್ನು ಕಡಿಮೆ ಮಾಡುತ್ತಾರೆ.

ಬೀಜಿಂಗ್ ಕಾನ್‌ಫರೆನ್ಸ್‌ಗೋಸ್ಕರ ಭಾರತ ತಯಾರಿಸಿದ ದೇಶದ ಲೇಖನವು ಆರ್ಥಿಕತೆಯ ಮರು ರಚನೆಯ ಹಂತವು 'ಬಡ ಹೆಂಗಸರ ಮೇಲೆ ಅಧಿಕ ಒತ್ತಡ ಹೇರುವ ಸಾಮರ್ಥ್ಯವನ್ನು ಹೊಂದಿದೆ' ಎಂಬುದನ್ನು ತೋರಿಸುತ್ತದೆ.

ಆದರೆ ಈ ಬಡ ಹೆಂಗಸರನ್ನು ಈ ಅಧಃಪತನದಿಂದ ಹೇಗೆ ಹೊರಗೆ ತರಬಹುದು ಎಂಬುಧನ್ನು ಇದು ಸ್ಪಷ್ಟಪಡಿಸಲಿಲ್ಲ. ಸೂಚಿಸಲ್ಪಟ್ಟಿರುವ ರಾಷ್ಟ್ರೀಯ ನವೀಕರಣ ಯೋಜನೆ ಹಾಗೂ ಬಡತನ - ನಿರ್ಮೂಲನಗಳಂತಹ ಸರ್ಕಾರದ ಕಾರ್ಯಕ್ರಮಗಳು ಬರಿಯ ದಿಕ್ಕು ಬದಲಾಯಿಸುವ ಕಾರ್ಯಕ್ರಮಗಳಾಗಿವೆಯೇ ಹೊರತು ಇವು ನಿರುದ್ಯೋಗ ಅಥವಾ ಬಡತನ ಸಮಸ್ಯೆಗಳ ಮೇಲೆ ಯಾವುದೇ ಪ್ರಭಾವವನ್ನೂ ಬೀರಿಲ್ಲ.

ಈ ಹಂತದಲ್ಲಿ ರಾಜ್ಯವು ಹೆಂಗಸರಿಗೆ ಮೀಸಲಾತಿ ನೀಡುವ ಪಂಚಾಯತ್ ರಾಜ್ಯದ ಕಾನೂನು ಜಾರಿಗೆ ತಂದಿರುವುದು ಮುಖ್ಯವಾಗಿದೆ. ಇದು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯಲ್ಲಿ ಒಂದು ಮೈಲುಗಲ್ಲಾಗಿದ್ದರೂ ಇದು ಸಾಂಪ್ರದಾಯಕವಾಗಿರುವ ವಿಶೇಷ ರಿಯಾಯಿತಿಗಳನ್ನು ನೀಡುತ್ತದೆಯೇ ಹೊರತು ಹೆಂಗಸರ ಸಾಮರ್ಥನೀಯ ಅಧಿಕಾರವನ್ನು ಪ್ರತಿನಿಧಿಸುವುದಿಲ್ಲ. ಹಾಗಾಗಿ ಹೆಂಗಸರು ತಮ್ಮ ಸಾಮರ್ಥ್ಯಗಳನ್ನು ಹಣಕಾಸಿನ ವಿಚಾರದಲ್ಲಿ ಹೊಡದಾಡಲು ಮುಡುಪಾಗಿಡುವ ಸಾಧ್ಯತೆ ಇದೆ.

ಮುಖ್ಯವಾಗಿರುವ ಮಹಿಳೆಯರ ಓಟನ್ನು ಪಡೆಯುವುದಕ್ಕೋಸ್ಕರ ಇತ್ತೀಚಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ಮಹಿಳೆಯರಿಗಾಗಿ ರಾಷ್ಟ್ರೀಯ ಪಾಲಿಸಿಯನ್ನು ಜಾರಿಗೆ ತರುವುದನ್ನು ಸೂಚಿಸಿದೆ. ಕಳೆದ ನವಂಬರ್‌ನಲ್ಲಿ ಹಂಚಲಾದ ಈ ಯೋಜನೆಯು ಕಡು N.P.P.ಯ ಸಂಪ್ರದಾಯದಲ್ಲಿಯೇ ಮುಂದುವರಿದಿದ್ದು, ಬಹುಪಾಲು ಮಹಿಳೆಯರನ್ನು ಹೊಗಳುವ ಆರ್ಥಿಕ ಹಂತದ ತಾರ್ಕಿಕತೆಯನ್ನು ಪ್ರಶ್ನೆ ಮಾಡದೇ ಅಭಿವೃದ್ಧಿಯ ಮುಖ್ಯ ವಾಹಿನಿಯಲ್ಲಿ ಮಹಿಳೆಯರನ್ನು ಒಳಗೊಳ್ಳುವುದರಿಂದ ಇದು ಅಸಾಮರ್ಥ್ಯತೆ ಹೊಂದಿದೆ ಎಂಬುದನ್ನು ಮಹಿಳಾ ಸಂಘಟನೆಗಳು ಕಂಡುಕೊಂಡವು.

ಮಹಿಳೆಯರ ಸಶಕ್ತತೆಯ ಬಗ್ಗೆ ಮಾತನಾಡುತ್ತಲೇ ರಾಜ್ಯವು ಆದರ ಮುಖ್ಯ ಜವಾಬ್ದಾರಿಗಳಿಂದ ಹಿಂತೆಗೆಯುವುದನ್ನು ಆಯ್ಕೆ ಮಾಡಿಕೊಳ್ಳುತ್ತಿದೆ. ದೇಶದಲ್ಲಿರುವ ಎಲ್ಲಾ ಮಹಿಳಾ ಸಂಘಟನೆಗಳೂ ರಾಜ್ಯದ ಬೃಹತ್ ಯೋಜನೆಯ ವಿರುದ್ಧ ಧ್ವನಿ ಎತ್ತುತ್ತಿವೆ. ಸಾಲದ ರದ್ಧತಿ, ರಾಚನಿಕ ಹೊಂದಾಣಿಕೆ ಕಾರ್ಯಕ್ರಮ ಹಿಂತೆಗೆದುಕೊಳ್ಳುವಿಕೆ, ಕೆಲಸದ ಹಕ್ಕು, ಸಾಮಾಜಿಕ ಭದ್ರತೆ, ಶಿಕ್ಷಣ ಮತ್ತು ಹಿಂಸೆಯ ಕೊನೆಗಾಣಿಸುವಿಕೆ, ಆಹಾರ ನ್ಯೂನತೆಯ ಹೋಗಲಾಡಿಸುವಿಕೆಯ ಬೇಡಿಕೆಗಳ ಈಡೇರಿಕೆಗೆ ಒತ್ತಾಯ ಪೂರ್ಣವಾಗಿ ಧ್ವನಿಸ ತೊಡಗಿವೆ. ರಾಜ್ಯದ ಬಡವರ ವಿರುದ್ಧದ ಹಾಗೂ ಮಹಿಳೆಯರ ವಿರುದ್ಧದ ಯೋಜನೆಗಳನ್ನು ವಿರೋಧಿಸುವುದಕ್ಕೆ ಹಾಗೂ ನಿಗ್ರಹಿಸಲಿಕ್ಕೆ ಸ್ಪಷ್ಟವಾದ ಹಾಗೂ ಸುಸಂಬದ್ಧವಾಗಿರುವ ತಂತ್ರಗಳನ್ನು ರೂಪಿಸುವುದಕ್ಕಾಗಿ ಎಲ್ಲಾ ಮಹಿಳಾ ಸಂಘಟನೆಗಳೂ ಒಟ್ಟಿಗೆ ಬರುವುದು ಇಂದು ಅಗತ್ಯವಾಗಿದೆ.

REFERENCES

1. Rekha Mehra and K. Saradamoni (1983) Women and Rural Transformation concept. New Delhi.
2. Unhealthy Trends — The World Bank, structural adjustment and the health scetor in India. Public Interest Resrach Group. New Delhi.
3. Towards Equality — Report of the Committee on the Status of Women in India. Government of India. December 1994.
4. Shram Shakti—Report of the National Commission on self employed women and women in the informal sector. Goverment of India. 1988.
5. National Perspective Plan for Women (1988-2000). Government of India, 1988.
6. Alternate Economic Survey (1994-95) Public Interest Research Group New Delhi.

ಕರ್ನಾಟಕದಲ್ಲಿ ಪಂಚಾಯತ್‌ರಾಜ್ ಹಾಗೂ ಮಹಿಳಾ ಮೀಸಲಾತಿ

○ ರಾಜೇಶ್ವರಿ ಎಚ್.ಎಸ್.

ಪಂಚಾಯತ್‌ರಾಜ್ ಚರಿತ್ರೆ

ಗ್ರಾಮೀಣ ಜನರಿಗೆ ಅತ್ಯಗತ್ಯವಾದ ಅಧಿಕಾರವನ್ನು ನೀಡುವಂತಹ ವ್ಯವಸ್ಥೆಯಿಲ್ಲದ ಹೊರತು ಪ್ರಜಾಪ್ರಭುತ್ವದ ಅರ್ಥಪರಿಪೂರ್ಣವಾಗುವುದಿಲ್ಲ. ಈ ವ್ಯವಸ್ಥೆಯೊಂದಿಗೆ ಮಾತ್ರ ಗ್ರಾಮೀಣ ಜನತೆ ಸ್ವರಾಜ್ಯ ಕಲ್ಪನೆಯ ನಿಜವಾದ ಅರ್ಥವನ್ನು ಅನುಭವಿಸಬಲ್ಲರು ಎಂದು ಗಾಂಧೀಜಿಯವರ ಒತ್ತಡದ ಮೇರೆಗೆ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿಯಲ್ಲಿ ಪಂಚಾಯತ್ ವ್ಯವಸ್ಥೆಯನ್ನು ಸಂಘಟಿಸುವ ಅವಕಾಶವನ್ನು ರಾಜ್ಯಗಳಿಗೆ ನೀಡಲಾಯಿತು. ಕೇಂದ್ರ ಸರ್ಕಾರ 1952ರಲ್ಲಿ ಜವಾಹರ್‌ಲಾಲ್ ನೆಹರೂ ಅವರು ಅಮೇರಿಕದಿಂದ ಪ್ರಭಾವಿತರಾಗಿ "ಗ್ರಾಮೀಣಾಭಿವೃದ್ಧಿ" ಹಾಗೂ ಗ್ರಾಮೀಣ ಜನರ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು ಸಮುದಾಯ ಯೋಜನೆಯನ್ನು ಜಾರಿಗೆ ತಂದರು. ಗ್ರಾಮೀಣ ಜನರ ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಬದಲಾವಣೆಯನ್ನು ತರುವುದು ಈ ಯೋಜನೆಯ ಉದ್ದೇಶವಾಗಿತ್ತೆಂದು ಹೇಳಲಾಗಿತ್ತು. ಆದರೆ ಈ ಯೋಜನೆಯು ಸಂಪೂರ್ಣವಾಗಿ ವಿಫಲವಾಯಿತು. ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಪ್ರಕ್ರಿಯೆಯಲ್ಲಿ ಜನರ ಭಾಗವಹಿಸುವಿಕೆಯ ಗೈರುಹಾಜರಿಯೇ ಇದರ ವೈಫಲ್ಯತೆಗೆ ಕಾರಣವೆಂದು ಗುರುತಿಸಲಾಯಿತು. 1957ರಲ್ಲಿ ರಚಿತವಾದ ಬಲವಂತರಾಯ್ ಮೆಹತಾ ಸಮಿತಿಯು ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ರಚಿಸುವಂತೆ ಸಲಹೆ ನೀಡಿತು. ಈ ಸಲಹೆಯ ಅನ್ವಯ 1959ರಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಇದು ಎರಡು ಪ್ರಮುಖ ಉದ್ದೇಶವನ್ನು ಹೊಂದಿದ್ದಿತು. 1) ವಿಕೇಂದ್ರೀಕರಣ 2) ಸರ್ಕಾರದ ನಿಯೋಜಿತ ಕಾರ್ಯಕ್ರಮಗಳಲ್ಲಿ ಸ್ಥಳೀಯ ಜನರ ಭಾಗವಹಿಸುವಿಕೆಯನ್ನು ತೀವ್ರಗೊಳಿಸುವುದು. ಒಂದು ಹಂತದಲ್ಲಿ ಇದನ್ನು ಕ್ರಾಂತಿಕಾರಿ ವ್ಯವಸ್ಥೆಯೆಂದೇ ಪ್ರಚಾರ ಮಾಡಲಾಗುತ್ತಿತ್ತು. ಆದರೆ ಇದು ಜನತೆಗೆ ಯಾವುದೇ ಅಧಿಕಾರ ನೀಡದ, ಮೇಲಿನಿಂದ, ಹಳ್ಳಿಯವರೆಗೆ ಹರಡಿಕೊಂಡಿರುವ ಅಧಿಕಾರಶಾಹಿ ಆಡಳಿತಕ್ಕೋಸ್ಕರ ಮಾಡಿಕೊಂಡ ರಚನೆಯಾಗಿ ಮಾರ್ಪಾಡಾಯಿತು. ಬಲವಂತರಾಯ್ ಮೆಹತಾ ಸಮಿತಿ "ಆಡಳಿತ ವಿಕೇಂದ್ರೀಕರಣ ಕಲ್ಪನೆಯ ಪರವಾಗಿ ವಾದಿಸಿತ್ತು. ಆಡಳಿತ ವಿಕೇಂದ್ರೀಕರಣವು ಚುನಾಯಿತ ಪ್ರತಿನಿಧಿಗಳ ನಿಯಂತ್ರಣದಲ್ಲಿ ಸಹ ಇರಬೇಕೆಂಬುದು ಈ ಸಮಿತಿಯ ಅಭಿಪ್ರಾಯವಾಗಿತ್ತು.

1977ರಲ್ಲಿ ಅಧಿಕಾರಕ್ಕೆ ಬಂದ ಮೊರಾರ್ಜಿದೇಸಾಯಿ ನೇತೃತ್ವದ ಸರ್ಕಾರ ಪಂಚಾಯತ್ ಸಂಸ್ಥೆಗಳನ್ನು ಪರಾಮರ್ಶಿಸಲು ಅಶೋಕ ಮೆಹತಾ ಸಮಿತಿಯನ್ನು ನೇಮಿಸಲಾಯಿತು. ಪಂಚಾಯತ್‌ರಾಜ್ ವ್ಯವಸ್ಥೆ ಸದಾ ನಿಂತ ನೀರಾಗಿತ್ತು. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಮಹತ್ವದ ಪಾತ್ರವನ್ನು ವಹಿಸುವುದನ್ನು ಅಧಿಕಾರಿ ವರ್ಗ ಯಾವಾಗಲೂ ಬೆಂಬಲಿಸಲಿಲ್ಲ. ಶಾಸಕಾಂಗವಾಗಲಿ, ಕಾರ್ಯಾಂಗವಾಗಲಿ ಪಂಚಾಯತ್‌ರಾಜ್‌ಗೆ ನಿರ್ದಿಷ್ಟವಾದ ಸ್ಥಾನ ಮಾನವನ್ನು ನೀಡಲಿಲ್ಲ. ಚುನಾವಣೆಗಳು ಕ್ರಮವಾಗಿ ನಡೆಯುತ್ತಿರಲಿಲ್ಲ. ದುರ್ಬಲವರ್ಗದವರಿಗೆ ಹಾಗೂ ಮಹಿಳೆಯರಿಗೆ ಪ್ರಾತಿನಿಧ್ಯವಿರಲಿಲ್ಲ. ಅಗತ್ಯವಾದ ಅಧಿಕಾರ, ಹಣದ ಸಂಪನ್ಮೂಲದ ಕೊರತೆ ಸದಾ ಕಂಡುಬರುತ್ತಿತ್ತು.

1989ರಲ್ಲಿ ರಾಜೀವ ಗಾಂಧಿ ಸರ್ಕಾರ ಪಂಚಾಯತ್‌ರಾಜ್‌ನ್ನು ಸಂವಿಧಾನದ ಚೌಕಟ್ಟಿನಲ್ಲಿ ಸೇರಿಸಲು ಪ್ರಯತ್ನಿಸಿ ವಿರೋಧ ಪಕ್ಷಗಳ ಒತ್ತಡದಿಂದ ಈ ಮಸೂದೆಯು ಬಿದ್ದು ಹೋಯಿತು. ನ್ಯಾಷನಲ್ ಫ್ರಾಂಟ್‌ನ ವಿ.ಪಿ. ಸಿಂಗ್ ಸಹ ಈ ಮಸೂದೆಯನ್ನು ಮಂಡಿಸಲು ಪ್ರಯತ್ನಿಸಿದರೂ ಸರ್ಕಾರ ಮೊದಲೇ ಬಿದ್ದು ಹೋಯಿತು. 1993 ಡಿಸೆಂಬರ್‌ನಲ್ಲಿ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಪಂಚಾಯತ್‌ರಾಜ್

ಸಂವಿಧಾನಾತ್ಮಕ ಸ್ವರೂಪವನ್ನು ಪಡೆದು ಕಾಯಿದೆಯಾಗಿ ಮಾರ್ಪಟ್ಟಿತು.

73ನೇ ಸಂವಿಧಾನದ ತಿದ್ದುಪಡಿಯು ಹಲವಾರು ಮಹತ್ವದ ಅಂಶಗಳನ್ನು ಒಳಗೊಂಡಿದೆ. ಈ ತಿದ್ದುಪಡಿಯು ಹಲವಾರು ರೀತಿಯ ಸಾಮಾಜಿಕ ಬದಲಾವಣೆಗೆ ನಾಂದಿಯನ್ನು ಹಾಡಿದೆ. 1) ಗ್ರಾಮ ಸಭೆಗಳ ರಚನೆ 2) ಗ್ರಾಮ ಪಂಚಾಯಿತಿಗಳಿಗೆ ನೇರವಾದ ಚುನಾವಣೆ 3) ಜನಸಂಖ್ಯೆಯ ಆಧಾರದ ಮೇಲೆ ಅಧ್ಯಕ್ಷರ ಸ್ಥಾನವನ್ನು ಒಳಗೊಂಡು ಪರಿಶಿಷ್ಟ ವರ್ಗದವರಿಗೆ ಮೀಸಲಾತಿ 4) 3ನೇ ಒಂದು ಭಾಗ ಮಹಿಳೆಯರಿಗೆ ಮೀಸಲಾತಿ 5) ಐದು ವರ್ಷ ಅವಧಿ 6) ಕ್ರಮವಾದ ಚುನಾವಣೆ 7) ಅಭಿವೃದ್ಧಿ ಯೋಜನೆ 8) ಹಣಕಾಸಿನ ಮೂಲ 9) ಹಣಕಾಸು ಸಮಿತಿ ರಚನೆ 10) ಚುನಾವಣಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಚುನಾವಣೆ.

ಪಂಚಾಯತ್‌ರಾಜ್ ವ್ಯವಸ್ಥೆಯನ್ನು "ಸ್ಥಳೀಯಆಡಳಿತ" "ಸ್ವಯಂ ಆಡಳಿತ"ವೆಂಬ ಅರ್ಥದಲ್ಲಿ ಅರ್ಥೈಸಲಾಗಿದೆ. ಗ್ರಾಮೀಣ ಜನರ ಅಭಿವೃದ್ಧಿ ಹಾಗೂ ಅವರ ಆಶೋತ್ತರಗಳನ್ನು ಮೂರ್ತರೂಪಕ್ಕೆ ತರಲು ಗ್ರಾಮೀಣ ಜನರಿಗೆ ಅಧಿಕಾರ ನೀಡಲಾಗಿದೆ. 'ಜನರಿಗೆ ಅಧಿಕಾರ' ಪರಿಕಲ್ಪನೆಯನ್ನು ವಿಕೇಂದ್ರೀಕರಣ ಪ್ರಕ್ರಿಯೆಯ ಮೂಲಕ ನಿಜವಾದ ಜನತಂತ್ರೀಯ ವ್ಯವಸ್ಥೆಯನ್ನು ಬಲಗೊಳಿಸುವುದು. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳಲ್ಲಿ 'ಅಧಿಕಾರ'ವನ್ನು ಕೇಂದ್ರೀಕರಿಸದೇ, ಗ್ರಾಮ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ವಿಕೇಂದ್ರೀಕರಣಗೊಳ್ಳುವುದರಿಂದ ಜನರ ಕೈಗೆ ನಿಜವಾದ 'ಅಧಿಕಾರ' ನೀಡಲಾಗಿದೆಯೆಂದು ಹೇಳಲಾಗಿದೆ. ಇವೆಲ್ಲ ಘೋಷಿತ ಭರವಸೆಗಳು ಮಾತ್ರ.

ಐವತ್ತರ ದಶಕದಿಂದ 90ರ ದಶಕದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯ ಪರಿಕಲ್ಪನೆಯ ವ್ಯಾಖ್ಯಾನದಲ್ಲಿ ಕೆಲವು ಅಂಶಗಳು ಸ್ಪಷ್ಟವಾಗುತ್ತದೆ, ಇದು ಆಡಳಿತ ವಿಕೇಂದ್ರೀಕರಣದ ಅನುಕೂಲಕ್ಕಾಗಿ ಮಾಡಿಕೊಂಡ ಒಂದು ರಚನೆ. ಸರ್ಕಾರಗಳು ನಿಯೋಜಿಸಿಕೊಂಡ ಯೋಜನೆಗಳನ್ನು ಗ್ರಾಮ ಮಟ್ಟದವರೆಗೆ ಅನುಷ್ಠಾನಕ್ಕೆ ತರುವ ಒಂದು ವ್ಯವಸ್ಥೆಯು ಸರ್ಕಾರಗಳಿಗೆ ಇಂದು ಅತ್ಯಗತ್ಯವಾಗಿದೆ. ಇಂದು ಇದು ಪಂಚಾಯತ್‌ರಾಜ್ ವ್ಯವಸ್ಥೆಯಾಗಿದೆ. ಸಂವಿಧಾನದ 73ನೇ ತಿದ್ದುಪಡಿಯ ಹತ್ತು ಅಂಶಗಳನ್ನು ವಿಶ್ಲೇಷಿಸಿದರೆ, ಪಂಚಾಯತ್‌ರಾಜ್ ರಚನೆಗೆ ನೀಡಿರುವ ಪ್ರಾಮುಖ್ಯತೆಯನ್ನು ಅವುಗಳಿಗೆ ಅಧಿಕಾರಗಳಿಗೆ ನೀಡದೆ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಘೋಷಿತ ಉದ್ದೇಶಗಳಲ್ಲಿ ಇರುವ ವೈರುಧ್ಯಗಳ ಜೊತೆಯಲ್ಲಿ, ಅನುಷ್ಠಾನಕ್ಕೆ ತರುವ ಹಿನ್ನಲೆಯಲ್ಲಿ ಉಂಟಾಗುವ ವೈರುಧ್ಯಗಳು ಪಂಚಾಯತ್‌ರಾಜ್ ವೈಫಲ್ಯತೆಗೆ ಸಾಕ್ಷಿಯಾಗಿವೆ. ಪಂಚಾಯತ್‌ರಾಜ್ ಕಾರ್ಯನಿರ್ವಹಿಸುವ ವಿಧಾನ, ರಾಜಕೀಯ ಪಕ್ಷಗಳು ಈ ವ್ಯವಸ್ಥೆಯನ್ನು ತಮ್ಮ ರಾಜಕೀಯದಾಟದ ದಾಳವನ್ನಾಗಿ ಮಾಡಿಕೊಂಡಿರುವುದನ್ನು ನಾವು ನೋಡಬಹುದು. ನಮ್ಮ ದೇಶದಲ್ಲಿ ಭ್ರಷ್ಟಾಚಾರ, ಲಂಚ, ಅಧಿಕಾರ ಲಾಲಸೆ, ಜಾತಿ, ವರ್ಗ ವೈಷಮ್ಯ ಮುಂತಾದವುಗಳನ್ನು ಒಳಗೊಂಡ ಜನತಂತ್ರದ ಒಂದು ಪ್ರತಿಫಲನವಾಗಿ ಪಂಚಾಯತ್‌ರಾಜ್ ಮಾರ್ಪಡುವ ಎಲ್ಲಾ ಸಾಧ್ಯತೆಗಳೂ ಇದೆ. ಇಂದು ಪಂಚಾಯತ್‌ರಾಜ್ ಸರ್ಕಾರಿ ಯೋಜನೆಗಳನ್ನು ಜಾರಿಗೆ ತರುವ ಒಂದು ಆಡಳಿತ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕದಲ್ಲಿ ಪಂಚಾಯತ್‌ರಾಜ್

ಮೈಸೂರು ರಾಜ್ಯದಲ್ಲಿ ಮೊದಲು ಪಂಚಾಯತ್‌ರಾಜ್ ವ್ಯವಸ್ಥೆಯಿತ್ತು. 1926ರಿಂದ 1930ರ ಒಳಗೆ ಜಿಲ್ಲಾ ಬೋರ್ಡುಗಳನ್ನು ರಚಿಸಲಾಗಿತ್ತು. ಅಧಿಕಾರೇತರ ವ್ಯಕ್ತಿಗಳು ಜಿಲ್ಲಾ ಬೋರ್ಡ್‌ನ ಅಧ್ಯಕ್ಷರಾಗಿದ್ದರು. 1927ರಲ್ಲಿ ಒಬ್ಬ ಬ್ರಾಹ್ಮಣರೂ ಹಾಗೂ ಒಬ್ಬ ಮುಸ್ಲಿಂ ವ್ಯಕ್ತಿಗಳು ಇಂತಹ ಬೋರ್ಡ್‌ನ ಅಧ್ಯಕ್ಷರಾಗಿದ್ದರು. 1977ರಲ್ಲಿ ಕೇಂದ್ರ ಸರ್ಕಾರ ನೇಮಕ ಮಾಡಿದ ಅಶೋಕ ಮೆಹತಾ ಸಮಿತಿ ನೀಡಿದ ಸಲಹೆಗಳನ್ನು ಆಧರಿಸಿ 1983ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಜನತಾದಳದ ಅಬ್ದುಲ್ ನಜೀರ್ ಸಾಬ್ ನೇತೃತ್ವದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿತು. ಈ ಪದ್ಧತಿಯನ್ನು ಜಾರಿಗೆ ತರುವ ಸಮಯದಲ್ಲಿ ಕಾಂಗ್ರೆಸ್ ಪಕ್ಷ ಬಲವಾಗಿ ವಿರೋಧಿಸಿತ್ತು. ಆದರೆ ರಾಜೀವ್‌ಗಾಂಧಿ ಪಂಚಾಯತ್ ವ್ಯವಸ್ಥೆಯ ಬಗ್ಗೆ ತೀವ್ರವಾದ ಒಲವನ್ನು ತೋರಿದಾಗ ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದ ಸರ್ಕಾರದಲ್ಲಿ 'ಆಶ್ಚರ್ಯಕರ ರೀತಿಯಲ್ಲಿ' ಬದಲಾವಣೆಗಳು ಉಂಟಾದವು.

1991ರಲ್ಲಿ ಬಂಗಾರಪ್ಪರ ನೇತೃತ್ವದಲ್ಲಿ ಕಾಂಗ್ರೆಸ್

ಸರ್ಕಾರ ಮಂಡಲ ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್‌ಗಳನ್ನು ರದ್ದು ಮಾಡಿ ಆಡಳಿತಾಧಿಕಾರಿಯನ್ನು ನೇಮಿಸಿತು. ಜನತಾದಳ ಜಾರಿಗೆ ತಂದಿದ್ದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸುಗ್ರೀವಾಜ್ಞೆ ಹೊರಡಿಸುವುದರ ಮೂಲಕ ರದ್ದು ಮಾಡಿ 1993 "ಕರ್ನಾಟಕ ಪಂಚಾಯತ್‌ರಾಜ್‌ಯೆಂಬ ಹೊಸ ಕಾಯಿದೆಯನ್ನು ಜಾರಿಗೆ ತಂದಿತು. ಸಂವಿಧಾನದ 73ನೇ ತಿದ್ದುಪಡಿಯನ್ವಯ ನಡೆಸಬೇಕಾದ ಚುನಾವಣೆಗಳನ್ನು ಮುಂದೂಡಲು ಆಡಳಿತ ಸರ್ಕಾರ ಹಲವಾರು ಗಿಮಿಕ್‌ಗಳನ್ನು ಮಾಡಿತು. ಸುಪ್ರಿಂಕೋರ್ಟಿನ ಆದೇಶವನ್ನು ಉಲ್ಲಂಘಿಸಿ, ಅನಿವಾರ್ಯವಾಗಿ 1993ರ ಜನವರಿಯಲ್ಲಿ ಗ್ರಾಮ ಪಂಚಾಯಿತಿಯ ಚುನಾವಣೆಯನ್ನು ನಡೆಸಿದರೂ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಚುನಾವಣೆಗಳು ಪಕ್ಷಾಧಾರಿತವಾಗಿ ನಡೆಯಬೇಕಾದುದರಿಂದ ಬಹುಮತ ಗಳಿಸದಿರಬಹುದೆಂಬ ಹಿಂಜರಿಕೆಯಿಂದ ಚುನಾವಣೆಯನ್ನು ನಾಟಕೀಯ ರೀತಿಯಲ್ಲಿ ಮುಂದೂಡಲು ಓ. ಚಿನ್ನಪ್ಪರೆಡ್ಡಿಯ ವರದಿಯ ನೆಪವನ್ನು ನೀಡಲಾಯಿತು. "ದುರ್ಬಲ ವರ್ಗ ಹಾಗೂ ಮಹಿಳೆಯರೊಂದಿಗೆ ಅಧಿಕಾರ ಹಂಚಿಕೊಳ್ಳಲು ಸರ್ಕಾರ ಹಿಂಜರಿಯುತ್ತಿರುವುದರಿಂದ ಹಾಗೂ ವಿಕೇಂದ್ರೀಕರಣದ ಬಗ್ಗೆ ಜನರನ್ನು ಎದುರಿಸುವ ಶಕ್ತಿ ಇಲ್ಲದಿರುವುದರಿಂದ ಸರ್ಕಾರ ಚುನಾವಣೆಯನ್ನು ನಡೆಸಲು ಹಿಂಜರಿಯುತ್ತಿದೆಯೆಂದು ಸರ್ಕಾರದ ಕ್ರಮವನ್ನು ಪ್ರತಿಭಟಿಸಿ ಅಂದಿನ ಪಂಚಾಯತ್‌ರಾಜ್ ಮಂತ್ರಿ ಘೋರ್ಪಡೆಯವರು ರಾಜೀನಾಮೆ ನೀಡಿದ್ದರು. ನ್ಯಾಯಾಲಯದಲ್ಲಿ ಸರ್ಕಾರದ ಕ್ರಮವನ್ನು ವಿರೋಧಿಸಿ ಹಲವಾರು ರಿಟ್‌ಪಟಿಶನ್‌ಗಳನ್ನು ಹಾಕಲಾಗಿತ್ತು. 1985ರ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ "ಜನತೆಗೆ ನೀಡಲಾಗಿದ್ದ" ಅಧಿಕಾರವನ್ನು ಕಿತ್ತುಕೊಂಡು ಹೆಚ್ಚಿನ ಅಧಿಕಾರವನ್ನು ಅಧಿಕಾರಶಾಹಿಗೆ ನೀಡಲಾಗಿದೆ.

ಕರ್ನಾಟಕ ರಾಜ್ಯ ಜನರಿಗೆ ನೀಡಲಾದ 'ಅಧಿಕಾರ', ಅಧಿಕಾರದ ವಿಕೇಂದ್ರೀಕರಣದ ಪ್ರಕ್ರಿಯೆಯಲ್ಲಿ ಇತರ ರಾಜ್ಯಗಳಿಗೆ ಮಾದರಿಯಾಗಿತ್ತು. ಆದರೆ ಈಗ ಅದೇ ರಾಜ್ಯ ಈ ವ್ಯವಸ್ಥೆಯ ಅಂತಸತ್ವವನ್ನು ನಿರ್ವೀರ್ಯಗೊಳಿಸಬಹುದೆಂಬುದನ್ನು ಬೇರೆ ರಾಜ್ಯಗಳಿಗೆ ತೋರಿಸಿ ಕೊಡುತ್ತಿದೆ. ಒಂದು ಉತ್ತಮ ವ್ಯವಸ್ಥೆ ಒಂದು ರಾಜಕೀಯ ಪಕ್ಷದಿಂದ ಜಾರಿಗೆ ಬಂದಿದ್ದರೆ ಅದನ್ನು ನಾಶಪಡಿಸಲು ವಿರೋಧ ಪಕ್ಷಗಳು ಶತಾಯು ಗತಾಯು ಪ್ರಯತ್ನಿಸುತ್ತವೆ. ರಾಜಕೀಯ ಆಟದಲ್ಲಿ 'ವಿಕೇಂದ್ರೀಕರಣ', 'ಅಧಿಕಾರದ' ಕಲ್ಪನೆ ಒಂದು ಆಟಿಕೆಯಾಗಿದೆ. ಈ ವ್ಯವಸ್ಥೆಯ ಘೋಷಿತ ಅರ್ಥಗಳಿಗೆ ವ್ಯತಿರಿಕ್ತವಾಗಿ ನಿರ್ಧರಿಸುವವರು ಗ್ರಾಮೀಣ ಜನತೆಯಲ್ಲಿ ಅದು ನಿರ್ಧರಿತವಾಗುವುದು ಮೇಲ್ಮಟ್ಟದಲ್ಲಿರುವ ರಾಜಕೀಯ ವ್ಯಕ್ತಿಗಳಿಂದ ಹಾಗೂ ರಾಜಕೀಯ ಪಕ್ಷಗಳಿಂದ. ಈಗ ಕರ್ನಾಟಕದಲ್ಲಿ ಜಾರಿಯಲ್ಲಿರುವ ವ್ಯವಸ್ಥೆ ಕೇವಲ 'ಆಡಳಿತ ವಿಕೇಂದ್ರೀಕರಣ' ಇದರಲ್ಲಿ ರಾಜಕೀಯ ವಿಲ್ ಇಲ್ಲದಿರುವುದನ್ನು ನಾವು ಕಾಣಬಹುದು.

ರಾಜಕೀಯ ಸ್ವರೂಪ

ಮಹಿಳೆಯರಿಗೆ ರಾಜಕೀಯದ ಬಗ್ಗೆ ಒಂದು ರೀತಿಯ ತಿರಸ್ಕಾರ ಮನೋಭಾವನೆ ಕಂಡುಬರುತ್ತಿದೆ. ರಾಜಕೀಯ ಹೆಂಗಸರಿಗಲ್ಲ, ಅದು ಗಂಡಸರಿಗಾಗಿ ಇರುವುದು ಎಂಬ ಅಭಿಪ್ರಾಯ ಹೆಚ್ಚು ಪ್ರಚಲಿತವಾಗಿದೆ. ಈ ತಿರಸ್ಕಾರ ಮನೋಭಾವನೆಗೆ ಎರಡು ಪ್ರಮುಖ ಕಾರಣಗಳನ್ನು ಗುರುತಿಸಬಹುದು. ಮನೆಗೆಲಸದ ಹೊರೆ, ಮಕ್ಕಳ ಪಾಲನೆ, ಪೋಷಣೆ, ಹೊಲಗದ್ದೆಯ ಕೆಲಸ, ಹಲವು ರೀತಿಯ ಒತ್ತಡಗಳು ಜೊತೆಗೆ ಇಂದಿನ 'ರಾಜಕೀಯ' ಆಚರಣೆಯಲ್ಲಿರುವ ಅರ್ಥ ಹಾಗೂ ಸ್ವರೂಪ. ರಾಜಕೀಯ ಇಂದು ಒಂದು ವೃತ್ತಿಯಾಗಿದೆ. ರಾಜಕೀಯಕ್ಕಿಳಿಯುವುದೆಂದರೆ ಮನೆಗೆಲಸದ ಜವಾಬ್ದಾರಿಯನ್ನು ನಿರ್ಲಕ್ಷಿಸಿ ಸಂಪೂರ್ಣ ಸಮಯವನ್ನು ರಾಜಕೀಯಕ್ಕೆ ಮೀಸಲಿಡಬೇಕಾಗುತ್ತದೆ. ಇಂದು ರಾಜಕೀಯದಲ್ಲಿ ಹಣ ಪ್ರಬಲ ಪಾತ್ರವನ್ನು ವಹಿಸುತ್ತಿದೆ. ಲಂಚ, ಭ್ರಷ್ಟಾಚಾರ ರಾಜಕೀಯದ ಅನಿವಾರ್ಯ ಅಂಶಗಳಾಗಿವೆ. ಇದನ್ನು ಬಹುಪಾಲು ಮಹಿಳೆಯರು ಒಪ್ಪಿಕೊಳ್ಳುತ್ತಾರೆ. ಗ್ರಾಮ ಪಂಚಾಯಿತಿಗೆ ಆಯ್ಕೆಯಾದ ಮಹಿಳೆ ಗಂಗಮ್ಮ "ನಾನು ಯಾಕೆ ಅದ್ರು ಚುನಾವಣೆಗೆ ನಿಂತು ಗೆದ್ದೆನೊ ಎನಿಸುತ್ತದೆ. ಮನೆಯಿಂದ ಹೊರಗೆ ಬಂದ್ರೆ ನಾವು ನಿನ್ನನ್ನು ಓಟು ಹಾಕಿ ಗೆಲ್ಲಿಸಿದೆವು ಆದರೆ ನೀನು ಏನು ಮಾಡಿದ್ದೀಯಾ ! ಎಂದು ಕುಹಕ ಹಾಗೂ ವ್ಯಂಗ್ಯ ಮಿಶ್ರಿತ ಧ್ವನಿಯಿಂದ ಕೇಳುತ್ತಾರೆ. ನಾನು ಒಬ್ಬಳೇ ಏನು ಮಾಡಲು ಸಾಧ್ಯ ಹೇಳಿ ? ಈ ಮನೆಯ ಮುಂಭಾಗವನ್ನು ರಿಪೇರಿ ಮಾಡಿಸುತ್ತಿದ್ದೇನೆ. ಎಲ್ಲೊ

ದುಡ್ಡು ಹೊಡೆದಿದ್ದಾಳೆ ಎಂದು ಹಿಂದೆ ಮಾತನಾಡಿಕೊಳ್ಳುತ್ತಾರೆ "ರಾಜಕೀಯ ಮೌಲ್ಯಗಳು ಇಂದು ಬದಲಾವಣೆಯಾಗಿವೆ. ಇಂದು ರಾಜಕೀಯ ಸಂಪೂರ್ಣವಾಗಿ ಹಣದ ಮೇಲೆ ನಿಂತಿದೆ"ಯೆಂದು ಸ್ವರ್ಣ ಪ್ರಭಾಕರ್ ಭಾವಿಸುತ್ತಾರೆ. ಹೆಂಗಸರು ರಾಜಕೀಯ ಸೇರಲು ಹಿಂಜರಿಯಲು ಮುಖ್ಯ ಕಾರಣ ಇಂದಿನ ರಾಜಕೀಯದ ಸ್ವರೂಪ. ಹೆಂಗಸರಿಗೆ, ಗಂಡಸರನ್ನು ಅವರ ದೈಹಿಕ ಬಲಾಡ್ಯತೆಯ ವಿರುದ್ಧ ಸೆಣೆಸುವ ಶಕ್ತಿಯಿಲ್ಲ. ಗಂಡಸರು ರಾಜಕೀಯದಲ್ಲಿ 'ಹಣ'ವನ್ನು ಬಳಸುವ ರೀತಿಯಲ್ಲಿ ಹೆಂಗಸರು ಬಳಸಲು ಸಾಧ್ಯವಿಲ್ಲ. "ಜನರ ಕೈಗೆ ಅಧಿಕಾರ" ನೀಡುವ ಈ ಪ್ರಕ್ರಿಯೆ ಐವತ್ತರ ದಶಕದಲ್ಲಿ ಪ್ರಾರಂಭವಾಗಿದ್ದರೆ ಅದು ಉತ್ತಮ ಪರಿಣಾಮ ನೀಡುತ್ತಿತ್ತು. ಆದರೆ ಇಂದು ರಾಜಕೀಯ ಅಪರಾಧೀಕರಣ ಹಾಗೂ ಅಪರಾಧಗಳನ್ನು ರಾಜಕೀಕರಣಗೊಳಿಸುವ ಹಂತವನ್ನು ತಲುಪಿರುವುದರಿಂದ ಪಂಚಾಯತ್‌ರಾಜ್ ಸಂಸ್ಥೆಗಳು ಸಹ ಈ ಬಲೆಯಲ್ಲಿ ಸುಲಭವಾಗಿ ಬೀಳುವ ಅಪಾಯವೇ ಹೆಚ್ಚಿದೆಯೆಂದು ಪ್ರಮುಖ ಸಮಾಜವಾದಿ ನಾಯಕ ಮಧುಲಿಮೆಯೆ ಭಾವಿಸುತ್ತಾರೆ.

ಕರ್ನಾಟಕದಲ್ಲಿ ಮಹಿಳೆಯರಿಗೆ ಮೀಸಲಾತಿ

ಹಲವಾರು ಶತಮಾನಗಳಿಂದ ಸ್ತ್ರೀಯರು ತುಳಿತಕ್ಕೆ ಒಳಗಾಗಿದ್ದಾರೆ. ಸಾಮಾಜಿಕ ಹಾಗೂ ಆರ್ಥಿಕವಾದ ಶೋಷಣೆಯಿಂದ ಆಕೆ ಬಂಧಿಸಲ್ಪಟ್ಟಿದ್ದಾಳೆ. ಪಿತೃಪ್ರಧಾನ ವ್ಯವಸ್ಥೆ ಮೂಲಭೂತವಾಗಿ ಅವಳ ಪಾತ್ರವನ್ನು ಗೃಹಕೃತ್ಯಕ್ಕೆ ಸೀಮಿತಗೊಳಿಸುತ್ತದೆ. ನಮ್ಮ ಸಮಾಜ ಪುರುಷ ಪ್ರಧಾನ ಸಮಾಜವಾದುದರಿಂದ ಸ್ತ್ರೀಯರು ಸ್ವಇಚ್ಛೆಯಿಂದ ರಾಜಕೀಯ -ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪೂರಕವಾದ ವಾತಾವರಣವಿಲ್ಲ. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಮಹಿಳೆಯರು ಗಂಡಸರೊಂದಿಗೆ ಸ್ಪರ್ಧಿಸುವುದು ತೀರಾ ಕಷ್ಟಕರವಾದುದರಿಂದ ಮಹಿಳೆಯರಿಗೆ ಮೀಸಲಾತಿ ಅನಿವಾರ್ಯವಾಗಿದೆ.

ಹಳೆಯ ಮೈಸೂರಿನ ಆಡಳಿತ ಕಾಲದಲ್ಲಿ ರಾಜಕೀಯದಲ್ಲಿ ಮಹಿಳೆಯರ ಧ್ವನಿ ಕೇಳಿದ್ದು ತೀರಾ ಕಡಿಮೆ. ಅಂದು ಸ್ತ್ರೀಯರು ಮತ ಚಲಾಯಿಸಲು ಹಾಗೂ ಅಭ್ಯರ್ಥಿಯಾಗಿ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯವನ್ನು ಕೇಳುವ ಬೇಡಿಕೆಗಳನ್ನು ಮುಂದಿಡಲಾಗಿತ್ತು. 1930ರಲ್ಲಿ ಶ್ರೀಮತಿ ಕಮಲಮ್ಮ ದಾಸಪ್ಪ ಹಾಗೂ ಶ್ರೀಮತಿ ಸಾಕಮ್ಮ ಈ ಇಬ್ಬರು ಮಹಿಳೆಯರು ಮಾತ್ರ ಶಾಸಕಾಂಗದ ಮೆಟ್ಟಿಲನ್ನು ಏರಿದ್ದರು. 1957 ರಿಂದ 1991ರಲ್ಲಿ ಮಹಿಳೆಯರ ಸಂಖ್ಯೆ 18 ರಿಂದ 8ಕ್ಕೆ ಇಳಿದಿತ್ತು. ಸಂಸತ್ತಿಗೆ ಚುನಾಯಿತರಾದ ಮಹಿಳೆಯರ ಸಂಖ್ಯೆ ಕೇವಲ 4.

1983ರಲ್ಲಿ ಜನತಾದಳ ಅಧಿಕಾರಕ್ಕೆ ಬಂದಾಗ ಸ್ಥಳೀಯ ಸಂಸ್ಥೆಗಳಲ್ಲಿ ಶೇ. 20 ಸ್ಥಾನವನ್ನು ಮಹಿಳೆಯರಿಗೆ ಮೀಸಲಿಡಲಾಗಿತ್ತು. ಮಂಡಲ ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್‌ಗಳಲ್ಲಿ ಶೇ. 25 ಭಾಗವನ್ನು ಮಹಿಳೆಯರಿಗೆ ಮೀಸಲಾತಿ ನೀಡಿತು. ಈ ಮೀಸಲಾತಿಯ ನೀತಿಯಿಂದಾಗಿ 20 ಜಿಲ್ಲಾ ಪರಿಷತ್‌ಗಳಲ್ಲಿ ಸುಮಾರು 800 ಜನ ಹೆಂಗಸರು ಆಯ್ಕೆಯಾಗಿದ್ದರೆ, ಮಂಡಲ ಪಂಚಾಯಿತಿ ಹಂತದಲ್ಲಿ 11,280 ಜನ ಸ್ತ್ರೀಯರು ಆಯ್ಕೆಯಾಗಿದ್ದರು. ಇತರ ಸಂಘ - ಸಂಸ್ಥೆಗಳಲ್ಲಿನ ಮೀಸಲಾತಿ ನೀತಿಯಿಂದಾಗಿ ಒಟ್ಟಾಗಿ ಆಯ್ಕೆಯಾದ ಮಹಿಳೆಯರ ಸಂಖ್ಯೆ 40,000. ಇಷ್ಟಿದ್ದರೂ ಕರ್ನಾಟಕದಲ್ಲಿ 1.12 ಕೋಟಿ ಸ್ತ್ರೀಯರ ಜನ ಸಂಖ್ಯೆಯಲ್ಲಿ ಇದು ಅರ್ಧ ಲಕ್ಷವನ್ನು ಮೀರಲಿಲ್ಲ.

ಸ್ತ್ರೀಯರು ಆರ್ಥಿಕವಾಗಿ ಚುನಾವಣೆಗೆ ನಿಲ್ಲುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಜೊತೆಗೆ ರಾಜಕೀಯ ಪಕ್ಷಗಳು ಸ್ತ್ರೀಯರನ್ನು ಚುನಾವಣಾ ಕ್ರಮಕ್ಕೆ ಇಳಿಸಲು ಹಿಂಜರಿಯುತ್ತವೆ. ಸ್ತ್ರೀಯರು ಚುನಾವಣೆಯಲ್ಲಿ ಸ್ಪರ್ಧಿಸಿದರೆ ಗೆಲ್ಲಲಾರರೆಂಬ ಪ್ರತೀತಿ ಪ್ರಬಲವಾಗಿದೆ. ಪ್ರಸ್ತುತ ರಾಜಕೀಯದ ಸ್ವರೂಪ, ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವುದು, ಪುರುಷ ಪ್ರಧಾನ ಮೌಲ್ಯಗಳು ಸ್ತ್ರೀಯರು ನೇರವಾಗಿ ಸ್ಪರ್ಧಿಸಲು ಇರುವ ಪ್ರತಿಬಂಧಕಗಳು. ಸ್ತ್ರೀಯರಿಗೆ ಸಾಮರ್ಥ್ಯವಿದ್ದರೂ ಅವರಿಗೆ ಮಹತ್ವದ ಅಧಿಕಾರವನ್ನು ನೀಡಲಾಗುವುದಿಲ್ಲ, ಎಂದು ಸ್ವರ್ಣ ಪ್ರಭಾಕರ್ ಭಾವಿಸುತ್ತಾರೆ. ಪಕ್ಷದಲ್ಲಿಯೇ ನಾನು ಸ್ತ್ರೀಯರಿಗಾಗಿ ಹೋರಾಡಬೇಕಾಗುತ್ತದೆ. ಕಾಂಗ್ರೆಸ್ ಆಫೀಸಿನಲ್ಲಿ ಸ್ತ್ರೀಯರಿಗಾಗಿ ಒಂದು ಕೋಣೆಯನ್ನು ನಾನು ಪಡೆಯಲು ಹೋರಾಡಬೇಕಾಗುತ್ತದೆ. ಸ್ತ್ರೀಯರಿಗೆ ಮೀಸಲಾತಿಯನ್ನು ನೀಡುವುದರಿಂದ ಮಾತ್ರ ಅವರನ್ನು

ನಾವು ರಾಜಕೀಯ ಮುಖ್ಯವಾಹಿನಿಗೆ ಸೇರಿಸಲು ಸಾಧ್ಯವಾಗುತ್ತದೆಯೆಂದು ಚಂದ್ರಪ್ರಭಾ ಅರಸ್ ಭಾವಿಸುತ್ತಾರೆ. ಮೀಸಲಾತಿ ಇಲ್ಲದಿದ್ದರೆ ಹೆಂಗಸರು ಈ ಪ್ರಮಾಣದಲ್ಲಿ ರಾಜಕೀಯ ಪ್ರವೇಶ ಮಾಡಲು ಸಾಧ್ಯವಿಲ್ಲ. ಯಾವ ಪಕ್ಷವೂ ಸ್ತ್ರೀಯರಿಗೆ ಅಧಿಕಾರವನ್ನು ನೀಡುವುದಿಲ್ಲ ಎಂದು ಪ್ರಮೀಳಾ ನೇಸರ್ಗಿ ನುಡಿಯುತ್ತಾರೆ.

ಇಂದು ಒಟ್ಟು 20 ಜಿಲ್ಲಾ ಪಂಚಾಯಿತಿಗಳಲ್ಲಿ ಪಂಚಾಯಿತಿಯ ಅಧ್ಯಕ್ಷ ಸ್ಥಾನವನ್ನು ಮಹಿಳೆಯರು ಅಲಂಕರಿಸಿದ್ದಾರೆ. ಜೊತೆಗೆ ಮಹಿಳೆಯರು ಉಪಾಧ್ಯಾಕ್ಷರೂ ಆಗಿದ್ದಾರೆ. 175 ತಾಲ್ಲೂಕು ಪಂಚಾಯಿತಿಗಳಲ್ಲಿ 42ರಲ್ಲಿ ಮಹಿಳೆಯರು ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಆಗಿದ್ದಾರೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸ್ತ್ರೀಯರ ಭಾಗವಹಿಸುವಿಕೆಯನ್ನು ನೋಡಬಹುದು. ಒಟ್ಟು 5,641 ಗ್ರಾಮ ಪಂಚಾಯತಿಗಳಲ್ಲಿ 1,900 ಪಂಚಾಯಿತಿಗಳು ಸ್ತ್ರೀಯರ ನಾಯಕತ್ವದಲ್ಲಿ ನಡೆಯುತ್ತಿವೆ.

ಶೇ. 33.33 ಮೀಸಲಾತಿಯಿಂದ ನನಗೆ ಸಂತೋಷವಾಗಿದೆ. ಆದರೆ ನಾವು ಏನನ್ನು ಸಾಧಿಸಿದ್ದೇವೆ ? ನಾವು ಶೇ. 33.33 ಹೆಂಗಸರನ್ನು ಮನೆಯಿಂದ ಪಂಚಾಯತ್‌ಯವರಿಗೆ ಹೋಗುವ ಹಾಗೆ ಮಾಡಿದ್ದೇವೆ. ಆದರೆ ಇದರ ಹೊರತು ಬೇರೆ ಏನನ್ನಾದರೂ ಸಾಧಿಸಿದ್ದೇವೆಯೆ ? ಕೆಲವೊಮ್ಮೆ ಮೀಸಲಾತಿ ಒಂದು ರೀತಿಯ ಹಿಂಸೆಯ ಅನುಭವ ಆಗಲು ಸಾಧ್ಯ. "ತಿಳುವಳಿಕೆಯಿಲ್ಲದ, ಅನುಭವಿಯಾದ, ಅನಕ್ಷರಸ್ಥೆಯಾದ ಎಸ್.ಸಿ. ಹೆಂಗಸು ಮೀಸಲಾತಿಯಿಂದಾಗಿ ಅಥಣಿ ತಾ॥ ಪಂಚಾಯಿತಿ ಅಧ್ಯಕ್ಷಳಾದಳು. ಆಕೆ 8-10 ರೂ.ಗಳಿಗೆ ಕೂಲಿ ಮಾಡುವ ಹೆಂಗಸು. ಅಧ್ಯಕ್ಷಳಾಗಿ ಆಯ್ಕೆಯಾದ ಮರುದಿನ ಆಕೆ ಕೂಲಿಗೆ ಹೋದಾಗ, ಅಧ್ಯಕ್ಷಳು ಕೂಲಿ ಮಾಡುವುದನ್ನು ಕುರಿತು ಅವಹೇಳನ ಮಾಡತೊಡಗಿದರು. ಅವಳು "ನಾನು ಅಧ್ಯಕ್ಷಳಾಗಿ ಆಯ್ಕೆಯಾದುದರಿಂದ ಕೂಲಿ ಮಾಡುವುದನ್ನು ಬಿಡಬೇಕೆ ? ಈಕೆ ಅಧ್ಯಕ್ಷಳಾಗಿ ಆಯ್ಕೆಯಾದುದರಿಂದ ಸಿಗುವ ಅಧಿಕಾರ ಅಂತಸ್ತುಗಳ ವೈರುಧ್ಯಗಳನ್ನು ಮೀರುವುದು ಹೇಗೆ ? ಆಕೆ ಕೂಲಿ ಮಾಡಿಯು ಪಂಚಾಯಿತ್ತಿ ಅಧ್ಯಕ್ಷಳಾಗಿ ಕಾರ್ಯ ನಿರ್ವಹಿಸುವಂತಹ ಸಾಂಸ್ಕೃತಿಕ ವಾತಾವರಣ ನಮ್ಮಲ್ಲಿದೆಯೆ ? ಆರ್ಥಿಕ ಭದ್ರತೆಯಿಲ್ಲದ ರಾಜಕೀಯ ಅಧಿಕಾರ ಅಸ್ತಿತ್ವದಲ್ಲಿರಲು ಸಾಧ್ಯವೆ ? ಇವು ಒಂದೊಕ್ಕೊಂದು ತಳುಕು ಹಾಕಿಕೊಂಡಿವೆಯೆ ?

ರಾಜಕೀಯ ವಲಯದಲ್ಲಿ ಸ್ತ್ರೀಯರು ಸಂಪ್ರಾದಾಯಿಕ ರಾಜಕೀಯ ಚೌಕಟ್ಟಿಗೆ ಸೇರುವುದರಿಂದ ಅವರು ಒಂದು ಹೊಸ ರಾಜಕೀಯ ಪರಿಕಲ್ಪನೆಯನ್ನು ಹುಟ್ಟು ಹಾಕಬಲ್ಲರೆ ? ಸ್ತ್ರೀಯರು ಮೀಸಲಾತಿಯ ಹಿನ್ನೆಲೆಯಲ್ಲಿ ಅಧಿಕಾರಕ್ಕೆ ಬರುವುದು ಕೇವಲ ಸಾಂಕೇತಿಕವೆ. ಅವರು ಕೇವಲ ಪುರುಷ ಪ್ರತಿನಿಧಿಯಾಗಿ ಮಾತ್ರ ಕೆಲಸ ಮಾಡುತ್ತಾರೆಯೆ ? ರಾಜಕೀಯದಲ್ಲಿ ಸ್ತ್ರೀಯರ ಸಂಖ್ಯೆ ಪ್ರಮಾಣ ಸ್ತ್ರೀಯರ ಅಭಿವೃದ್ಧಿಯ ಮಾನದಂಡವೆಂದು ಪರಿಗಣಿಸಬೇಕೆ ? ಹೀಗೆ ಪರಿಗಣಿಸುವುದಾದರೆ ಸಂಖ್ಯೆಗೂ ಹಾಗೂ ವಾಸ್ತವಿಕ ಪರಿಸ್ಥಿತಿಗೂ ಸಂಬಂಧ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಕೇರಳದಲ್ಲಿ ಅಕ್ಷರ ಜ್ಞಾನ, ತಿಳುವಳಿಕೆ ಪ್ರಮಾಣ ಹೆಚ್ಚಿದ್ದರೂ, ಅಲ್ಲಿ ಶಾಸಕಿಯರ ಸಂಖ್ಯೆ ಕಡಿಮೆ ಇದ್ದರೆ ತುಂಬಾ ಹಿಂದುಳಿದ ರಾಜ್ಯಗಳಾದ ಬಿಹಾರ, ಉತ್ತರ ಪ್ರದೇಶದಲ್ಲಿ ರಾಜಕೀಯವಾಗಿ ಪ್ರತಿನಿಧಿತ ಮಹಿಳೆಯರ ಸಂಖ್ಯೆ ಹೆಚ್ಚಿರುವುದು ಕಂಡು ಬರುತ್ತದೆ.

ಪಿತೃಪ್ರಧಾನತೆ ಮತ್ತು ಮಹಿಳಾ ಮೀಸಲಾತಿ

ಸಂವಿದಾನದ 73 ಹಾಗೂ 74ರ ತಿದ್ದುಪಡಿಯಿಂದಾಗಿ ಮಹಿಳೆಯರಿಗೆ ನೀಡಲಾಗಿರುವ ಮೀಸಲಾತಿಯಿಂದಾಗಿ ಕಲ್ಪನೆಗೂ ಮೀರಿದ ಪ್ರಮಾಣದಲ್ಲಿ ಸ್ತ್ರೀಯರು ರಾಜಕೀಯ ವಾಹಿನಿಯಲ್ಲಿ ಸೇರಿದ್ದಾರೆ. ರಾಜಕೀಯವೆಂದರೆ ಪುರುಷರಿಗೆ ಸೀಮಿತವಾದುದು, ಪುರುಷರಿಗೆ ಮಾತ್ರ ಸಾಧ್ಯವೆಂಬ ಪ್ರಚಲಿತ ಧೋರಣೆಯು ಅನಿವಾರ್ಯವಾಗಿ ಬದಲಾಗುತ್ತಿದೆ. ಸಂವಿಧಾನ ಮಹಿಳೆಯರಿಗೆ ನೀಡಿದ ಈ ಮೀಸಲಾತಿ ಹಕ್ಕಿನಿಂದಾಗಿ ಮಹಿಳೆಯರ ರಾಜಕೀಯ ಪ್ರವೇಶವನ್ನು ನ್ಯಾಯ ಸಮ್ಮತಿಗೊಳಿಸುವುದರ ಜೊತೆಗೆ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ಒಂದು ಬೆಂಬಲ, ಪ್ರೋತ್ಸಾಹ ಸಿಗುತ್ತಿರುವುದನ್ನು ನಾವು ನೋಡಬಹುದು.

ಹೀಗೆ ಮಹಿಳೆಯರಿಗೆ ಸಿಗುತ್ತಿರುವ ಬೆಂಬಲ, ಪ್ರೋತ್ಸಾಹದ ಸ್ವರೂಪ, ಉದ್ದೇಶವನ್ನು ವಿಶ್ಲೇಷಿಸಿದಾಗ ಕೆಲವು ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಈ ಬೆಂಬಲ, ಪ್ರೋತ್ಸಾಹದ ಸ್ವರೂಪವೇನು ? ಇದು

ಸಮಗ್ರತೆಯಿಂದ ಕೂಡಿದೆಯೆ ? ಕೇವಲ ಭೌತಿಕ ಸ್ವರೂಪವುಳ್ಳದ್ದೆ ? ಮೊದಲ ಹಂತದಲ್ಲಿ ಇದು ಅನಿವಾರ್ಯವೆ ? ಕ್ರಮೇಣ ಈ ಸ್ವರೂಪ ಬದಲಾಗಬಹುದೆ ?

ಪಕ್ಷಗಳು ಸ್ತ್ರೀಯರಿಗೆ ಅವಕಾಶವನ್ನು ನೀಡಲು ಸಾಮಾನ್ಯವಾಗಿ ಹಿಂಜರಿಯುತ್ತಿದ್ದು ಇಂದು ಮೀಸಲಾತಿ ಯಿಂದಾಗಿ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಿದೆ. ಮಹಿಳಾ ಅಭ್ಯರ್ಥಿಗಳಿಗಾಗಿ ಪಕ್ಷಗಳು ಇಂದು ಹುಡುಕಾಡುವ ಪರಿಸ್ಥಿತಿಯನ್ನು ತಲುಪಿದ ನಿದರ್ಶನ-ಗಳನ್ನು ನಾವು ನೋಡಬಹುದು. ಹೀಗೆ ಸೂಕ್ತ ಮಹಿಳಾ ಅಭ್ಯರ್ಥಿಗಳನ್ನು ಹುಡುಕುವಾಗ ಸೀಟು ನೀಡುವಾಗ ಈಗಾಗಲೇ ಶಕ್ತಿಶಾಲಿ ರಾಜಕಾರಣಿಗಳ ಮಗಳು, ಸೊಸೆ, ಹೆಂಡತಿ ಇಲ್ಲವೇ ಹತ್ತಿರ ಸಂಬಂಧಿಕರಿಗೆ ಆದ್ಯತೆ ನೀಡಲಾಗುತ್ತದೆ. ಅಂತಹ ಮಹಿಳಾ ಅಭ್ಯರ್ಥಿಗಳು ದೊರಕದೇ ಇದ್ದಾಗ, ಯಾವುದೇ ಕುಟುಂಬದಲ್ಲಿ ಮಾತುಗಾರಿಕೆ ಬಲ್ಲ ವಿದ್ಯಾಭ್ಯಾಸ ಧೈರ್ಯ, ಜನಬಳಕೆಯಿರುವ ಮಹಿಳೆಯರನ್ನು ರಾಜಕೀಯ ಪಕ್ಷಗಳು ಗುರುತಿಸಿ ಸೀಟು ನೀಡಿದೆ. ಇಂತಹ ಆಹ್ವಾನಗಳನ್ನು ಕುಟುಂಬಗಳು ಇದೊಂದು ಅಪರೂಪದ ಅವಕಾಶವೆಂದೇ ಭಾವಿಸುತ್ತದೆ.

ಗ್ರಾಮ ಪಂಚಾಯಿತಿ ಚುನಾವಣೆಗಳು ಪಕ್ಷಾತೀತವಾಗಿದ್ದರೂ, ಪಕ್ಷಗಳ ಹಿನ್ನಲೆಯಲ್ಲಿಯೇ ಮಹಿಳೆಯರನ್ನು ಗುರುತಿಸಿ, ಆರಿಸಿ ಅವರನ್ನು ಚುನಾವಣೆಗೆ ನಿಲ್ಲಿಸಲಾಗುತ್ತದೆ. ಹೀಗೆ ಅವರು ಅನಾಯಾಸವಾಗಿ ಪಕ್ಷದ ಸದಸ್ಯರಾಗುತ್ತಾರೆ. ಗ್ರಾಮ ಪಂಚಾಯಿತಿ ಚುನಾವಣಾ ಮಟ್ಟದಲ್ಲಿ ಸ್ಪರ್ಧೆ, ಹಣದ ಪ್ರಭಾವ ಕಡಿಮೆ ಪ್ರಮಾಣದಲ್ಲಿ ಕಂಡುಬಂದರೂ ತಾ॥ ಹಾಗೂ ಜಿಲ್ಲಾ ಮಟ್ಟದಲ್ಲಿ ಚುನಾವಣೆಗಳು ಪಕ್ಷದ ಆಧಾರದ ಮೇಲೆ ನಡೆಯುವುದರಿಂದ ಇವುಗಳ ಪ್ರಭಾವವನ್ನು ನೋಡಬಹುದು. ಪಕ್ಷಗಳು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಆಕೆಯ ಕುಟುಂಬದ ಹಿರಿಯರ, ಮಾವ, ಗಂಡ, ಮೈದುನ ಮುಂತಾದವರ ಸಮ್ಮತಿಯೊಂದಿಗೆ ಆಯ್ಕೆ ಮಾಡುವುದು ಕಂಡುಬಂದಿದೆ. ಚಿಕ್ಕಮಗಳೂರಿನ ಜಾವಳ ಕ್ಷೇತ್ರದಿಂದ ಆರಿಸಿ ಬಂದ ಡಿ.ಎಲ್. ವಸಂತಕುಮಾರಿ ರಾಜಕೀಯ ವಾಗಿ ಪ್ರತಿಷ್ಠಿತ ಕುಟುಂಬದ ಹಿನ್ನೆಲೆಯಲ್ಲಿ ಆರಿಸಿ ಬಂದವರು. ಯಾವುದೇ ರಾಜಕೀಯ ಹಿನ್ನೆಲೆಯಿಲ್ಲದೇ ರಾಯಚೂರಿನ ಕುಪ್ಪಗಿಯ ಹೇಮಲತಾ ಚುನಾವಣೆಗೆ ಇಳಿದದ್ದು ಹೀಗೆ – ಶಾಲಾ ಕಾಲೇಜಿನಲ್ಲಿ ಕ್ರಿಯಾಶೀಲ ಳಾಗಿದ್ದ ಈಕೆಯ ವಾಕ್‌ಚಾತುರ್ಯವನ್ನು ಗಮನಿಸಿದ ಶಾಸಕ ಬಸವರಾಜ ರಾಯರೆಡ್ಡಿ ಬೆಂಬಲದಿಂದಾಗಿ ಈಕೆ ಸೀಟು ಪಡೆದಳಲ್ಲದೆ, ಚುನಾವಣೆಯಲ್ಲಿ ಆಯ್ಕೆಯಾಗಿ ದ್ದಾಳೆ.

ಚುನಾವಣೆಯ ಪ್ರಚಾರದ ಕಾರ್ಯವನ್ನು ಸಂಪೂರ್ಣ ವಾಗಿ ಚುನಾವಣೆಗೆ ನಿಂತ ಮಹಿಳಾ ಅಭ್ಯರ್ಥಿಯ ಗಂಡ ಅಥವಾ ಪಕ್ಷದವರು ವಹಿಸಿಕೊಳ್ಳುತ್ತಾರೆ. ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಮಹಿಳಾ ಅಭ್ಯರ್ಥಿಗಳು ಭಾಗ ವಹಿಸಿದ್ದರೂ ಅವರ ಪ್ರಚಾರ ಕಾರ್ಯ ಸಾಮಾನ್ಯವಾಗಿ ಚುನಾವಣೆಯ ಹಿಂದಿನ ದಿನಕ್ಕೆ ಸೀಮಿತವಾಗಿದೆ. ಪ್ರಚಾರ ಕಾರ್ಯದಲ್ಲಿ ಹೆಂಗಸರು ಭಿನ್ನವಾದ ಹಾದಿಯನ್ನು ಆಯ್ಕೆ ಮಾಡಿಕೊಂಡಿರುವುದು ಕಂಡುಬರುವುದಿಲ್ಲ. ಪ್ರಚಾರ ಕಾರ್ಯದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಪುರುಷರೇ ವಹಿಸಿಕೊಳ್ಳುವುದರಿಂದ ಪ್ರಚಾರ ಕಾರ್ಯವು ಭಿನ್ನವಾಗಿರುವುದು ಸಾಧ್ಯವಿಲ್ಲ. ಚುನಾವಣೆಗಾಗಿ ಸುಮಾರು 5 ಸಾವಿರದಿಂದ 20 ಸಾವಿರದವರೆಗೆ ಖರ್ಚು ಮಾಡಿದ ಮಹಿಳೆಯರೂ ಇದ್ದಾರೆ. ಆದರೆ ಈ ಹಣ ವನ್ನು ಖರ್ಚು ಮಾಡುವುದು ಗಂಡಸರು. ಹೇಗೆ ಹಣ ವನ್ನು ಖರ್ಚು ಮಾಡಿದಿರೆಂದು ಕೇಳಿದ ಪ್ರಶ್ನೆಗೆ ಒಬ್ಬ ಮಹಿಳೆ, ಅದೇ ಕುಡಿಯುವ ಜನವಿರುತ್ತಾರಲ್ಲ. (ಅರ್ಥ ಎಸ್.ಸಿ.ಗಳೆಂದು) ಅವರಿಗೆಲ್ಲಾ ಕುಡಿಸಿದ್ದಾಯಿತು. ಚುನಾವಣೆಯ ಹಿಂದಿನ ದಿನ ಮನೆಮನೆಗೆ ಹೋಗಿ ಅರಿಶಿನ ಕುಂಕುಮ, ಒಂದು ಬ್ಲೌಸ್ ಬಟ್ಟೆ ಕೊಟ್ಟು ಮತ ಯಾಚಿಸಿದ ಮಹಿಳೆಯರೂ ಇದ್ದಾರೆ. ಚುನಾವಣೆಗೆ ಖರ್ಚು ಮಾಡದೇ ಗೆದ್ದುಬಂದ ಮಹಿಳೆಯರೂ ಇದ್ದಾರೆ. ಮಹಿಳೆಯರು ಗೆದ್ದು ಬರುವವರೆಗೆ ಸಂಪೂರ್ಣ ನಿರ್ಧಾರ ಮಾಡುವ ಪುರುಷರು ಚುನಾವಣೆಯಲ್ಲಿ ಗೆದ್ದು ಬಂದ ಮೇಲೆ ಈ ಮಹಿಳೆಯರ ಹಿನ್ನೆಲೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿರುವುದು ಕಂಡುಬರುತ್ತಿದೆ.

ಕನಕಪುರ ತಾಲ್ಲೂಕಿನ ಪ್ರಭಾವಶಾಲಿ ರಾಜಕಾರಣಿ ಆಕಸ್ಮಿಕವಾಗಿ ಮರಣ ಹೊಂದಿದ ನಂತರ ಗ್ರಾಮದವರು ಆತನ ಹೆಂಡತಿಯನ್ನು ಚುನಾವಣೆಗೆ ನಿಲ್ಲಲು ಒತ್ತಡ ಹಾಕಿದರು. ಹಾಗಾಗಿ ಚುನಾವಣೆಗೆ ನಿಲ್ಲುವುದು ಅನಿವಾರ್ಯವಾಯಿತೆನ್ನುವ ಈಕೆ ಗ್ರಾಮ ಪಂಚಾಯ್ತಿಯ

ಅಧ್ಯಕ್ಷಳೂ ಆಗಿದ್ದಾಳೆ. ಗಂಡ ಬದುಕಿದ್ದಾಗ ಒಂದು ದಿನವೂ ಮನೆಯಿಂದ ಈಚೆ ಕಾಲಿಡುತ್ತಿರಲಿಲ್ಲವೆಂದು ಒಪ್ಪಿಕೊಳ್ಳುವ ಈಕೆ ಒಂದೆರಡು ಬಾರಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಳೆ. ಚುನಾವಣೆಯ ಪ್ರಚಾರದ ಕೆಲಸವನ್ನೆಲ್ಲವನ್ನು ನನ್ನ ಮೈದುನ ನೋಡಿಕೊಂಡ. ನಾನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಈಗ ನನಗೆ ಈ ಕೆಲಸದಲ್ಲಿ ಆಸಕ್ತಿ ಮೂಡಿದೆ. ಆದರೆ ನನ್ನ ಮೈದುನ ಈಗ ರಾಜೀನಾಮೆ ಕೊಟ್ಟುಬಿಡು ಎಂದು ಹೇಳುತ್ತಿದ್ದಾರೆ ಆದರೆ ನನಗೆ ರಾಜೀನಾಮೆ ಕೊಡಲು ಇಷ್ಟವಿಲ್ಲವೆಂದು ಹೇಳುತ್ತಾರೆ.

ಗ್ರಾಮದಲ್ಲಿ ಆಗಬೇಕಾದ ಕೆಲಸ ಕಾರ್ಯಗಳನ್ನು ಪಟ್ಟಿ ಮಾಡುವುದು, ಸಮಸ್ಯೆಗಳನ್ನು ಗುರುತಿಸುವುದು, ಹೆಂಡತಿಯರ ಮೂಲಕ ಅವುಗಳನ್ನು ಮೀಟಿಂಗ್‌ನಲ್ಲಿ ಚರ್ಚಿಸುವಂತೆ ಮಾಡುವುದು, ಊರಿನ ಗಣ್ಯವ್ಯಕ್ತಿಗಳು ಅಧ್ಯಕ್ಷರಾಗಿದ್ದರೆ, ಹೆಂಗಸರು ಮಾತನಾಡದೇ ಇರುವುದು ಸಾಮಾನ್ಯವಾಗಿ ಕಂಡುಬರುವ ಸಂಗತಿಗಳಾಗಿವೆ. ಆ ದೂರ ಗ್ರಾಮದಿಂದ ಸಿಡಿಹೊಸಕೋಟೆ ಪಂಚಾಯಿತಿಗೆ ಆಯ್ಕೆಯಾದ ಮಹಿಳೆಯ ಬದಲಾಗಿ ಆಕೆಯ ಗಂಡನೆ ಮೀಟಿಂಗ್‌ಗಳಲ್ಲಿ ಭಾಗವಹಿಸುತ್ತಾನೆ. ಹೆಂಗಸರು ಮೀಟಿಂಗ್‌ನಲ್ಲಿ ಮಾತನಾಡಲ್ಲ. ಎಷ್ಟೋ ಸಾರಿ ನಾನು ನಮ್ಮ ಹೆಂಗಸರನ್ನು ಗಾಡಿಯಲ್ಲಿ ಕರೆದುಕೊಂಡು ಹೋಗಿ ಸಹಿ ಹಾಕಿದ ನಂತರ ಗಾಡಿಯಲ್ಲಿ ಮನೆಗೆ ಕರೆದುಕೊಂಡು ಬಂದುಬಿಟ್ಟು ನಾನೇ ಮೀಟಿಂಗ್‌ನಲ್ಲಿ ಭಾಗವಹಿಸುತ್ತೇನೆ ಎಂದು ನಗುತ್ತಾರೆ. ಹೆಂಗಸರಿಗೆ ಎಷ್ಟೋ ವಿಷಯಗಳು ಗೊತ್ತಾಗುವುದಿಲ್ಲ. ಕೆಲವು ಪ್ರಮುಖ ಯೋಜನೆಗಳನ್ನು ಕುರಿತು ಚರ್ಚಿಸುವಂತಹ ಮಹತ್ವವಾದ ಮೀಟಿಂಗ್‌ಗಳಲ್ಲಿ ನಾನು ತಪ್ಪದೇ ಭಾಗವಹಿಸುತ್ತೇನೆ. ಇವೆಲ್ಲ ಹೆಂಗಸರಿಗೆ ತಿಳಿಯುವುದಿಲ್ಲ. ನಮ್ಮ ಊರಿನಲ್ಲಿ ಯಾವ ಕೆಲಸಗಳಾಗಬೇಕೆಂದು ನಮ್ಮ ಹೆಂಗಸರಿಗೆ ಗೊತ್ತಾಗುವುದಿಲ್ಲ. ನಮ್ಮ ಊರಿಗೆ 30 ಸಾವಿರ ಸ್ಯಾಂಕ್ಷನ್ ಮಾಡಿಸಿ ಊರಿನ ಚರಂಡಿ ಮಾಡಿಸಿದ್ದೇನೆ. ಇಂದಿರಾ ಅವಾಜ್ ಯೋಜನೆಯನ್ನು ನಮ್ಮ ಊರಿಗೆ ಕೊಡಿಸಿದ್ದೇನೆ. ನಮ್ಮ ಊರಿನಲ್ಲಿ ಹಾಗೂ ಸಿಡಿ ಹೊಸಕೋಟೆಯಲ್ಲಿ ಆದಷ್ಟು ಕೆಲಸ ಬೇರೆ ಯಾವ ಊರಿನಲ್ಲಿಯೂ ಆಗಿಲ್ಲ. ಪ್ರಭಾವಶಾಲಿಯಾದ ಅಧ್ಯಕ್ಷರೆದುರು ಹೆಂಗಸರೂ ಮಾತನಾಡುವುದಿಲ್ಲ.

ಇದೇ ಗ್ರಾಮದ ಮುನಿಯಮ್ಮ ಇತ್ತೀಚೆಗಷ್ಟೇ ಗಂಡನನ್ನೂ ಕಳೆದುಕೊಂಡಾಕೆ ಗ್ರಾಮದವರಿಗೆಲ್ಲ ಆಕೆಯ ಪರಿಚಯುಸ್ಥೆ. ಚುನಾವಣೆಗೆ ನಿಲ್ಲುವಂತೆ ಊರಿನವರೆಲ್ಲ ಒತ್ತಾಯ ಮಾಡಿದರೂ, ಆಕೆ ಒಪ್ಪಲಿಲ್ಲ "ನೋಡಿ ನಮ್ಮ ಮನೆಯಲ್ಲಿ ಯಾರೂ ಗಂಡಸರಿಲ್ಲ ಈಗ ಪಂಚಾಯಿತಿ ಸದಸ್ಯೆಯಾಗಿದ್ದಾರಲ್ಲ, ಅವರ ಯಜಮಾನರು ಎಲ್ಲಾ ಕೆಲಸ ಮಾಡ್ತಾರೆ. ಬೇರೆಯವರ ಹೆಸರಿನಲ್ಲಿ ಕಾಂಟ್ರಾಕ್ಟ್ ಕೊಡಿಸಿ ಇವರೇ ಎಲ್ಲ ಕೆಲಸ ಮಾಡಿಸುತ್ತಾರೆ. ಅಲ್ಲದ ನಾನು ಓಡಾಡಿ ಮಾಡಲು ಸಾಧ್ಯವಾಗುತ್ತದೆಯೆ? ಈ ತರ ಚುನಾವಣೆ, ರಾಜಕೀಯಕ್ಕೆ ಹೋಗುವುದೂ ಬೇಡ, ಈ ಜನರ ಹತ್ತಿರ ಅನ್ನಿಸಿಕೊಳ್ಳುವುದು ಬೇಡ. ಗಂಡಸರು ಇದ್ದರೆ, ಓಡಾಡಿ ಮಾಡ್ತಾರೆ. ನಾನು ಒಬ್ಬಂಟಿ ಹೆಂಗಸು ನಾನು ಇದೆಲ್ಲಾ ಮಾಡಲಾಗುತ್ತ ಅಂತ ಸುಮ್ಮನಾದೆ. ಈ ಕಾರಣದಿಂದ ಮುನಿಯಮ್ಮ ಹಿಂಜರಿದು ರಾಜಕೀಯದಿಂದ ದೂರ ಉಳಿಯಲು ತೀರ್ಮಾನಿಸಿದರು.

ನೆಲಮಂಗಲ ತಾಲ್ಲೂಕಿನ ಜಯಂತಿ ರಾಮಸ್ವಾಮಿ ಹೆಚ್ಚು ಮತದಿಂದ ಗೆದ್ದು ಬಂದಿರುವುದಕ್ಕೆ ಕಾರಣ ಆಕೆಯ ಪ್ರಭಾವಶಾಲಿ ಕುಟುಂಬದ ಹಿನ್ನಲೆ ಹಾಗೂ ರಾಜಕೀಯದಲ್ಲಿ ಸಕ್ರಿಯ ಸ್ಥಾನವನ್ನು ಹೊಂದಿರುವ ಗಂಡನ ಪ್ರಭಾವ. "ನಾನು ನನ್ನ ಯಜಮಾನರ ಪ್ರಭಾವದಿಂದ ಗೆದ್ದು ಬಂದಿದ್ದರೂ ಪ್ರತಿಯೊಂದಕ್ಕೂ ಅವರನ್ನು ಅವಲಂಬಿಸುವುದಿಲ್ಲ. ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುತ್ತೇನೆ. ಸಲಹೆಗಳು ಅಗತ್ಯವಾಗಿದ್ದಾಗ ಮಾತ್ರ ಅವರ ಅಭಿಪ್ರಾಯವನ್ನು ಕೇಳುತ್ತೇನೆ" ಅನ್ನುತ್ತಾರೆ. "ನನಗೆ ಈ ಕೆಲಸದಲ್ಲಿ ಅನುಭವ ಬರುವವರೆಗೆ ಪತಿಯ ನೆರವು ಅನಿವಾರ್ಯವೆಂದು" ಆನೇಕಲ್ ತಾ॥ ಪಂಚಾಯಿತಿ ಅಧ್ಯಕ್ಷೆ ಗೌರಮ್ಮ ಒಪ್ಪಿಕೊಳ್ಳುತ್ತಾರೆ.

ಇದುವರೆಗೂ ಕುಟುಂಬದ ಜವಾಬ್ದಾರಿಯನ್ನು ಹೊರುತ್ತಿದ್ದ ಮಹಿಳೆಯರಿಗೆ ಸಂವಿಧಾನ ನೀಡಿದ ಮೀಸಲಾತಿಯಿಂದಾಗಿ ಪ್ರಸ್ತುತ ಪರಿಸ್ಥಿತಿಯಲ್ಲಿ ಪುರುಷರನ್ನು ಅವಲಂಬಿಸಬೇಕಾದುದು ಅನಿವಾರ್ಯವೆಂದು ಕಂಡುಬರುತ್ತದೆ. ಅಭ್ಯರ್ಥಿಯ ಆಯ್ಕೆ, ಪ್ರಚಾರ, ಪಂಚಾಯ್ತಿಯ ಮೀಟಿಂಗ್‌ಗಳು ನಡೆಯುವಲ್ಲಿ ಪುರುಷರ ಪ್ರಾಬಲ್ಯ ಕಂಡುಬರುತ್ತದೆ. ಮಹಿಳೆಯರ ಅನುಭವದ ಕೊರತೆ, ಕುಟುಂಬದಲ್ಲಿನ ಪುರುಷರ ಸಮ್ಮತಿ, ಮಹಿಳೆಯರು ಚುನಾವಣೆಯಲ್ಲಿ ಗೆದ್ದಿದ್ದರೂ ಸೂತ್ರದಾರರು ಪುರುಷರೇ. ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬಹುದು. ಮೀಸಲಾತಿ ಅವಕಾಶವಿಲ್ಲದಿದ್ದರೆ, ಈಗ

ಚುನಾವಣೆಯಲ್ಲಿ ಗೆದ್ದುಬಂದ ಕುಟುಂಬದ ಪುರುಷರಿಗೆ, ರಾಜಕೀಯ ಹಿನ್ನಲೆಯಿರುವವರಾದರೆ ಆ ಹಿನ್ನಲೆಯಿರುವ ಪುರುಷರು ಹೆಂಡತಿಯರ ಮೂಲಕ ಹೆಚ್ಚಿನ ಅಧಿಕಾರವನ್ನು ಪಡೆಯುತ್ತಿದ್ದಾರೆ. ನೆಲಮಂಗಲ ತಾ॥ ಗ್ರಾಮ ಪಂಚಾಯಿತಿಯೊಂದರಲ್ಲಿ ಉಪಾಧ್ಯಕ್ಷರಾದ ಪಾರ್ವತಮ್ಮನನ್ನು ಭೇಟಿಯಾಗಲು ಜನರು ಮನೆಗೆ ಬಂದರೆ ಆಕೆಯ ಯಜಮಾನರು ಆಕೆ ಯಾಕೆ ಬೇಕು, ಏನು ಕೆಲಸವಾಗಬೇಕು ಹೇಳಿ, ನಾನು ಮಾಡಿಸಿಕೊಡುತ್ತೇವೆಂದು ಹೇಳುತ್ತಾರೆ.

ಅನುಭವಿಯಾದ ರಾಜಕೀಯ ಪಕ್ಷಗಳ ನಡುವೆ ವ್ಯತ್ಯಾಸಗಳನ್ನು ಗುರುತಿಸಲಾಗದ ಮಹಿಳೆಯರು ತಮ್ಮ ಕೈಗೆ ಬಂದಿರುವ ಈ ರಾಜಕೀಯ ಅಧಿಕಾರವನ್ನು ಸ್ವತಂತ್ರವಾಗಿ ಚಲಾಯಿಸಬಲ್ಲರೆ? ಪ್ರಸ್ತುತ ಪರಿಸ್ಥಿತಿಯಲ್ಲಿ ಪುರುಷರ ಕೈಗೊಂಬೆಗಳಾಗಿ ಪ್ರತಿನಿಧಿಸುತ್ತಿಲ್ಲವೆ? ಪುರುಷರಿಗಿಂತ ಭಿನ್ನವಾದ ನಿಲುವು, ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲರೆ? ಈ ನಿರ್ಧಾರ ತೆಗೆದುಕೊಳ್ಳಲು ಪೂರಕವಾದ ವಾತಾವರಣವಿದೆಯೆ ?

ಯೋಜನೆಗಳು ಹಾಗೂ ಪಂಚಾಯತ್ ರಾಜ್

ಪಂಚಾಯತ್‌ರಾಜ್ ಚರಿತ್ರೆಯ ಪ್ರಾರಂಭದಿಂದಲೂ, ಈ ವ್ಯವಸ್ಥೆಯನ್ನು ಸರ್ಕಾರದ ಯೋಜನೆಗಳನ್ನು ಗ್ರಾಮ ಮಟ್ಟದವರೆಗೆ ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವ ಒಂದು ಆಡಳಿತ ವ್ಯವಸ್ಥೆಯಾಗಿರುವುದನ್ನು ನಾವು ನೋಡಬಹುದು. ಇದು ಒಂದು ಹಂತದಲ್ಲಿ ಸರ್ಕಾರಗಳು ಹಮ್ಮಿಕೊಂಡ ಯೋಜನೆಗಳ ಮೂಲೋದ್ದೇಶಗಳನ್ನು ಪ್ರಶ್ನಿಸುವುದರ ಬದಲಾಗಿ ಅನುಷ್ಠಾನಕ್ಕೆ ತರುವ ಪ್ರಕ್ರಿಯೆಯಲ್ಲಿ ಮಾತ್ರ ಜನರು ಭಾಗವಹಿಸುತ್ತಿರುವುದು ಕಂಡುಬರುತ್ತಿದೆ. ಅನುಷ್ಠಾನಕ್ಕೆ ತರುವ ಪ್ರಕ್ರಿಯೆಯಲ್ಲಿ ಜನರು ಭಾಗವಹಿಸುವುದೇ "ಜನರ ಕೈಗೆ ನೀಡಿದ ಅಧಿಕಾರ"ವೆಂಬ ಭ್ರಮೆಯನ್ನು ಸರ್ಕಾರ ಒಂದು ಕಡೆಗೆ ಹುಟ್ಟುಹಾಕುತ್ತಿದೆ. ಜನರೂ ಯೋಜನೆಗಳನ್ನು ಜಾರಿಗೆ ತರುವ ಪ್ರಕ್ರಿಯೆಯಲ್ಲಿ ಅತ್ಯುತ್ಸಾಹದಿಂದ ಭಾಗವಹಿಸುತ್ತಿರುವುದನ್ನು ಗಮನಿಸಿದರೆ, ಜನತೆಯೂ ಈ ಭ್ರಮೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಂತೆ ಕಾಣುತ್ತದೆ. ಹಲವಾರು ದಶಕಗಳಿಂದ ಸರ್ಕಾರ ಹಲವಾರು ಯೋಜನೆಗಳನ್ನು ರಚಿಸುವುದು, ಜನಪ್ರಿಯಗೊಳಿಸುವುದು, ಹೊಸ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುವುದು. ಈ ಹುನ್ನಾರಗಳನ್ನು ಗಮನಿಸಿದರೆ ಸರ್ಕಾರಗಳು ಯೋಜನೆಗಳನ್ನು ಜಾರಿಗೆ ತರುವಲ್ಲಿನ ವೈಫಲ್ಯತೆಯನ್ನು ನಾವು ಗಮನಿಸಬಹುದು. ಸಂಕೀರ್ಣವಾಗಿ ನೆಲೆಯೂರಿರುವ ಭ್ರಷ್ಟಾಚಾರ, ಅಧಿಕಾರಶಾಹಿಯ ಪ್ರಬಲತೆ, ಅಧಿಕಾರ ಲಾಲಸೆ, ಈ ವೈಫಲ್ಯತೆಗೆ ಮುಖ್ಯಕಾರಣ. ಸಮಸ್ಯೆಯ ಮೂಲವನ್ನು ಗುರುತಿಸಿ ಅದನ್ನು ಬೇರು ಸಹಿತ ಕಿತ್ತುಹಾಕುವ ಪ್ರಯತ್ನವನ್ನು ಮಾಡುವುದರ ಬದಲಾಗಿ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಯೋಜನೆಗಳನ್ನು ಜಾರಿಗೆ ತರುವ ವ್ಯವಸ್ಥೆಯನ್ನಾಗಿ ಮಾಡುತ್ತಿದೆ.

"ಸರ್ಕಾರದಿಂದ ಯಾವುದೇ ಯೋಜನೆಗಳು ಜಾರಿಗೆ ಬಂದರೂ ಅದು ಜನತೆಗೆ ಸರಿಯಾಗಿ ತಲುಪಬೇಕು. ಸರ್ಕಾರಿ ಯೋಜನೆಗಳು ಯಶಸ್ವಿಯಾಗಬೇಕಾದರೆ, ಜನರು ಅದರಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಶೃಂಗೇರಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಪುಷ್ಪಾ ಲಕ್ಷ್ಮೀನಾರಾಯಣ ಭಾವಿಸುತ್ತಾರೆ. ಯಾವ ಯಾವ ಯೋಜನೆಗಳು ಇದೆಯೆಂಬ ಅರಿವು ಅಷ್ಟಾಗಿ ಇರದ ಈಕೆ ಅಧಿಕಾರಿಗಳ ಮೂಲಕ ತಿಳಿದುಕೊಂಡು ಕಾರ್ಯ ಪ್ರವೃತ್ತರಾಗುತ್ತಾರೆ.

ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಚುನಾಯಿತರಾದ ಬಹುಪಾಲು ಮಹಿಳೆಯರು, ತಾವು ಮಾಡಬೇಕಾದ ಪ್ರಮುಖ ಕಾರ್ಯವೆಂದರೆ ಸರ್ಕಾರದ ಯೋಜನೆಗಳನ್ನು ಜಾರಿಗೆ ತರುವುದು ಎಂದೇ ಭಾವಿಸಿದ್ದಾರೆ. ಇದು ಆಯ್ಕೆಯಾದ ಪುರುಷರಿಗೂ ಅನ್ವಯಿಸುತ್ತದೆಯಾದರೂ ಕುಟುಂಬಗಳಲ್ಲಿ ಸ್ತ್ರೀಯರು ನಿರ್ವಹಿಸುತ್ತಿರುವ ದ್ವಿತೀಯ ದರ್ಜೆಯ ಕೆಲಸ ಕಾರ್ಯಗಳಿಗೆ ಸಾಮ್ಯತೆಯನ್ನು ಹೊಂದಿರುವುದು ಕಂಡುಬರುತ್ತದೆ. ಸರ್ಕಾರದ ಯೋಜನೆಗಳನ್ನು ಮೌನವಾಗಿ ಒಪ್ಪಿಕೊಂಡ ಹಾಗೆಯೇ, ಅನುಷ್ಠಾನಕ್ಕೆ ತರುವ ಕ್ರಿಯೆಯನ್ನು ಮಹಿಳೆಯರು ಇನ್ನು ಮೌನವಾಗಿ ಮಾಡುವ ವ್ಯವಸ್ಥೆಯನ್ನು ಸರ್ಕಾರ ಕಂಡುಕೊಂಡಿವೆ. ಈ ದೃಷ್ಟಿಯಿಂದ ಆಡಳಿತ ವಿಕೇಂದ್ರೀಕರಣಕ್ಕಾಗಿ ಮಹಿಳೆಯರ Co-option ಆಗಿದೆಯೆನ್ನಬಹುದು. ಯೋಜನೆಗಳನ್ನು ಜಾರಿಗೆ ತರುವ ವಿಧಾನದಲ್ಲಿ ಕೆಲವು ಮಹಿಳೆಯರು ಪ್ರಗತಿಪರ ನಿಲುವುಗಳನ್ನು ತೆಗೆದುಕೊಂಡಿರುವುದೂ ಸಹ ಕಂಡುಬರುತ್ತಿದೆ. "ಯೋಜನೆಗಳನ್ನು ಅಭ್ಯಾಸ ಮಾಡಿ

ಅವುಗಳನ್ನು ಜಾರಿಗೆ ತರುವಲ್ಲಿ ಕಲ್ಬುರ್ಗಿಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ, ಆಸ್ಪತ್ರೆಗಳಿಗೆ ಭೇಟಿ ನೀಡುವುದು, ಮಹಿಳಾ ವೈದ್ಯರ ಕೊರತೆ, ಜನಸಂಪರ್ಕ ಸಭೆ ನಡೆಸುವುದು, ಸ್ಥಳದಲ್ಲಿಯೇ ಪರಿಹಾರ ನೀಡುವುದು ಮುಂತಾದ ವಿಭಿನ್ನ ಕಾರ್ಯಗಳನ್ನು ಹಮ್ಮಿಕೊಂಡಿದ್ದಾರೆ. ಐ.ಆರ್.ಡಿ.ಪಿ. ಯೋಜನೆಗಳಲ್ಲಿ ಅಧಿಕಾರಿಗಳು ಹಣ ಹೊಡೆಯದಂತೆ ನೋಡುವುದು, ಯೋಜನೆಯ ಫಲವನ್ನು ಯೋಗ್ಯ ಫಲಾನುಭವಿಗಳಿಗೆ ದೊರೆಯುವಂತೆ ಮಾಡುವುದು ತನ್ನ ಕೆಲಸವೆಂದು ಈಕೆ ಭಾವಿಸಿದ್ದಾಳೆ. ಇದೇ ರೀತಿಯ ಆಲೋಚನೆಯನ್ನು ಹೊಂದಿರುವ ಚಿಕ್ಕಮಗಳೂರಿನ ಡಿ. ಎಲ್. ವಸಂತಕುಮಾರಿ, ಕಳಪೆ ಕಾಮಗಾರಿ ಕುರಿತು ತನಿಖೆ ಮಾಡುವುದು, ಜನಸಂಪರ್ಕ ಸಭೆ ನಡೆಸುವುದು, ಭ್ರಷ್ಟಾಚಾರ ರಹಿತ ಆಡಳಿತ ಮುಂತಾದವುಗಳನ್ನು ಈಕೆ ಕಾರ್ಯಗತ ಮಾಡಬೇಕೆಂದಿದ್ದಾರೆ.

"ಇಂದಿರಾ ಅವಾಸ್ ಮನೆಗಳು ಕಡುಬಡವರಿಗೆ ದೊರೆಯಬೇಕು. ಮಧ್ಯವರ್ತಿಗಳ ಪ್ರವೇಶವನ್ನು ಖಂಡಿಸುವ ಬಳ್ಳಾರಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಗಂಗಮ್ಮ ನೇರವಾಗಿ ಜನರು ಫಲಾನುಭವಿಗಳಾಗಬೇಕೆಂದು ಭಾವಿಸುತ್ತಾರೆ.

ಮಹಿಳೆಯ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ವಿವಿಧ ಕಾರ್ಯಗಳ ಬಗ್ಗೆ ಗ್ರಾಮೀಣ ಮಹಿಳೆಯರಿಗೆ ತಿಳುವಳಿಕೆ ಮೂಡಿಸುವುದರ ಜೊತೆಯಲ್ಲಿ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಅವರಿಗೆ ತರಬೇತಿ ನೀಡುವುದರ ಮೂಲಕ ನೆರವಾಗಬೇಕೆಂಬುದನ್ನು ಕೇಂದ್ರ ಸಚಿವೆ ಮಾರ್ಗರೇಟ್ ಆಳ್ವ ಇತ್ತೀಚಿಗೆ ಹೇಳಿಕೆ ನೀಡಿದ್ದಾರೆ.

ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಭ್ರಷ್ಟಾಚಾರ ಮಧ್ಯವರ್ತಿಗಳ ಹಾವಳಿ, ವಿಳಂಬ ಮುಂತಾದವುಗಳನ್ನು ತಡೆಯಲು ಬೆರಳೆಣಿಕೆಯಷ್ಟು ಮಹಿಳೆಯರು ಪ್ರಯತ್ನಿಸಿದರೆ, ಬಹುಪಾಲು ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದು ತೀರ್ಮಾನವಾಗುವುದು ಪುರುಷರಿಂದ. ಭ್ರಷ್ಟಾಚಾರ ನಡೆಯುತ್ತಿರುವಂತ ಸಂದರ್ಭದಲ್ಲಿ ಮಹಿಳೆಯರು ಉನ್ನತ ಸ್ಥಾನದಲ್ಲಿ ಇದ್ದರೂ ಮೌನವಾಗಿ ಸಮ್ಮತಿಸುವುದರ ಮೂಲಕ ಪರೋಕ್ಷವಾಗಿ ಭಾಗಿಯಾಗುತ್ತಿದ್ದಾರೆ. ಬೆಂಗಳೂರು ತಾಲ್ಲೂಕೊಂದರಲ್ಲಿ ಪ್ರತಿಯೊಂದು ಯೋಜನೆಗಳೂ ಜಾರಿಗೆ ಬರುವಾಗ ಸರಾಸರಿ ಮೊತ್ತ ಕೆಳಗಿನಿಂದ ಉನ್ನತ ಮಟ್ಟದವರೆಗೂ ಶೇ. 15 ಎಂದು ತೀರ್ಮಾನವಾಗಿದ್ದು, ಇದು ಬಹಿರಂಗವಾಗಿ ಮಾತನಾಡುವಷ್ಟು ಸಹಜ ಸಂಗತಿಯಾಗಿದೆ. ಈ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷೆ ಮಹಿಳೆ. ಹೆಂಡತಿಯರ ಬದಲಾಗಿ ಗಂಡಸರೇ ನಿರ್ಧಾರ ಮಾಡುವುದು, ಆಯ್ಕೆಯಾದ ಹೆಂಗಸರ ಗಂಡಂದಿರು ಯೋಜನೆಗಳ contract ತೆಗೆದುಕೊಂಡು ಕೆಲಸ ಮಾಡಿಸುವುದು. ಅದರಲ್ಲಿ ಹಣ ಉಳಿಸುವುದು ಮುಂತಾದವು ಗ್ರಾಮ ಪಂಚಾಯಿತಿಯಿಂದ ಜಿಲ್ಲಾ ಪಂಚಾಯಿತಿಯವರೆಗೆ ನಡೆಯುತ್ತಿದೆ.

ಯೋಜನೆಗಳನ್ನು ಜಾರಿಗೆ ತರುವ ಹಂತದಲ್ಲಿ ದೈನಂದಿನ ಸಮಸ್ಯೆಗಳಿಗೆ ಅದರಲ್ಲೂ ವಿಶೇಷವಾಗಿ, ನೇರವಾಗಿ ಮಹಿಳೆಯರು ಎದುರಿಸುವ ಸಮಸ್ಯೆಗಳಿಗೆ ಒತ್ತು ನೀಡುತ್ತಿರುವುದು ಒಂದು ಮಹತ್ವದ ಸಂಗತಿಯಾಗಿದೆ. ಬಹುಪಾಲು ಮಹಿಳೆಯರು ಚುನಾಯಿತರಾಗಿ ಬಂದಿರುವುದರಿಂದ ಇಂತಹ ಸಮಸ್ಯೆಗಳಿಗೆ ಆದ್ಯತೆ ನೀಡಲಾಗುತ್ತಿದೆ. "ಶೌಚಾಲಯದ ಅಗತ್ಯ ಮಹಿಳೆಯರಿಗೆ ತುಂಬಾ ಇರುವುದರಿಂದ ಇದಕ್ಕೆ ಪ್ರಾಮುಖ್ಯತೆ ನೀಡಬೇಕಾಗುತ್ತದೆ, ಎಂದು ಗೌರಮ್ಮ ಭಾವಿಸುತ್ತಾರೆ. ಉತ್ತರ ತಾ॥ ಪಂಚಾಯ್ತಿ ಅಧ್ಯಕ್ಷೆ ಗಂಗಮ್ಮ ನೀರಿನ ಸಮಸ್ಯೆಗಳಿಗೆ ಆದ್ಯತೆ ನೀಡಲು ಪ್ರಮುಖ ಕಾರಣ ಗ್ರಾಮದಲ್ಲಿನ ನಾಲ್ಕು ಕೊಳವೆಗಳೂ ಒಣಗಿರುವುದರಿಂದ ಆಕೆ, ಗಂಡ ಮೈದುನರೊಂದಿಗೆ ಪಕ್ಕದ ತೋಟದಿಂದ ನೀರುಹೊರುವ ಕಷ್ಟವನ್ನು ಆಕೆಯೂ ಅನುಭವಿಸಿರುವುದರಿಂದ ಈ ಸಮಸ್ಯೆಗೆ ಪ್ರಾಮುಖ್ಯತೆಯನ್ನು ನೀಡಬೇಕಾಗುತ್ತದೆ ಯೆಂದು ಭಾವಿಸುತ್ತಾರೆ. ಸಾಮಾನ್ಯವಾಗಿ ನೀರಿನ ಸಮಸ್ಯೆ, ಚರಂಡಿ ವ್ಯವಸ್ಥೆ, ಬೀದಿ ದೀಪ, ಶೌಚಾಲಯ, ರಸ್ತೆ ರಿಪೇರಿ, ಬಸ್ ಸೌಕರ್ಯ, ಮಕ್ಕಳಿಗೆ ಸಮವಸ್ತ್ರ, ಮಹಿಳೆಯರಿಗೆ ಸ್ವಯಂ ಉದ್ಯೋಗ ಮುಂತಾದ ಸಮಸ್ಯೆಗಳಿಗೆ ಹೆಚ್ಚಿನ ಒತ್ತು ನೀಡುತ್ತಿರುವುದು ಕಂಡುಬರುತ್ತಿದೆ.

ಪರಿಶಿಷ್ಟ ಮಹಿಳೆಯರು ಹಾಗೂ ಪಂಚಾಯತ್ ರಾಜ್

ಸಂವಿಧಾನದ 73ನೇ ತಿದ್ದುಪಡಿಯಿಂದಾಗಿ, ದಲಿತ ಹಾಗೂ ಪರಿಶಿಷ್ಟ ವರ್ಗದ ಮಹಿಳೆಯರಿಗೆ ನೀಡಲಾದ ಮೀಸಲಾತಿ ಒಂದು ಚಾರಿತ್ರಿಕವಾದ ಸಾಂಸ್ಕೃತಿಕ ಘಟ್ಟ. ಈ ಮೀಸಲಾತಿಯ ನೀತಿಯಿಂದಾಗಿ ರಾಜಕೀಯ ಪಕ್ಷಗಳು

ಅನಿವಾರ್ಯವಾಗಿ ಈ ಬದಲಾವಣೆಯನ್ನು ಒಪ್ಪಿಕೊಳ್ಳ ಬೇಕಾಗಿದೆ. ಸಾವಿರಾರು ವರ್ಷಗಳಿಂದ ಅಸ್ಪೃಶ್ಯತೆಯ ತುಳಿತಕ್ಕೆ ಒಳಗಾದ ಮಹಿಳೆಯರಿಗೆ ಇದು ಒಂದು ರೀತಿ ಯಲ್ಲಿ ಅವರ ಸ್ವಾಭಿಮಾನವನ್ನು ಎತ್ತಿಹಿಡಿಯುವ ರಾಜಕೀಯ ಅಧಿಕಾರವನ್ನು ನೀಡಿದೆ. ದೈನಂದಿನ ಜೀವನ ದಲ್ಲಿ ಜಾತಿ ತಾರತಮ್ಯಕ್ಕೆ ಒಳಗಾಗುವ ಈ ಮಹಿಳೆಯರು ತಮಗೆ ದೊರೆತಿರುವ ರಾಜಕೀಯ ಅಧಿಕಾರವನ್ನು ಹೇಗೆ ಪ್ರಯೋಗಿಸಬಲ್ಲರೆಂಬುದನ್ನು ಕಾದು ನೋಡಬೇಕಾಗಿದೆ.

ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ ಈ ಮಹಿಳೆಯರ ಸಂಖ್ಯೆ 85. ಇಬ್ಬರು ಅಧ್ಯಕ್ಷಿಣಿಯರಾಗಿಯೂ, ಇಬ್ಬರು ಉಪಾಧ್ಯಕ್ಷಿಣಿಯರಾಗಿಯೂ ಕಾರ್ಯ ನಿರ್ವಹಿಸು ತ್ತಿದ್ದಾರೆ. ತಾಲ್ಲೂಕು ಪಂಚಾಯ್ತಿಗಳಲ್ಲಿ 365 ಸ್ತ್ರೀ ಯರು ಆಯ್ಕೆಯಾಗಿದ್ದಾರೆ. 14 ಜನ ಸ್ತ್ರೀಯರು ಅಧ್ಯಕ್ಷಿಣಿಯರಾಗಿಯೂ, 14 ಜನ ಉಪಾಧ್ಯಕ್ಷಿಣಿಯ ರಾಗಿಯೂ ಆಯ್ಕೆಯಾಗಿದ್ದಾರೆ. ಗ್ರಾಮ ಪಂಚಾಯ್ತಿಯ ಮಟ್ಟದಲ್ಲಿ 12,514 ಜನ ಸ್ತ್ರೀಯರು ಆಯ್ಕೆಯಾಗಿ ದ್ದಾರೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು, ಚುನಾವಣಾ ಪ್ರಚಾರ, ನಿರ್ಧಾರಗಳನ್ನು ತೆಗೆದುಕೊಳ್ಳು ವುದೂ ಎಲ್ಲಾ ಜಾತಿಯ ಮಹಿಳೆಯರ ಹಿನ್ನಲೆಯಲ್ಲಿ ಪುರುಷರಿದ್ದಾರೆ. ಚುನಾವಣೆಯ ಖರ್ಚಿನ ವಿಚಾರದಲ್ಲಿ, ಇವರು ಚುನಾವಣೆಗಾಗಿ ಖರ್ಚು ಮಾಡಿರುವುದು ತೀರಾ ಕಡಿಮೆ. ಗ್ರಾಮಗಳಲ್ಲಿ ದೈನಂದಿನ ಜೀವನದಲ್ಲಿ ಜಾತಿ ಪಕ್ಷಪಾತವನ್ನೆದಿರಿಸುವ ಇವರು ಮೀಟಿಂಗ್‌ಗಳಲ್ಲಿ ಇಂದು ಸಮಸ್ಯೆಗಳನ್ನು ಎದುರಿಸುವುದಿಲ್ಲವೆಂದು ಒಪ್ಪಿಕೊಳ್ಳು ತ್ತಾರೆ. ಹಾಗೆಂದ ಮಾತ್ರಕ್ಕೆ ಅವರನ್ನು ಸಂಪೂರ್ಣವಾಗಿ ಸಮಾನತೆಯಿಂದ ಕಾಣುವ ಸಾಮಾಜಿಕ ವಾತಾವರಣ ನಿರ್ಮಾಣವಾಗಿದೆಯೆಂಬ ಅರ್ಥವಲ್ಲ. ಅವರಿಗೆ ಸಂವಿಧಾನಾತ್ಮಕವಾಗಿ ನೀಡಲಾದ ರಕ್ಷಣೆಯಿಂದಾಗಿ ಹಾಗೂ ಅವರಲ್ಲಿ ಮೂಡುತ್ತಿರುವ ಸ್ವಾಭಿಮಾನ ಚಳುವಳಿಯಿಂದ ಇದು ಇಂದು ಅನಿವಾರ್ಯವಾಗಿ ಒಪ್ಪಿ ಕೊಳ್ಳಬೇಕಾದ ಅಂಶವಾಗಿದೆ. ಮುನಿಯಮ್ಮ ಆನೇಕಲ್ ತಾಲ್ಲೂಕಿನ ಗ್ರಾಮ ಪಂಚಾಯಿತಿಯೊಂದರ ಉಪಾಧ್ಯಕ್ಷೆ. "ಯಾರೂ ನಮ್ಮನ್ನು ಜಾತಿ ಹಿನ್ನಲೆಯಲ್ಲಿ ನೋಡುವು ದಿಲ್ಲ. ಹಾಗೆ ನೋಡಿದರೆ ಕಂಬಿ ಎಣಿಸಬೇಕಾಗುತ್ತದೆ ಯೆಂದು ಧೈರ್ಯದಿಂದ ನುಡಿಯುತ್ತಾಳೆ. ಮುನಿಯಮ್ಮ ಪ್ರತಿಯೊಂದು ಮೀಟಿಂಗ್‌ನ್ನು ತಪ್ಪದೇ ಭಾಗವಹಿಸು ವಳಲ್ಲದೆ, ಇತರ ಊರಿನ ನ್ಯಾಯಗಳನ್ನು ತೀರ್ಮಾನಿಸು ವಾಗ ಕ್ರಿಯಾಶೀಲಳಾಗಿ ಭಾಗಿಯಾಗುತ್ತಾಳೆ. ಆದರೆ ಅಧ್ಯಕ್ಷತೆ ಹಾಗೂ ಉಪಾಧ್ಯಕ್ಷರ ಸ್ಥಾನವನ್ನು ಈ ಮಹಿಳೆಯರಿಗೆ ಮೀಸಲಾತಿ ನೀಡುವುದನ್ನು ಪ್ರಶ್ನಿಸುವ, ಮಾತುಗಾರಿಕೆ ಬಲ್ಲ, ತಿಳುವಳಿಕೆಯಿರುವ, ವಿದ್ಯಾಭ್ಯಾಸ ಹೊಂದಿರುವ ಮೇಲ್ಜಾತಿಯ ಹೆಂಗಸರೂ ಇದ್ದಾರೆ. ದಲಿತ ಮಹಿಳೆಯರು ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಆಯ್ಕೆಯಾದವರ ಹಾದಿ ಸುಗಮವಾಗಿಯೂ ಇಲ್ಲ. ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಮಹಿಳೆಯನ್ನು ಅವಿಶ್ವಾಸ ನಿರ್ಣಯ ಮಾಡಿ ತೆಗೆದು ಹಾಕಿದ 15 ಕೇಸುಗಳು ಈಗಾಗಲೇ ನ್ಯಾಯಾಲಯದಲ್ಲಿವೆ. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಸಂಗಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷೆ ಶ್ರೀಮತಿ ರೇಣುಕಾ ತಾಯಿ ಸತ್ಯವ್ವ ಮುರ್ಸಿಬಣ. ಈಕೆ ಎದುರಿಸುವ ಸಂಕೀರ್ಣ ಸಮಸ್ಯೆ ನಮ್ಮ ಸಮಾಜ ದಲ್ಲಿ ಬೇರು ಬಿಟ್ಟಿರುವ ಪಾಳೇಗಾರಿಕೆ ಮನೋಭಾವನೆಗೆ ಹಿಡಿದ ಕನ್ನಡಿಯಾಗಿದೆ. ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳಲ್ಲಿ ತೊಡಗಿದ್ದ ಈಕೆಯ ಭ್ರಷ್ಟಾಚಾರದ ವಿರುದ್ಧ ಹೋರಾಟ, ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಾಯಕತ್ವ ವಹಿಸುವುದನ್ನು ಸಹಿಸದ ಇತರ ಸದಸ್ಯರು ಈಕೆಯ ವಿರುದ್ಧ ಕತ್ತಿ ಮಸೆಯುತ್ತಾ, ಜೀವಭಯ ವನ್ನೊಡ್ಡಿದ್ದಾರೆ. ಜೊತೆಗೆ ಈಕೆಯ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ. ದಲಿತರು ಹಾಗೂ ಪರಿಶಿಷ್ಟ ಮಹಿಳೆಯರು ಅಧ್ಯಕ್ಷರಾದ ಪಂಚಾಯಿತಿಗಳಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಿದರೆ ಅಂತಹ ಪಂಚಾಯ್ತಿ ಗಳನ್ನೆ ರದ್ದು ಮಾಡುತ್ತೇವೆಂದು ಸರ್ಕಾರದ ವಕ್ತಾರರು ಹೇಳುತ್ತಿದ್ದರೂ ಅಂತಹ ಪ್ರಕರಣಗಳಲ್ಲಿ ಸರ್ಕಾರ ಯಾವ ನಿಲುವನ್ನು ತೆಗೆದುಕೊಳ್ಳುತ್ತಿಲ್ಲ.

ಹೊರ ಸ್ವರೂಪದ ಬದಲಾವಣೆಗಳು

ಪಿತೃಪ್ರಧಾನ ಮೌಲ್ಯಗಳು ಬಲವಾಗಿರುವ ಸಂದರ್ಭ ದಲ್ಲಿಯೂ ಮಹಿಳೆಯರಿಗೆ ನೀಡಲಾದ ಮೀಸಲಾತಿ ಯಿಂದಾಗಿ ಕೆಲವು ಬಾಹ್ಯ ಹೊರಸ್ವರೂಪದ ಬದಲಾವಣೆ ಗಳನ್ನು ನಾವು ಕಾಣಬಹುದು. ಈ ಬದಲಾವಣೆಗಳು ಮೂಲಭೂತ ಧೋರಣೆಯಲ್ಲಿನ ಬದಲಾವಣೆಯೆ? ಅಥವಾ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ಮೀಸಲಾತಿ ನಿಯಮದ ಜೊತೆಗಿನ ಹೊಂದಾಣಿಕೆಯೆ? ಎಂಬುದನ್ನು ಬದಲಾಗುವ ಸನ್ನಿವೇಶದೊಂದಿಗೆ ಕಾದು ನೋಡ

ಬೇಕಾಗಿದೆ. 33.33 ಪ್ರಮಾಣದ ಮಹಿಳೆಯರ ರಾಜಕೀಯ ಪ್ರವೇಶವನ್ನು ಸರ್ಕಾರ ಅಧಿಕಾರ ಶಾಹಿ ವರ್ಗ, ಮುಖ್ಯವಾಗಿ ಪುರುಷರೂ ಬೆಂಬಲಿಸುತ್ತಿದ್ದಾರೆ. ಆಯ್ಕೆಯಾದ ಮಹಿಳೆಯರಿಗೆ ಅಪಾರವಾದ ಪ್ರೋತ್ಸಾಹ ಬೆಂಬಲ ದೊರೆಯುತ್ತಿದೆ. ಮಹಿಳೆಯರ ಇನ್ನಿತರ ಚಟುವಟಿಕೆಗಳಿಗೆ ಅಡ್ಡಿಯಾಗುವ ಮನೆ, ಮಕ್ಕಳ ಜವಾಬ್ದಾರಿ ಈ ಕೆಲಸಕ್ಕೆ ಮೀಟಿಂಗ್‌ಗಳಲ್ಲಿ ಭಾಗವಹಿಸುವುದಕ್ಕೆ ಅಡತಡೆಗಳಾಗುತ್ತಿಲ್ಲ. ಮೀಟಿಂಗ್‌ಗಳಲ್ಲಿ ಮಾತನಾಡಲು, ಚರ್ಚಿಸಲು, ಯೋಜನೆಗಳನ್ನು ಕುರಿತು ಅರಿವು ಮೂಡಿಸಲು ಅಪಾರವಾದ ಪ್ರೋತ್ಸಾಹ, ತರಬೇತಿ ನೀಡಲಾಗುತ್ತಿದೆ. ಸಭೆಗಳಲ್ಲಿ ಮೀಟಿಂಗ್‌ಗಳಲ್ಲಿ ಹೆಂಗಸರು ಮಾತನಾಡಿದರೆ, ಕುಹಕ, ವ್ಯಂಗ್ಯ, ತಮಾಷೆ ಮಾಡುತ್ತಿದ್ದ ವಾತಾವರಣ ಇಂದು ಬದಲಾಗಿದೆಯೆಂದು ಬಹುಪಾಲು ಮಹಿಳೆಯರು ಒಪ್ಪಿಕೊಳ್ಳುತ್ತಾರೆ. ಬದಲಾಗಿ ಮಾತನಾಡಲು ಚರ್ಚಿಸಲು ಪ್ರೋತ್ಸಾಹ ಸಿಗುತ್ತಿದೆಯೆನ್ನುತ್ತಾರೆ. ಈ ಬದಲಾವಣೆ ಮಹಿಳೆಯರ ಜೀವನದಲ್ಲಿ ಹಲವಾರು ರೀತಿಯ ಮಹತ್ವದ ಬದಲಾವಣೆಗಳನ್ನು ತಂದಿದೆ. ರಾಜಕೀಯ ಅಕ್ಷರದ ಪರಿಚಯವಿಲ್ಲದ 'ಮನೆಯ' ಕಲ್ಪನೆಗೆ ಮಾತ್ರವಾದ ಸ್ತ್ರೀಯ ಜೀವನದ ವ್ಯಾಪ್ತಿ ವಿಸ್ತೃತಗೊಳ್ಳುತ್ತಿದೆ. ಮೀಟಿಂಗ್‌ಗೆ ಹೋಗಲು ಪ್ರೋತ್ಸಾಹ. ಮನೆಗೆಲಸಗಳನ್ನು ಮುಗಿಸಿ ಹೊರಡುವುದು, ಮಿನಿಟ್ಸ್, ಮೀಟಿಂಗ್ ಯೋಜನೆಗಳ ಹೆಸರುಗಳನ್ನು ಹೇಳುವುದು ಬದಲಾಗುತ್ತಿರುವ ಸ್ತ್ರೀಯರ ಸ್ಥಾನಮಾನದ ಒಂದು ಹೆಜ್ಜೆಯಾಗಿದೆ. ಇಂತವರ ಹೆಂಡತಿಯೆಂದು ಪರಿಚಯ ಮಾಡಿ ಕೊಡುತ್ತಿದ್ದ ಸಂದರ್ಭ ಬದಲಾಗುತ್ತಿದ್ದು ಪಂಚಾಯಿತಿ ಮೆಂಬರು, ಅಧ್ಯಕ್ಷರು, ಉಪಾಧ್ಯಕ್ಷರ ಗಂಡ ಎಂದು ಹೇಳುವ ವಾತಾವರಣ ಮೂಡುತ್ತಿದೆ. ಅಧ್ಯಕ್ಷರಾದ ಮಹಿಳೆಯರು, ಅಧ್ಯಕ್ಷತೆ ವಹಿಸುವುದು, ಅಧಿಕಾರಿಗಳ ಜೊತೆಯಲ್ಲಿ ಮಾಹಿತಿಗಾಗಿ ಚರ್ಚಿಸುವುದು, ಕಾಮಗಾರಿ ಕೆಲಸಗಳನ್ನು ಸಮೀಕ್ಷೆ ನಡೆಸುವುದು, ಮುಂತಾದವುಗಳಲ್ಲಿ ತೊಡಗಿಸಿಕೊಂಡಿರುವುದು ಅದ್ಭುತವಾಗಿ ಕಾಣಸುತ್ತದೆ. ಆನೇಕಲ್ ತಾ॥ ಬಂಡಾಪುರದ ಸರಸ್ವತಮ್ಮ ಪಂಚಾಯಿತಿಯ ಸದಸ್ಯೆ. ಪಂಚಾಯಿತಿಯ ಕೆಲಸಗಳಲ್ಲದೆ, ಇತರ ಮನೆಯ ಕೆಲಸಗಳನ್ನು ಪಾದರಸದಂತೆ ಮುಗಿಸಿ, ಸಭೆ.ಸಮಾರಂಭಗಳಿಗೆ ಹೆಂಗಸರನ್ನು ಸೇರಿಸುವುದು, ಅಧಿಕಾರಿಗಳೊಂದಿಗೆ ಮುಕ್ತವಾಗಿ ಚರ್ಚಿಸುತ್ತಾರೆ.

ವ್ಯಕ್ತಿಗತ ನೆಲೆಯಲ್ಲಿ ಹಾಗೂ ಸಂಘಟನೆ ಮತ್ತು ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಪಂಚಾಯಿತಿಗೆ ಆಯ್ಕೆಯಾದ ಮಹಿಳೆಯರು ವಹಿಸುತ್ತಿರುವ ಪಾತ್ರ ಭಿನ್ನವಾದುದು ಹಾಗೂ ಮಹತ್ವವಾದುದು. ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಸಹಜ ನಾಯಕತ್ವ ವಹಿಸುವುದು, ಇತರ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವುದು, ವ್ಯಾಪಕವಾದ ನಮ್ಮ ಸಮಾಜದ ಸಮಸ್ಯೆಗಳ ಕುರಿತು ಮೂಲಭೂತ ಪ್ರಶ್ನೆಗಳನ್ನೆತ್ತುವ ಮಹಿಳೆಯರು ಇದ್ದಾರೆ. ಕುಡಿತದಿಂದ ಮನೆಗಳು ಹಾಳಾಗುತ್ತಿವೆ. ಎಲ್ಲ ಮಹಿಳೆಯರನ್ನು ಸೇರಿಸಿ ಕುಡಿತದ ವಿರುದ್ಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಒಂದು ಕಡೆ ಪಾನ ನಿರೋಧದ ಬಗ್ಗೆ ಮಾತನಾಡುವ ಸರ್ಕಾರ ಲೈಸನ್ಸ್ ಕೊಡುವುದನ್ನು ನಿಲ್ಲಿಸಬೇಕೆಂದು ಕೆಲವು ಮಹಿಳೆಯರು ಒತ್ತಾಯಿಸುತ್ತಿದ್ದಾರೆ.

ತುಮಕೂರಿನ ನೀಲಮ್ಮ ಮಲ್ಲಸಂದ್ರ ಗ್ರಾಮ ಪಂಚಾಯಿತಿ ಸದಸ್ಯೆ. 200ಜನ ಮಹಿಳೆಯರನ್ನು ಸೇರಿಸಿ ಅವಳ ಗ್ರಾಮದಲ್ಲಿ ಕುಡಿತದ ವಿರುದ್ಧ ಹೋರಾಟವನ್ನು ಪ್ರಾರಂಭಿಸಿದಳು. ಸಾರಾಯಿ ಜೀಪನ್ನು ತಡೆದರು. ಆದರೆ ಕ್ರಮೇಣ ಈ ವ್ಯವಹಾರ ಹೊಸ ರೂಪದಲ್ಲಿ ಪ್ರಾರಂಭವಾಗಿರುವುದನ್ನು ತಡೆಯಲು ಪ್ರಯತ್ನಿಸುತ್ತಿದ್ದಾಳೆ. ಸಂಘಟನೆಗಳ ಹಿನ್ನೆಲೆಯಲ್ಲಿ ಆಯ್ಕೆಯಾಗಿ ಬಂದ ಮಹಿಳೆಯರು ಕ್ರಿಯಾಶೀಲರಾಗಿ ಭಾಗವಹಿಸುತ್ತಿರುವುದರ ಜೊತೆಯಲ್ಲಿ ಸಮಸ್ಯೆಗಳ ಮೂಲನೆಲೆಗಳನ್ನು ಗುರುತಿಸುವ ಪ್ರಯತ್ನ ಮಾಡುತ್ತಿರುವುದು ಗಮನಾರ್ಹವಾದುದು.

ಮಹಿಳಾ ಸಮಖ್ಯಾ ಹಾಗೂ ದಲಿತ ಸಂಘರ್ಷ ಸಮಿತಿಯ ಹಿನ್ನೆಲೆಯಲ್ಲಿ ಬಂದ ಮಹಿಳೆಯರು 'ಜನರಿಗೆ ಅಧಿಕಾರ', ವಿಕೇಂದ್ರೀಕರಣ ಪ್ರಕ್ರಿಯೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸುತ್ತಿರುವುದು ಕಂಡುಬರುತ್ತದೆ.

ಒಮ್ಮೆ ಚುನಾಯಿತರಾದ ಮಹಿಳೆಯರು ಮೀಟಿಂಗ್‌ಗಳಿಗೆ ಹೋಗುವುದು, ಅಲ್ಪಸ್ವಲ್ಪ ಮಾತನಾಡುವುದನ್ನು ಬಿಟ್ಟರೆ ತಮ್ಮ ಗ್ರಾಮ ಸಮುದಾಯದ ಮಹಿಳೆಯರೊಂದಿಗೆ ಸಂಪರ್ಕವನ್ನು ಇಟ್ಟುಕೊಳ್ಳುವುದು ತುಂಬಾ ಕಡಿಮೆ. (ಕೆಲವು ಅಪವಾದಗಳನ್ನು ಬಿಟ್ಟು) ಒಮ್ಮೆ

ಆಯ್ಕೆಯಾದ ಮಹಿಳೆಯರು ತಾವು ಪಂಚಾಯಿತಿಯ ಸದಸ್ಯರೆಂದು ಹೆಮ್ಮೆಯಿಂದ ಹೇಳಿಕೊಂಡರೂ ತಾವು ಪಡೆದಿರುವ ಅಧಿಕಾರವನ್ನು ತಮ್ಮ ವೈಯಕ್ತಿಕ ಸಾಮರ್ಥ್ಯದ ಹೆಗ್ಗುರುತೆಂದು ಪ್ರತಿಷ್ಠೆಯ ಸಂಗತಿಯೆಂದು ಭಾವಿಸುತ್ತಾರೆ. ಜನಸಾಮಾನ್ಯ ಮಹಿಳೆಯರೊಂದಿಗೆ ಬೆರೆಯಬೇಕಾದ ಇವರು, ಪ್ರತಿಷ್ಠೆಯ ಕಾರಣದಿಂದ ಮಹಿಳೆಯರಿಂದ ದೂರವಿರಲು ಪ್ರಯತ್ನಿಸುತ್ತಾರೆ. ಪಂಚಾಯ್ತಿ ಸದಸ್ಯರಾಗಿ ಕೆಲವು ಸಾರಾಯಿ ಅಂಗಡಿಗಳನ್ನು ನಡೆಸುವುದು, ತಾವು ಮೀಸಲಾತಿಯಿಂದಾಗಿ ಆಯ್ಕೆಯಾಗಿದ್ದರೂ, ಪರಿಶಿಷ್ಟ ವರ್ಗದ ಮಹಿಳೆಯರಿಗೆ ನೀಡಲಾದ ಮೀಸಲಾತಿಯನ್ನು ಪ್ರಶ್ನಿಸುವುದು, ಸ್ತ್ರೀಯರ ವಿರುದ್ಧದ ನಿಲುವುಗಳನ್ನು ತೆಗೆದುಕೊಳ್ಳುವುದು, ಮುಂತಾದ ವೈರುಧ್ಯಗಳನ್ನು ಸಹ ನಾವು ಕಾಣಬಹುದು.

ಸಂವಿಧಾನದ ಮೀಸಲಾತಿ ನೀತಿಯಿಂದಾಗಿ ಗ್ರಾಮೀಣ ಪರಿಸರದ ಬಹಳಷ್ಟು ಮಹಿಳೆಯರು ಪಕ್ಷದ ಹಿನ್ನಲೆಯಲ್ಲಿ ಆಯ್ಕೆಯಾಗಿದ್ದಾರೆ. ಹೀಗೆ ಸ್ಪರ್ಧಿಸುವಾಗ, ಪಕ್ಷದ ಕಕ್ಷೆಯೊಳಗಡೆ ಸೇರುವಾಗ, ಪಕ್ಷದ ತಾತ್ವಿಕ ನಿಲುವುಗಳನ್ನು ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಂಡು ಭಾಗವಹಿಸುದಿಲ್ಲ. ರಾಜಕೀಯ ಪಕ್ಷಗಳು, ಅವುಗಳ ನಡುವಿರುವ ಭಿನ್ನತೆ, ವಿವಿಧ ಸಾಮಾಜಿಕ ಸಮಸ್ಯೆಗಳ ಬಗ್ಗೆ ರಾಜಕೀಯ ಪಕ್ಷಗಳು ತೆಗೆದುಕೊಳ್ಳುವ ನಿಲುವು ಮುಂತಾದವುಗಳನ್ನು ಕುರಿತು ಮಹಿಳೆಯರು ಯೋಚಿಸಬೇಕಾಗುತ್ತದೆ. ಆದರೆ ಚುನಾವಣೆಗೆ ನಿಲ್ಲಲು ಪಕ್ಷಗಳು ಸ್ತ್ರೀಯರನ್ನು ಗುರುತಿಸಿ, ಟಿಕೆಟ್ ನೀಡುವುದೇ ಒಂದು ಪ್ರತಿಷ್ಠೆಯ ಸಂಕೇತವಾಗುತ್ತಿರುವುದರಿಂದ, ಹಾಗೂ ಈ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಪುರುಷರೇ ನಿರ್ಧರಿಸುವುದರಿಂದ ಮಹಿಳೆಯರು ಸ್ವತಂತ್ರವಾಗಿ, ಮುಕ್ತವಾಗಿ ಆಯ್ಕೆ ಮಾಡಿಕೊಳ್ಳುವ ಅವಕಾಶ ಅವರಿಗಿಲ್ಲ. ಅವರು ಅನಾಯಾಸವಾಗಿ ಬಹುಸಂಖ್ಯೆಯಲ್ಲಿ ಅಪ್ರಜ್ಞಾಪೂರ್ವಕವಾಗಿ ರಾಜಕೀಯ ಪಕ್ಷಗಳಿಗೆ Co-opt ಆಗುತ್ತಿದ್ದಾರೆ. ಈ ಪ್ರಮಾಣದಲ್ಲಿ ಗ್ರಾಮೀಣ ಮಹಿಳೆಯರು ರಾಜಕೀಯ ಪಕ್ಷದ ಕಕ್ಷೆಯೊಳಗೆ ಸೇರುವುದರಿಂದ ಪಕ್ಷದೊಳಗೆಯೇ ಗುಣಾತ್ಮಕವಾದ ಬದಲಾವಣೆಯನ್ನು ತರುವ ಪ್ರಯತ್ನ ಮಾಡಬಹುದಾಗಿದೆ. ಪಕ್ಷಗಳು ತೆಗೆದುಕೊಳ್ಳುವ ನಿಲುವುಗಳಿಗೆ ನಿಷ್ಕ್ರಿಯವಾಗಿ, ಮೌನವಾಗಿ ಬೆಂಬಲಿಸುವ ಬದಲು ವಿಮರ್ಶಾತ್ಮಕ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯವಾಗಿದೆ. ಹಾಗಿಲ್ಲದಿದ್ದರೆ, ಕೇವಲ ಸಂಖ್ಯಾಬಲದ ಬೆಂಬಲ, ಪಕ್ಷದ ಸಾಂಕೇತಿಕ ಹಿರಿಮೆಯಾಗಿ ಪರಿವರ್ತಿತವಾಗುತ್ತದೆ. ಪಕ್ಷಗಳಲ್ಲೂ ದ್ವಿತೀಯ ದರ್ಜೆಯ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.

ಗೃಹಕೃತ್ಯಕ್ಕೆ ಸೀಮಿತವಾಗಿದ್ದ ಮಹಿಳೆಯರಿಗೆ ದೊರೆತ ರಾಜಕೀಯ ಅಧಿಕಾರವನ್ನು ಚಲಾಯಿಸಲು ಪೂರಕವಾದ ವಾತಾವರಣದ ನಿರ್ಮಾಣ ಅತ್ಯಗತ್ಯವಾಗಿದೆ. ಕುಟುಂಬದ ಸಂಬಂಧಗಳಲ್ಲಿ ಬದಲಾವಣೆಯೊಂದಿಗೆ, ಆಕೆಗೆ ಸಾಮಾಜಿಕವಾದ ಹಾಗೂ ಆರ್ಥಿಕವಾಗಿ ಭದ್ರತೆ ಆಕೆಗೆ ಅಗತ್ಯವಾಗಿದೆ. ಆರ್ಥಿಕ ಭದ್ರತೆ ಹಾಗೂ ಸಾಮಾಜಿಕ ಭದ್ರತೆಯಿಲ್ಲದೆ, ನೀಡುವ 'ರಾಜಕೀಯ' ಅಧಿಕಾರ ಅರ್ಥಹೀನವಾಗಿರುವುದು.

ಸ್ತ್ರೀಯರ ರಾಜಕೀಯ ಪ್ರವೇಶದಿಂದ ಪ್ರಸ್ತುತ ರಾಜಕೀಯದಲ್ಲಿ ಕೆಲವು ಬದಲಾವಣೆಗಳನ್ನು ನಿರೀಕ್ಷಿಸಬಹುದು. ಹೆಂಗಸರ ಕೈಯಲ್ಲಿ ರಾಜಕೀಯ ಅಧಿಕಾರವನ್ನು ನೀಡಿದರೆ, ಭ್ರಷ್ಟಾಚಾರ, ಲಂಚ, ಅಪ್ಯವಹಾರ ಮುಂತಾದವುಗಳು ಕಡಿಮೆಯಾಗಿ ಸ್ವಚ್ಛ ಆಡಳಿತವನ್ನು ನೀಡಬಲ್ಲರೆಂಬ ಅಪೇಕ್ಷೆಯು ಜನಸಾಮಾನ್ಯರಲ್ಲಿದೆ. ಆಯ್ಕೆಯಾದ ಬಹುಪಾಲು ಮಹಿಳೆಯರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಯೋಜನೆಗಳನ್ನು ನೇರವಾಗಿ ಜನರಿಗೆ ತಲುಪಿಸಬೇಕೆಂಬ ಪ್ರಾಮಾಣಿಕ ಕಳಕಳಿ ಇವರಲ್ಲಿ ಕಂಡುಬರುತ್ತಿದೆ.

ಕ್ರಮೇಣ ಮಹಿಳೆಯರು ಸಂಘಟಿತರಾಗಿ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳುವ ಸಾಧ್ಯತೆಯಿದೆಯೆ? ಪಕ್ಷದ ಹಿನ್ನಲೆಯಲ್ಲಿ ಒಡೆದು ಹೋಗುತ್ತಿರುವ ಮಹಿಳೆಯರು ಸಂಘಟಿತರಾಗಲು ಸಾಧ್ಯವೆ? ಮಹಿಳೆಯರು ಒಂದು ಸ್ಪಷ್ಟ ರಾಜಕೀಯ ಪರಿಕಲ್ಪನೆಯನ್ನು ಬೆಳೆಸಿಕೊಳ್ಳಬಲ್ಲರೆ? ರಾಜಕೀಯ ಸ್ವರೂಪ, ರಚನೆ, ರಾಜಕೀಯ ಸಿದ್ಧಾಂತಗಳನ್ನು ಕುರಿತು ಚರ್ಚೆ, ಸ್ವತಂತ್ರ ನಿರ್ಣಯ ತೆಗೆದುಕೊಳ್ಳುವಂತ ಪೂರಕ ವಾತಾವರಣ ನಿರ್ಮಾಣ ಮಾಡುವುದು ಅನಿವಾರ್ಯವಾಗಿದೆ. ಈ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡುವವರಾರು ?

ಮಹಿಳಾ ಸಂಘಟನೆಗಳು, ಮಹಿಳಾ ಮಂಡಳಿಗಳು ರಾಜಕೀಯ ಪ್ರವೇಶ ಮಾಡುವ ಮಹಿಳೆಯರನ್ನು "ರಾಜಕೀಯ ಅಧಿಕಾರಕ್ಕೆ ತಯಾರು ಮಾಡುವ ಕೆಲಸ

ವನ್ನು ಮಾಡಬೇಕೆಂದು ಡಾ॥ ಸುಶೀಲಾ ಕೌಶಿಕ್ ಅಭಿಪ್ರಾಯ ಪಡುತ್ತಾರೆ. ಪೂರಕವಾದ ವಾತಾವರಣ ಸೃಷ್ಟಿ ಮಾಡುವಲ್ಲಿ ಮಹಿಳಾ ಸಂಘಟನೆಗಳು ಪ್ರಮುಖ ಪಾತ್ರವನ್ನು ವಹಿಸಬೇಕು. ಈಗಾಗಲೇ ಮಹಿಳಾ ಸಂಘಟನೆಗಳು ಈ ಪ್ರಶ್ನೆಗೆ ಹೆಚ್ಚು ಒತ್ತು ನೀಡುತ್ತಿರುವುದು ಕಂಡುಬರುತ್ತಿದೆ. ಆದರೆ, ಮಹಿಳಾ ಸಂಘಟನೆಗಳಲ್ಲೂ ಒಮ್ಮತದ, ಸ್ಪಷ್ಟ ನಿಲುವುಗಳ ಕೊರತೆ, ಗೊಂದಲ ಕಂಡುಬರುತ್ತಿದೆ. ಪುರುಷರು ವ್ಯಾಖ್ಯಾನಿಸುವ ರಾಜಕೀಯಕ್ಕೂ, ಸ್ತ್ರೀಯರು ವಾಖ್ಯಾನಿಸುವ ರಾಜಕೀಯಃಕ್ಕೂ ವ್ಯತ್ಯಾಸವಿದೆಯೆಂದು ಒಪ್ಪಿಕೊಳ್ಳುವುದಾದರೆ, ಈ ವ್ಯಾಖ್ಯಾನವು ತೀಕ್ಷ್ಣವಾಗಬೇಕಾಗಿದೆ. ರಾಜಕೀಯವನ್ನು ಪುರುಷ ಮಾದರಿಯಿಂದ ಮಹಿಳಾ ಮಾದರಿಯತ್ತ ಕೊಂಡೊಯ್ಯಬೇಕೆನ್ನುವಾಗ ಪುರುಷ ಮಾದರಿ, ಮಹಿಳಾ ಮಾದರಿ ಎಂದರೇನು ಎಂಬುದು ಸಹ ಸ್ಪಷ್ಟವಾಗಬೇಕಾಗಿದೆ.

ಮಹಾರಾಷ್ಟ್ರದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ನಿದರ್ಶನ ನಮ್ಮ ಮುಂದಿದೆ. ಶೇತ್ಕಾರಿ ಸಂಘಟಣೆ ಪಂಚಾಯತ್ ವ್ಯವಸ್ಥೆಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿರುವುದರಿಂದ, ಈ ವ್ಯವಸ್ಥೆ ಯಶಸ್ಸು ಕಾಣಲು ಸಾಧ್ಯವಾಗಿದೆ. ಕರ್ನಾಟಕದಲ್ಲಿ ಪಂಚಾಯತ್‌ರಾಜ್ ಯಶಸ್ವಿಯಾಗಿ ಕೆಲಸ ಮಾಡಬೇಕೆಂದರೆ, ಮಹಿಳಾ ಸಂಘಟನೆಗಳು, ಜೊತೆಗೆ ಪ್ರಗತಿಪರ ಸಂಘಟನೆಗಳು ಈ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿದೆ.

ನಂಟು

ಇಂದು
ನಿನ್ನೆಯದಲ್ಲ
ಈ ನಂಟು
ಹುಟ್ಟುವ
ಮೊದಲಿಂದಿಡಿದು
ಸತ್ತಮೇಲೂ
ಸಾಗುವ
ಗಂಟು !
'ತಂಟೆ'
ಮಾಡದೆ
'ಹೊರ' ಬೇಕು

ಎಂಟೆದೆಯ
ಭಂಟನನೂ
ಗರಗರನೆ
ಸುತ್ತಿ ಎಸೆವ
ಬಿರುಗಾಳಿಗೆ
ತಂಟೆಕೋರರಾವ ಲೆಕ್ಕ !
'ಸೊಕ್ಕಿ'ದವರು
'ಮುಕ್ಕಾಗಿ' ಹೋಧರು
'ದುಃಖ' ತಿಳಿದವರು
ತಪ್ಪಿಗಾಗಿ
ಬಿಕ್ಕಿದರು

ಬಿರುಗಾಳಿಯೆದುರು
ಬಾಳೊಂದು
'ಧೂಳಕಣ'
ಕಣ, ಕಣವೂ
ದೇವನ
ಋಣ !

● ಸರಸ್ವತಿ ದು.

ಕರ್ನಾಟಕ ಕೃಷಿ ನೀತಿ ಮತ್ತು ಮಹಿಳೆ

○ ಎಸ್. ಟಿ. ಸೋಮಶೇಖರ ರೆಡ್ಡಿ

ಸರಕಾರ ಯಾವುದೇ ಇರಲಿ, ಅದು ನೀತಿ (policy) ಗಳನ್ನು ರೂಪಿಸುವಾಗ ಅದು ತಾನು ಪ್ರತಿನಿಧಿಸುವ ವರ್ಗದ ಶ್ರೇಯಸ್ಸಿಗೆ ಎನ್ನುವುದನ್ನು ಪ್ರತಿಬಿಂಬಿಸುತ್ತದೆ. ಇದು ಬೇರೆಲ್ಲ ವರ್ಗಗಳು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೋಸ್ಕರವಾಗಿ, ಆ ದಿಕ್ಕಿನಲ್ಲಿ, ಸಾಗಬೇಕೆನ್ನುವ ಮಾರ್ಗಸೂಚಿಯಾಗಿರುತ್ತದೆ. ಈ ದಿಕ್ಸೂಚಿಯು ಸಮಾಜದ ಹಿತರಕ್ಷಣೆಗೆಂಬ ಕಲ್ಪನೆಯನ್ನು ಜನಸಾಮಾನ್ಯರಲ್ಲಿ ಬಿತ್ತುವ ಕ್ರಮ ಇದಾಗಿರುತ್ತದೆ. ಇಂತಹದನ್ನು ಆಯಾಕಾಲಕ್ಕೆ ತಕ್ಕದನ್ನಾಗಿಸುವುದು, ಪರೋಕ್ಷವಾಗಿ, ಅದರಲ್ಲೂ ಪ್ರಜಾಪ್ರಭುತ್ವದಲ್ಲಿ ಆಳುವ ವರ್ಗಗಳ ಗುರಿ ಮತ್ತು ಧ್ಯೇಯುಗಳಾಗಿರುತ್ತವೆ. ಇಂತಹ ವರ್ಗವನ್ನು ಈಗಿನ ಪರಿಸ್ಥಿತಿಯಲ್ಲಿ ಕೇವಲ ಒಂದು ಸಮಾಜಕ್ಕೆ ಸೀಮಿತಗೊಳಿಸದೆ, ವಿಶ್ವವ್ಯಾಪಿಯಾಗಿ ಗಮನಿಸಬೇಕಾದ ಪ್ರಸಂಗ ಬಂದಿದೆ.

ಎಪ್ಪತ್ತರ ದಶಕಗಳಿಂದೀಚೆಗೆ ಪ್ರಪಂಚದ, ಅದರಲ್ಲೂ ಪಾಶಿಮಾತ್ಯ ಅಭಿವೃದ್ಧ ರಾಷ್ಟ್ರಗಳಲ್ಲಿ ಏರಿದ ಉತ್ಪಾದನ ವೆಚ್ಚ, ನಿರುದ್ಯೋಗ ಮತ್ತು ಹಣದುಬ್ಬರದಿಂದಾಗಿ ಅವುಗಳ ಆರ್ಥಿಕ ವ್ಯವಸ್ಥೆ ಕುಸಿದು ಬಿತ್ತು. ಇನ್ನೊಂದಡೆ ಕೈಗಾರಿಕ ಕ್ರಾಂತಿಯನ್ನೆ ಅವಲಂಬಿಸಿದ ರಾಷ್ಟ್ರಗಳು ಉತ್ಪಾದನ ಕ್ಷೇತ್ರದಿಂದ ಸೇವಾ ಕ್ಷೇತ್ರ (Service Sector) ಕ್ಕೆ ಅಭಿವೃದ್ಧಿಗೊಳ್ಳಲು, ಉತ್ಪಾದನೆಯಿಂದಾಗುವ ಮಾಲಿನ್ಯವನ್ನು ದೂರೀಕರಿಸಲು ಅಭಿವೃದ್ಧಿಗೊಳ್ಳುತ್ತಿದ್ದ ಅತಿ ಬಡ ದೇಶಗಳಿಗೆ ಉತ್ಪಾದನಾ ಕ್ಷೇತ್ರ (Service Sector) ವನ್ನೂ ವರ್ಗಾವಣೆ ಮಾಡತೊಡಗಿದವು ಈ ವರ್ಗಾವಣೆಯ ಫಲವೆಂಬಂತೆ ಹೊಸದಾಗಿ ಕೈಗಾರಿಕೀಕರಣಗೊಂಡ ರಾಷ್ಟ್ರಗಳ **ಆರ್ಥಿಕ ಪರಿಸ್ಥಿತಿ ಉತ್ತಮಗೊಂಡು** ಪಾಶ್ಚಿಮಾತ್ಯ ರಾಷ್ಟ್ರಗಳು ರಫ್ತು ದೇಶಗಳಾಗದೆ ಆಮದು ದೇಶಗಳಾದವು. ಈ ಪರಿಸ್ಥಿತಿಯಿಂದ ಅಭಿವೃದ್ಧ ರಾಷ್ಟ್ರಗಳಿಗೆ ತೊಂದರೆಯಾಗದೆ ಅವುಗಳ ಅಭಿವೃದ್ಧಿಗೆ ಪೂರಕವೇ ಆಯಿತು. ಹೊಸದಾಗಿ ಕೈಗಾರಿಕೀಕರಣಗೊಂಡ ರಾಷ್ಟ್ರಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಬಂಡವಾಳ ಹೂಡಿದ್ದೂ ಪಾಶ್ಚಿಮಾತ್ಯ ರಾಷ್ಟ್ರಗಳೇ. ಅದರಿಂದ ಬಂದ ಲಾಭ ಅಪಾರ. ಕಡಿಮೆ ವೆಚ್ಚದಲ್ಲಿ ಶ್ರಮಶಕ್ತಿ, ನೈಸರ್ಗಿಕ ಸಂಪತ್ತುಗಳು ದಕ್ಕಿದುದಲ್ಲದೆ ಮಾಲಿನ್ಯದಿಂದ ತನ್ನ ಸಮಾಜವನ್ನು ರಕ್ಷಿಸಿಕೊಳ್ಳುವುದು ಸಾಧ್ಯವಾಯಿತು. ಇಂತಹ ಬಂಡವಾಳ ಹೂಡಿಕೆ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹರಡಿದಂತೆ ಪಾಶ್ಚಿಮಾತ್ಯ ದೇಶಗಳ ಆರ್ಥಿಕ ಪರಿಸ್ಥಿತಿ 90ರ ಮೊದಲ ವರ್ಷಗಳಲ್ಲೆ, ಚೇತರಿಸಿಕೊಂಡದ್ದರ ಪರಿಣಾಮವಾಗಿ ಎಲ್ಲ ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರಗಳು ಅಭಿವೃದ್ಧಿಯತ್ತ ದಾಪುಗಾಲು ಹಾಕಬೇಕಾದರೆ ಪಾಶ್ಚಿಮಾತ್ಯ ದೇಶಗಳ ನೇರ ಬಂಡವಾಳ ಹೂಡಿಕೆಗಳಿಗೆ ಅವಕಾಶ ಕಲ್ಪಿಸಬೇಕು, ಮತ್ತು ಇದಕ್ಕೆ ಪೂರಕವಾದ ನೀತಿ ಸಂಹಿತೆಗಳನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಪ್ರತಿಪಾದಿಸಬೇಕೆಂಬ ಒತ್ತಾಯವನ್ನು ತರಲಾಯಿತು. ಇದಕೋಸ್ಕರವಾಗಿ 'ಹೊಸ ಆರ್ಥಿಕ ನೀತಿ', 'ಉದಾರೀಕರಣ'ಗಳೆಲ್ಲವೂ ಕಂಡು ಬಂದವು. ಪಾಶ್ಚಿಮಾತ್ಯರ ಬಂಡವಾಳಕ್ಕೆ ಹಾಗೂ ಅವರ ಕೊಂಡುಕೊಳ್ಳುವ ಶಕ್ತಿಯನ್ನು ಪಡೆಯುವುದಕ್ಕೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನಡುವೆ ಪೈಪೋಟಿ ಒಂದು ಕಡೆಯಾದರೆ, ನಮ್ಮ ದೇಶದೊಳಗಡೆಯೇ ರಾಜ್ಯ, ರಾಜ್ಯಗಳ ನಡುವೆ ಪೈಪೋಟಿ. ಅದು ಕಮ್ಯುನಿಸ್ಟ್ ಸರಕಾರವಾದ ಪಶ್ಚಿಮ ಬಂಗಾಲವಿರಬಹುದು ಅಥವಾ BJP ಆಳುವ ಗುಜರಾತ್ ಇರಬಹುದು. ಇಂತಹ ಪೈಪೋಟಿಯ ಮಂಚೂಣಿಯಲ್ಲಿರುವುದು ನಮ್ಮ ಕೃಷಿ ಕ್ಷೇತ್ರ. ಅದರ ಮೂಲಕ ನಮ್ಮ ನೈಸರ್ಗಿಕ ಸಂಪತ್ತನ್ನೂ ಪಾಶ್ಚಿಮಾತ್ಯ ಅರ್ಥ ವ್ಯವಸ್ಥೆಗೆಂದು ತೆರೆದಿಡುವಲ್ಲಿ ದಾಪುಗಾಲು ಕರ್ನಾಟಕದ ಕೃಷಿ ನೀತಿ.

ಕರ್ನಾಟಕದ ಕೃಷಿ ನೀತಿಯನ್ನು (ಕ.ಕೃ.ನೀ) ಮಹಿಳೆಯರ ದೃಷ್ಟಿಯಲ್ಲಿ ಗಮನಿಸುವುದಕ್ಕೆ ಮುಂಚೆ 'ಉದಾರೀಕರಣ'ಮತ್ತು'ಜಾಗತೀಕರಣ'ವು ಸಿದ್ಧಾಂತಗಳ

ಸಂದರ್ಭದಲ್ಲಿ ಮಹಿಳೆಯನ್ನು ಅದರಲ್ಲೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ಮಹಿಳೆಯನ್ನು ಗಮನಿಸ ಹೊರಟಲ್ಲ ಕರ್ನಾಟಕ ಕೃಷಿ ನೀತಿಯು ಮಹಿಳೆಗೆ ಯಾವ ಆದ್ಯತೆ ನೀಡಿದೆ ಎನ್ನುವುದನ್ನು ಕಾಣಬಹುದಾಗಿದೆ.

'ಉದಾರೀಕರಣ' ಮತ್ತು 'ಜಾಗತೀಕರಣ'ವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಕಾಪಾಡಿಕೊಳ್ಳಲು ತೊಡಗಿರುವ ಒಂದು ಮುಖದ ಎರಡು ರೂಪಗಳು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ಶ್ರಮ ಹಾಗೂ ನೈಸರ್ಗಿಕ ಸಂಪತ್ತನ್ನು ಆಯಾ ದೇಶಗಳಲ್ಲಿ ಭೋಗ ವಸ್ತುಗಳಾಗಿ ತಮ್ಮ ದೇಶಗಳಿಗೆ ಆಮದು ಮಾಡಿಕೊಳ್ಳುವುದು. ಈ ದೃಷ್ಟಿಯಲ್ಲಿ ಅತಿ ಹೆಚ್ಚಿನ ಜನಸಂಖ್ಯೆಯಿಂದ ತುಂಬಿ ತುಳುಕುವ (ಎಂಬ ಭಾವನೆ ನೀಡಲಾಗಿದೆ), ಕಡಿಮೆ ವೇತನಕ್ಕೆ ದೊರಕುವ ಶ್ರಮಶಕ್ತಿ ಹೊಂದಿರುವುದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು. ಇಂತಹ ಶ್ರಮಶಕ್ತಿಯನ್ನು ಗಣನೆಗೆ ತೆಗೆದುಕೊಂಡಾಗ ಮಹಿಳೆ ಅತಿ ಅಗ್ಗದ ದರದಲ್ಲಿ ಲಭ್ಯವಾಗುವ ಶ್ರಮಶಕ್ತಿ. ಆದುದರಿಂದ ಅದನ್ನು ಹೆಚ್ಚಾಗಿ ಬಳಸಿಕೊಂಡಲ್ಲಿ ಹೆಚ್ಚು ಲಾಭ. ಇನ್ನೊಂದೆಡೆ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕಂಡುಬರುವುದು ಮಹಿಳೆಯರಿಂದ ತಮ್ಮ ತಮ್ಮ ಕುಟುಂಬಗಳನ್ನು ಆರ್ಥಿಕ ವಿಪರ್ಯಾಸಗಳ ನಡುವಿನಲ್ಲೇ ಸುಗಮವಾಗಿ ಸಾಗಿಸಿಕೊಂಡು ಹೋಗಲು ಈಕೆ ಅನೇಕ ಪರ್ಯಾಯಗಳನ್ನು ರೂಪಿಸಿಕೊಂಡಿರುವುದರಿಂದ, ಇಂದು ಸಹ ಅನೇಕ ರಾಷ್ಟ್ರಗಳಲ್ಲ ಬಡತನದ ಬವಣೆಯ ತೀವ್ರತೆಯನ್ನು ಎದುರಿಸಲು ಸಾಧ್ಯವಾಗಿದೆ. ಇಂತಹ ಪರ್ಯಾಯಗಳು ಕೇವಲ ಆಹಾರ ಉತ್ಪಾದನೆ ಅಥವಾ ಕೌಟುಂಬಿಕ ರಕ್ಷಣೆಗೆ ಸೀಮಿತಗೊಳ್ಳದೆ ಆರ್ಥಿಕ ಪರಿಸ್ಥಿತಿಯಲ್ಲೂ ಸಾಧ್ಯವೆನ್ನುವುದನು ಬಂಗ್ಲಾ ದೇಶದ ಮಹಿಳೆಯರು ಜಗತ್ತಿಗೆ ತೋರಿಸಿದ್ದಾರೆ. ಇಂತಹ ಸ್ವಾವಲಂಬನೆ ಹೆಚ್ಚಾಗಿ ರೂಪುಗೊಂಡಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಅವಕಾಶವೆಲ್ಲಿ? ಆದುದರಿಂದ ಮಹಿಳೆಯರನ್ನು ಅಂತಹ ಸ್ವಾವಲಂಬನೆಯಿಂದ ಹೊರಕ್ಕೆ ತರಬೇಕು, ಅವರ ದೈಹಿಕ ಶಕ್ತಿಯನ್ನು ಶ್ರಮಶಕ್ತಿಯಾಗಿ ಬಳಸಿಕೊಳ್ಳಬೇಕು.

ಕೌಟುಂಬಿಕ ಸ್ವಾವಲಂಬನೆಯನ್ನು ಗುರಿಯಾಗಿ ಹೊಂದಿರುವ ಮಹಿಳೆ, ಅದಕ್ಕಾಗಿ ನಿಸರ್ಗ ಸಂರಕ್ಷಿಸುತ್ತಾ ಅದರಲ್ಲಿನ ಅನೇಕ ವಸ್ತುಗಳನ್ನು ಬಳಕೆಗಾಗಿ ಒಪ್ಪ ಮಾಡುವ ಶಕ್ತಿಯನ್ನು ಅನೇಕ ರೂಪಗಳಲ್ಲಿ ಪ್ರದರ್ಶಿಸಿದ್ದಾಳೆ. ಅಂತವುಗಳಲ್ಲಿ ಕೀಟನಾಶಕವಾಗಿ ಬೇವು ಬಂದಾಗಿದ್ದರೆ, ಆರೋಗ್ಯ ಕ್ಷೇತ್ರದಲ್ಲಿ ಗಿಡಮೂಲಿಕೆಗಳು ಅಪಾರ. ಪಾಶ್ಚಿಮಾತ್ಯರು ಯಾವುದನ್ನು 'ಕಳೆ' ಎನ್ನುತ್ತಾರೋ ಅದು ಆಹಾರ ರೂಪ ತಾಳುವುದು ಗ್ರಾಮೀಣ ಮಹಿಳೆಯರಿಂದ. ಅಂದರೆ, ಗ್ರಾಮೀಣ ಮಹಿಳೆಗೆ ನಿಸರ್ಗ ಸಂರಕ್ಷಣೆಯ ಅರಿವು ಒಂದು ಕಡೆಯಾದರೆ, ಇನ್ನೊಂದೆಡೆ ಪ್ರಕೃತಿಯನ್ನು ಸಂರಕ್ಷಿಸುತ್ತಾ ಅದರ ಬಳಕೆಯ ಜ್ಞಾನ ಹೊಂದಿರುವುದನ್ನು ಕಾಣಬಹುದು. 'ಇವೆರಡು ಅತೀ ಅಮೂಲ್ಯ. ಏಕೆಂದರೆ, ಮೊದಲನೆಯದಾಗಿ, ಮಹಿಳೆಯ ಉತ್ಪಾದನಾ ಜ್ಞಾನವನ್ನು ಕೈಗಾರಿಕಾ ಕ್ಷೇತ್ರಕ್ಕೆ ವರ್ಗಾಯಿಸಿ, ಆಹಾರ ಸಂಸ್ಕರಣ ಕ್ಷೇತ್ರವನ್ನು ಶ್ರೀಮಂತಗೊಳಿಸಬಹುದು. ಈ ದಿಕ್ಕಿನಲ್ಲಿ ಈಗಾಗಲೇ ಅನೇಕ ಉದಾಹರಣೆಗಳಿವೆ. ಇನ್ನೊಂದೆಡೆ, ಕೌಟುಂಬಿಕ ಸ್ವಾವಲಂಬನೆಯನ್ನು ಮುರಿಯುವುದು. ವೇತನಶೀಲತೆಯನ್ನು ಹೆಚ್ಚುಗೊಳಿಸಿ ಮಾರುಕಟ್ಟೆ ವ್ಯವಸ್ಥೆಗೆ ಎಳೆಯುವುದರಿಂದ ಕುಟುಂಬದಲ್ಲಿ ಹಣದ ಬೇಡಿಕೆ ಹೆಚ್ಚಾಗಿ ಮಹಿಳೆ ಅತಿ ಕಡಿಮೆ ವೆಚ್ಚಕ್ಕೆ ದೊರಕುವ ಕಾರ್ಮಿಕ ಶಕ್ತಿಯಾಗುತ್ತಾಳೆ. ಈ ದಿಕ್ಕಿನಲ್ಲಿ ಪಟ್ಟಣ ಪ್ರದೇಶಗಳಲ್ಲಿ 'ಗಾರ್ಮೆಂಟ್ಸ್' ಕಾರ್ಖಾನೆಗಳೊಂದು ಕಡೆಯಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಬೀಡಿಕಟ್ಟುವುದು, ತೀರ ಪ್ರದೇಶಗಳಲ್ಲಿ ಸೀಗಡಿ ಸುಲಿಯುವುದು ಕಂಡು ಬರುವುದರ ಜತೆಗೆ ಗುಡಿ ಕೈಗಾರಿಕೆಗಳಲ್ಲಿ (Cottage industries) ಹೆಚ್ಚು ಹೆಚ್ಚಾಗಿ ಮಹಿಳೆ ತನ್ನ ಶ್ರಮವನ್ನು ಅತಿ ಕಡಿಮೆ ವೆಚ್ಚಕ್ಕೆ ಮಾರಿಕೊಳ್ಳುತ್ತಿದ್ದಾಳೆ. ಹೀಗೆ ಕುಟುಂಬಗಳಿಂದ ಗೃಹ ಕೈಗಾರಿಕೆಗಳತ್ತ ಮಹಿಳೆ ಸಾಗಿದರೆ, ಪ್ರಕೃತಿಯಲ್ಲಿನ ಅನೇಕ ವಸ್ತುಗಳು, ಅದರಲ್ಲೂ ಆಕೆ ರಕ್ಷಿಸಿಕೊಂಡು ಬಂದಿರುವ ಜೀವ ವೈವಿಧ್ಯತೆ ಕೈಗಾರಿಕೆಗಳಿಗೆ ಸುಲಭವಾಗಿ ಲಭ್ಯವಾಗುವಂತಾಗುತ್ತದೆ. ಕೌಟುಂಬಿಕ ಸ್ವಾವಲಂಬನೆಯನ್ನು ಮುರಿದರೆ ದೇಶದ ಸ್ವಾವಲಂಬನೆಯನ್ನು ಸುಲಭವಾಗಿ ಮುರಿಯಬಹುದು.

ಮೇಲ್ಕಂಡ ಚೌಕಟ್ಟಿನಲ್ಲಿ ಕರ್ನಾಟಕದ ಕೃಷಿ ನೀತಿಯನ್ನು (ಕ.ಕೃ.ನೀ) ಪರಿಶೀಲಿಸೋಣ. ಕರ್ನಾಟಕ ಕೃಷಿ ನೀತಿಯಲ್ಲಿ ಇದುವರೆಗಿನ ಕೈಗಾರಿಕೋದ್ಯಮ ಮತ್ತು

ವ್ಯವಸಾಯ ಕ್ಷೇತ್ರಗಳ ನಡುವೆ ಇರುವ ತಾರತಮ್ಯ ನಿವಾರಿಸಲು, ವ್ಯವಸಾಯ ಕ್ಷೇತ್ರವನ್ನು ಒಂದು ಕೈಗಾರಿಕೋದ್ಯಮವೆಂದು ಪರಿಗಣಿಸಬೇಕೆಂದು ಹೇಳಲಾಗಿದೆ. ಎರಡು ಕ್ಷೇತ್ರಗಳಲ್ಲಿರುವ ಬಂಡವಾಳ ಹೂಡಿಕೆಯ ತಾರತಮ್ಯವನ್ನು, ಹಣಕಾಸು ನಿಯಮಗಳನ್ನು, ಸವಲತ್ತುಗಳನ್ನಷ್ಟೇ ಗಣನೆಗೆ ತೆಗೆದುಕೊಂಡರೆ ಇದು ಸ್ವಾಗತಾರ್ಹವಾಗಬಹುದು. ಆದರೆ ಕ.ಕೃ.ನೀ.ಯಲ್ಲಿ ತಿಳಿಸಿದಂತೆ ಬೆಲೆ ನಿರ್ದಿಷ್ಟತೆಯಲ್ಲಿ ಎಲ್ಲ ರೀತಿಯ ವೆಚ್ಚಗಳನ್ನು ಗಣನೆಗೆ ತೆಗೆದುಕೊಳ್ಳುವುದರಿಂದ ಲಾಭ ಹೆಚ್ಚಾಗುತ್ತದೆ—'ಎಲ್ಲಿಯವರೆಗೆ ವಾಣಿಜ್ಯ ಬೆಳೆಗಳು ಅಥವಾ ಹೆಚ್ಚು ಲಾಭ ತರುವ ಬೆಳೆಗಳು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಶಕ್ತಿ ಬೆಳಸಿಕೊಳ್ಳಬೇಕಾಗಿದೆಯೊ ಅಲ್ಲಿಯವರೆಗೆ ಅಂದರೆ, ವಾಣಿಜ್ಯವಲ್ಲದ ಬೆಳೆಗಳು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಹೊಂದಿಲ್ಲದಂತವು. ಅವುಗಳನ್ನು, ಅವುಗಳ ವೆಚ್ಚ ನಿರ್ದಿಷ್ಟತೆಯನ್ನು ಕೈಗಾರಿಕ ಕ್ಷೇತ್ರದಲ್ಲಿಯಂತೆ ಪರಿಗಣಿಸಲಾಗುವುದಿಲ್ಲ. ಇದರ ಪರಿಣಾಮ ನೇರವಾಗಿ ಮಹಿಳೆಯರ ಮೇಲೆ ಕಾಣಿಸಿಕೊಳ್ಳುತ್ತದೆ.

ಗ್ರಾಮೀಣ ಮಹಿಳೆಯರು ಹೆಚ್ಚಾಗಿ ತೊಡಗಿಸಿಕೊಳ್ಳುವುದು ಸಾಂಪ್ರದಾಯಕ ಬೆಳೆಗಳಾದ ಆಹಾರ ಧಾನ್ಯಗಳನ್ನು ಬೆಳೆಯುವುದರಲ್ಲಿ. ವಾಣಿಜ್ಯ ಬೆಳೆಗಳಿಗೆ ಬೇಕಾದ ತಾಂತ್ರಿಕತೆ ಸಂಬಂಧದ ತರಬೇತಿ ಮತ್ತು ಸಂಶೋಧನೆಯನ್ನು ಸಂಬಂಧಿತ ಇಲಾಖೆಗಳು ಪುರುಷರಿಗಷ್ಟೇ ಮೀಸಲಾಗಿಟ್ಟಿರುವುದರಿಂದ ಮಹಿಳೆಯರು ತಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆ ವಾಣಿಜ್ಯ ಬೆಳೆಗಳ ಬೇಸಾಯದಲ್ಲಿ ಒಂದು ತಾಂತ್ರಿಕ ಮೂಲವಸ್ತುವಷ್ಟೇ ಆಗುತ್ತಾಳೆ. ಇದನ್ನು ಈಗಾಗಲೇ ರೇಷ್ಮೆ ಬೇಸಾಯದಲ್ಲಿ ನಾವು ಕಾಣಬಹುದು. ಕ.ಕೃ.ನೀ. ವಾಣಿಜ್ಯ ಬೆಳೆಗಳಿಗೆ ಒತ್ತು ಕೊಡುವುದರಿಂದ, ಮಹಿಳೆ ಕೃಷಿ ಕ್ಷೇತ್ರದಲ್ಲಿ ನೈಪುಣ್ಯತೆ ಹೊಂದಿದ ಮೂಲ ವಸ್ತುವಾಗುತ್ತಾಳೆಯೇ ಹೊರತು ಅಪಾರ ಜ್ಞಾನ ಭಂಡಾರ ಪಡೆದ 'ಉತ್ಪಾದಕಿ' ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹೆಚ್ಚೆಚ್ಚು ಪುರುಷಾಧಿಕಾರಕ್ಕೆ ಮಹಿಳೆ ಒಳಗಾಗುತ್ತಾಳೆ.

ಕ. ಕೃ. ನೀ.ಯಲ್ಲಿ ಖಾಸಗಿ ಬಂಡವಾಳವನು, ಅದರಲ್ಲೂ ವಿದೇಶೀಯ ಬಂಡವಾಳವನ್ನು ಸ್ವಾಗತಿಸಲು ಅನೇಕ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ, ಬೀಜ ಉತ್ಪಾದನೆ, ಆಹಾರ ಸಂಸ್ಕರಣೆ ಹಾಗೂ ಹೆಚ್ಚು ತಾಂತ್ರಿಕತೆಯನ್ನು ಪಡೆದ ತೋಟಗಾರಿಕೇ ರೇಷ್ಮೆ, ಹಾಲು ಉತ್ಪಾದನೆ, ಕೋಳಿ ಸಾಗಾಣಿಕೆ, ಮಾಂಸ ತಯಾರಿಕೆ, ಹಾಗೂ ಪ್ರಮುಖವಾದ ಹೂಬೇಸಾಯ. ಇವುಗಳು ಗ್ರಾಮೀಣ ಮಹಿಳೆಯರ ಮೇಲೆ ಬೀರಬಹುದಾದ ಪರಿಣಾಮವನ್ನು ಎರಡು ರೀತಿಯಲ್ಲಿ ವಿಶ್ಲೇಷಿಸಬಹುದಾಗಿದೆ. ಮೊದಲನೆಯದಾಗಿ, ಮಹಿಳೆ ಕೆಲವು ಕ್ಷೇತ್ರಗಳಲ್ಲಿ, ಯಾವ ಕ್ಷೇತ್ರಗಳಲ್ಲಿ ವಿಶ್ವವಿದ್ಯಾಲಯದ ವಿಜ್ಞಾನ ಕೈ ಹಾಕಲಿಲ್ಲವೋ ಅಂತಹ ಕಡೆಗಳಲ್ಲಿ ತನ್ನದೆ ಆದ ನೈಪುಣ್ಯತೆಯನ್ನು, ವೈಚಾರಿಕತೆಯನ್ನು ಹೊಂದಿ, ತನ್ನ ಅಸ್ತಿತ್ವವನ್ನು–ವ್ಯಕ್ತಿತ್ವವನ್ನು ಕುಟುಂಬ ಹಾಗೂ ಸಮಾಜಕ್ಕೆ ತೋರಿಸಿಕೊಡುತ್ತಿದ್ದಾಳೆ. ಇಂತಹದ್ದು ಸಣ್ಣ ಮತ್ತು ಅತಿಸಣ್ಣ ರೈತರ ಕುಟುಂಬಗಳಲ್ಲಿ ಅಧಿಕ. ಇಲ್ಲಿ ಮಹಿಳೆ ಪುರುಷನ ಮೇಲೆ ಆಧಾರ ಪಡದೆ ವಾಣಿಜ್ಯ ಮಟ್ಟಕ್ಕೆ ಎಟುಕದೇ ಇರುವಂತಹವನ್ನು ಬೆಳೆದು ತನ್ನದೇ ಆದ ಆರ್ಥಿಕ ಮೂಲ ಹಾಗೂ ವಹಿವಾಟುಗಳನ್ನು ಬೆಳೆಸಿಕೊಂಡಿರುತ್ತಾಳೆ. ಇಂತಹ ಸಾಮರ್ಥ್ಯ, ಯಾವ ಕುಟುಂಬಗಳಲ್ಲಿ ಆದಾಯವೆಲ್ಲವನ್ನೂ ಪುರುಷನೇ ನಿಯಂತ್ರಿಸಿ ಮಹಿಳೆಯ ಬೇಡಿಕೆಗಳನ್ನು ತಿರಸ್ಕರಿಸಲು ಉದ್ಯುಕ್ತನಾಗಿರುತ್ತಾನೋ ಅಂತಹ ಕಡೆಗಳಲ್ಲಿ ಸ್ತ್ರೀ ಹೆಚ್ಚಿನ ವಹಿವಾಟು ಹೊಂದಲು ಸಹಾಯಕವಾಗಿದ್ದು, ಇದನ್ನು "dormant protest" ಎಂದು ಅಥವಾ 'dormant family economy' ಎಂದು ಸಹ ಗುರುತಿಸಬಹುದಾಗಿದೆ. ಇಂತಹ ವ್ಯವಸ್ಥೆ ಕುಟುಂಬಕ್ಕೆ ಬೇಕಾಗುವುದನ್ನು ಸರಬರಾಜು ಮಾಡುವುದರೊಂದಿಗೆ ಉಳಿದ ಅಥವಾ ಹೆಚ್ಚುವರಿ (Surplus) ಯನ್ನು ಮಾರಾಟ ಮಾಡುವುದರ ಮೂಲಕ ಚೇತನಗೊಳ್ಳುತ್ತದೆ. ಇದು ಸಾಮಾನ್ಯವಾಗಿ ಕೋಳಿ ಸಾಕಾಣಿಕೆ, ಮಾಂಸಕ್ಕಾಗಿ ಕುರಿ ಮತ್ತು ಮೇಕೆ ಸಾಕಾಣಿಕೆ, ಆಹಾರ ಸಂಸ್ಕರಣೆ, ಹಾಲು ಉತ್ಪಾದನೆ ಮತ್ತು ಹೂವಿನ ಕೃಷಿಗಳನ್ನು ಒಳಗೊಂಡಿರುತ್ತದೆ. ಕುರಿ–ಕೋಳಿಗಳನ್ನು ಪಾಲಿಸಿ ಸಾಕುವುದರಿಂದ ಅಥವಾ ತಾನು ಉಳಿಸಿದ ಹಣವನ್ನು ಹೆಂಗಸರು ಸಾಮಾನ್ಯವಾಗಿ ತಮ್ಮ ಹಣವೆಂದು ಹೇಳಿಕೊಳ್ಳುತ್ತಾರೆ. ಕುರಿ-ಕೋಳಿ ಸಾಕಾಣಿಕೆ, ಮೊಟ್ಟೆ ಮಾರಾಟಗಳಿಂದ ಬಂದ ಹಣ ಸ್ತ್ರೀಗೆ ತನ್ನದೇ ಆದ ಬಂಡವಾಳದ ಮೂಲ ಕಲ್ಪಿಸಿ, ಅವುಗಳಿಂದ

ಕುಟುಂಬದ ಪುರುಷನು ತನ್ನ ಜಿಪುಣತನ ಮತ್ತು ಪೋಲುಗಾರಿಕೆಯಿಂದ ತೀರಿಸಲು ಸಾಧ್ಯವಾಗದ ವಯಕ್ತಿಕ ಬೇಡಿಕೆಗಳನ್ನು ಪೂರೈಸಿಕೊಳ್ಳುವುದಕ್ಕೂ ಮತ್ತು ತನ್ನದೇ ಆರ್ಥಿಕ ಕೊಡುಗೆ ಅಥವಾ ತನ್ನ ಆರ್ಥಿಕ ಸಾಮರ್ಥ್ಯವನ್ನು ವ್ಯಕ್ತಪಡಿಸುವುದಕ್ಕೂ ಅನುಕೂಲವಾಗಿದೆ. ಇಂತಹ ಕ್ಷೇತ್ರಗಳು ವಿದೇಶೀ ಬಂಡವಾಳ ಹೂಡಿಕೆಗೆ ತುತ್ತಾದರೆ ಇಲ್ಲಿಯವರೆಗೆ ಇದ್ದಂತಹ ಸುಪ್ತ ವ್ಯವಸ್ಥೆಯು ವಸ್ತುವಿನ ಗುಣಮಟ್ಟ ಕಡಿಮೆಯಾಗಬಹುದು. ಬ್ರಾಯಲರ್ ಕೋಳಿಗಳು ಬಂದ ಮೇಲೆ ಗ್ರಾಮೀಣ ಮಹಿಳೆ ಸಾಕುತ್ತಿರುವ ಕೋಳಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ನಾಟಿ ಕೋಳಿಗಳ ಬೆಲೆ ಜಾಸ್ತಿಯಾದರೂ ಅನೇಕ ಮಹಿಳೆಯರು ಅದನ್ನು ಸಾಕುವ ಸಾಮರ್ಥ್ಯ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅಗ್ಗದ ಬ್ರಾಯಲರ್ ಕೋಳಿ ಮತ್ತು ರೋಗ–ರುಜಿನಗಳು. ಇಂತಹ ನಷ್ಟವನ್ನು ಮಹಿಳೆ ಹಾಲಿನ ಉತ್ಪಾದನೆಯಲ್ಲಿ ಈಗಾಗಲೇ ಅನುಭವಿಸುತ್ತಿದ್ದಾಳೆ. ಹಾಲು ಶೇಖರಣ ಘಟಕಗಳು ಹಳ್ಳಿಗಳಲ್ಲಿ ಪ್ರಾರಂಭವಾಗುವುದಕ್ಕೆ ಮುಂಚೆ ಮನೆಯಲ್ಲಿ ಆಗುತ್ತಿದ್ದ ಹಾಲಿನ ಪ್ರಮಾಣವನ್ನು ಪುರುಷರು ಗಣನೆಗೆ ತೆಗೆದುಕೊಳ್ಳದೆ ಇದ್ದುದರಿಂದ ಮಹಿಳೆಯರು ಮನೆಯಲ್ಲಿ ಮಿಗತವಾದ ತುಪ್ಪವನ್ನೂ ಮಾರಿ ಸುಪ್ತ ಆರ್ಥಿಕ ವ್ಯವಸ್ಥೆಯ ನಿರ್ವಾಹಕರಾಗಿ, ಅವರಲ್ಲಿ ತಮ್ಮ ಹಾಗೂ ಮಕ್ಕಳ (ಹೆಚ್ಚು) ಹಲವು ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಿದ್ದರು. ಡೈರಿಯಿಂದಾಗಿ ಇಂತಹ ತುಪ್ಪದ ಉತ್ಪಾದನೆ ಸಾಧ್ಯವಿಲ್ಲ. ಹಾಗೂ ಹಾಲೂ ಉತ್ಪಾದನೆಯನ್ನೂ ಕುಟುಂಬದ ಆರ್ಥಿಕ ಸುಭದ್ರತೆಗೆ ದಾನ ಮಾಡಿದ್ದಾಳೆ. ವಿದೇಶೀ ಬಂಡವಾಳ ಬಂದದ್ದೇ ಆದರೆ, ಈ ಮೇಲ್ಕಂಡ ಕ್ಷೇತ್ರಗಳಲ್ಲಿ ಮಹಿಳೆ ತನ್ನ ಆರ್ಥಿಕ ಮೂಲವನ್ನೂ, ಸುಪ್ತ ವ್ಯವಸ್ಥೆಯನ್ನು ಸಂಪೂರ್ಣ ಕಳೆದುಕೊಂಡು ಹೆಚ್ಚು ಹೆಚ್ಚು ಪುರುಷಾಧಿಕಾರಕ್ಕೆ ಒಳಗಾಗುತ್ತಾಳೆ.

ಎರಡನೆಯ ಆಪತ್ತಾಗಿ ಕಾಣಿಸುವುದು, ಸ್ತ್ರೀಯರು ತಾಂತ್ರಿಕವಾಗಿ ಮೂಲೆ ಗುಂಪಾಗುವಿಕೆ. ಮೇಲೆ ಹೇಳಿದ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ತನ್ನದೇ ಆದ ತಾಂತ್ರಿಕ ಜ್ಞಾನ ಹೊಂದಿದ್ದಾಳೆ. ಅದು ಬೀಜ ಉತ್ಪಾದನೆಯಾಗಬಹುದು, ಬೀಜ ಸಂರಕ್ಷಣೆಯಾಗಬಹುದು, ರೇಷ್ಮೆಯಾಗಬಹುದು, ಹೂ ಕೃಷಿಯಾಗಬಹುದು. ಇಲ್ಲಿ ವಿದೇಶೀ ಬಂಡವಾಳ ಬಂತೆಂದರೆ ಮಾನವ ಸಂಪನ್ಮೂಲಕ್ಕಿಂತ ಯಂತ್ರೋಪಕರಣಗಳಿಗೆ ಪ್ರಾಮುಖ್ಯತೆ ಹೆಚ್ಚಾಗುತ್ತದೆ. ಇದರಿಂದಾಗಿ ಹೆಚ್ಚಿನ ಲಾಭ ಬಂದರೆ, ಸದಾ ಲಾಭಗಳಿಕೆಯ ಮೇಲೆ ಗಮನವಿಟ್ಟಿರುವ ಪುರುಷರು ವಿದೇಶೀ ತಂತ್ರಜ್ಞಾನ, ಉಪಕರಣಗಳಿಗೆ ಪ್ರಾಮುಖ್ಯತೆ ಕೊಡುವುದರಿಂದ ಸ್ತ್ರೀಯರು ಹೊಂದಿರುವ ಜ್ಞಾನ ಸಂಪತ್ತು ಮೂಲೆಗುಂಪಾಗಿ ಆ ವಿದೇಶೀ ಬಂಡವಾಳದಿಂದ ಸ್ಥಾಪನೆಗೊಂಡ ಕಾರ್ಖಾನೆಗಳಲ್ಲಿ ಮಹಿಳೆಯರು ಕಾರ್ಮಿಕರಾಗಿ ದುಡಿಯಬೇಕಾಗುತ್ತದೆ. ಈ ಪರಿಸ್ಥಿತಿ ಹೆಚ್ಚಾಗಿ ಮೀನುಗಾರಿಕೆಯಲ್ಲಿ ಕಂಡುಬರುವ ಸಂಭವವಿದೆ. ಈಗಾಗಲೇ ಕೆಲವು ಖಾಸಗಿ ಕಂಪನಿಗಳು ಮೀನುಗಾರಿಕೆಯಲ್ಲಿ ತೊಡಗಿರುವುದರಿಂದ, ಮೀನುಗಾರ ಕುಟುಂಬದ ಮಹಿಳೆಯರು ತಾವು ಹಿಂದೆ ಮಾಡುತ್ತಿದ್ದ ಕಾರ್ಯಗಳಾದ ಮೀನು ವರ್ಗೀಕರಣ, ಸಂರಕ್ಷಣೆ ಹಾಗೂ ಮಾರಾಟಗಳನ್ನು ತೊರೆದು ಈಗ ಕಂಪನಿಗಳಲ್ಲಿ ಸೀಗಡಿ ಸುಲಿಯುವ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಆಡಳಿತ, ನಿರ್ವಹಣೆ, ಮಾರುಕಟ್ಟೆ ಮತ್ತು ಪ್ಯಾಕಿಂಗ್ ಮಾಡುವ ತಾಂತ್ರಿಕತೆಯನ್ನು ಪುರುಷರೇ ಹೊಂದಿರುವುದರಿಂದ ಮಹಿಳೆಯರು ಕೇವಲ ಕಾರ್ಮಿಕರಾಗಿ ದುಡಿಯಬೇಕಾಗಿದೆ.

ಕ.ಕೃ.ನೀ. ಮಹಿಳೆಯರಿಗೆಂದು ಹಲವು ಕ್ಷೇತ್ರಗಳನ್ನು ಆಯ್ಕೆ ಮಾಡಿದೆ. ಅವುಗಳೆಂದರೆ, ಗ್ರಾಮಗಳಲ್ಲಿ ಹೆಚ್ಚಿನ ಸಾಲ ಸೌಲಭ್ಯ ವೃದ್ಧಿಪಡಿಸಲು ಮಹಿಳೆಯರಿಗೆ ಸಾಮೂಹಿಕ ಗ್ಯಾರಂಟಿ ಮೇರೆಗೆ ಸಾಲ ನೀಡುವುದು. ಅದರಲ್ಲೂ ಆಕೆಯ ಸಾಂಪ್ರದಾಯಕ ಕ್ಷೇತ್ರಗಳಲ್ಲಿ, ಇದು ಬಾಂಗ್ಲಾ ದೇಶದಲ್ಲಿ ಸ್ತ್ರೀಯರೇ ಜಾರಿ ಮಾಡಿರುವ ಪದ್ಧತಿಯ ರೀತಿಯಲ್ಲಿ. ಇಲ್ಲಿ ಸರಕಾರ ಮರೆತಿರುವ ವಿಷಯವೆಂದರೆ, ಬಾಂಗ್ಲಾದೇಶದ ಮಾದರಿಯನ್ನು ಈಗಾಗಲೇ ತಮಿಳುನಾಡಿನಲ್ಲಿ ಪ್ರಯೋಗಾತ್ಮಕವಾಗಿ ಜಾರಿಯಲ್ಲಿ ತಂದಿರುವುದನ್ನು. ಆ ರಾಜ್ಯದಲ್ಲಿ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಮಹಿಳೆಯರನ್ನು ಒಟ್ಟುಗೂಡಿಸಲು ದುಡಿದಿವೆ. ಇದರಿಂದಾಗಿ ಈ ವಿಧಾನ ಯಶಸ್ಸು ಕಂಡಿದ್ದರೂ ಅದು ಮಹಿಳೆಯರನ್ನು ಯಾವ ಮಟ್ಟಕ್ಕೆ 'Enterprenurial' ಮಾಡಿ, ರಫ್ತು ಕ್ಷೇತ್ರದಲ್ಲಿ ಆಕೆ ಎಷ್ಟರ ಮಟ್ಟಕ್ಕೆ ಮೇಲುಗೈ ಸಾಧಿಸಲು ಸಹಾಯವಾಗಬಲ್ಲದು ಅನ್ನುವುದು ಸಂಶಯಾಸ್ಪದ. ಏಕೆಂದರೆ, ಇಲ್ಲಿ ಉಳಿತಾಯಕ್ಕೆ ಮತ್ತು ಗ್ರಾಮಗಳಿಗೆ ಮಿತಿಯಾದ ಬಂಡವಾಳ ಹೂಡಿಕೆ ನಡೆಯುತ್ತದೆ. ಇದ

ರಿಂದಾಗಿ, ಕೌಟುಂಬಿಕ ಆರ್ಥಿಕ ಸಮಸ್ಯೆಗಳಿಗೆ ಇದು ಪೂರಕವಾಗಬಹುದು. ಅಥವಾ ಸ್ತ್ರೀಯರನ್ನು ಅಂತಹ ವ್ಯವಸ್ಥೆಯಲ್ಲಿ ತೊಡಗಿಸಿ ಪುರುಷರು ಅವರ ಮೂಲಕ ತಮ್ಮ ಸಾಲದ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು. ಈ ಕಾರಣಗಳಿಂದ ಮಹಿಳೆ ಆರ್ಥಿಕ ಸ್ವಾತಂತ್ರ್ಯಗಳಿಸುವ ಅಥವಾ ಆರ್ಥಿಕ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಕಡಿಮೆ.

ಯಾವ ರಾಜಕೀಯ ಪಕ್ಷ ಮಹಿಳೆಯರಿಗಾಗಿ ಎಲ್ಲ ಆಡಳಿತ ಸ್ತರಗಳಲ್ಲಿ ಶೇ. 30ರಷ್ಟು ಪ್ರಾತಿನಿಧ್ಯವಿರಬೇಕೆಂದು ಪ್ರತಿಪಾದಿಸುತ್ತದೆಯೋ ಅದೇ ಸರಕಾರ ಕ.ಕೃ.ನೀ.ಯಲ್ಲಿ ಉದ್ದೇಶಿಸಲಾಗಿರುವ ನೈಸರ್ಗಿಕ ವಸ್ತುಗಳ ನಿರ್ವಹಣೆಗಾಗಿ ಗ್ರಾಮ ಮಟ್ಟದಲ್ಲಿನ ಸಮಿತಿಗಳ ರಚನೆಯಲ್ಲಿ ಮಹಿಳೆಯರಿಗೆ ಯಾವುದೇ ಸ್ಥಾನಗಳನ್ನು ಮೀಸಲಾಗಿಸಿಲ್ಲ. ಅಲ್ಲದೆ ಮಹಿಳೆಯರಿಗೆ ಅಗತ್ಯವಾದ ಕೆಲವು ನೈಸರ್ಗಿಕ ಸಂಪನ್ಮೂಲಗಳ ವಿಚಾರದಲ್ಲಿ ಯಾವುದೇ ಚಕಾರವಿಲ್ಲ. ಮಹಿಳೆಯರು ತಮ್ಮ ಗೃಹ ಕೆಲಸಗಳನ್ನು ಶುಭ್ರವಾಗಿ ಹಾಗೂ ಮಾನಸಿಕ ಒತ್ತಡವಿಲ್ಲದೆ ತ್ವರಿತಗತಿಯಲ್ಲಿ ಪೂರೈಸಿ ವಿಶ್ರಾಂತಿ ಪಡೆಯಲು ಅಥವಾ ಇನ್ನಿತರ ನೇರ ಆರ್ಥಿಕ ಸಂಪಾದನೆ ಗಳಿಸುವ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಲು ನೈಸರ್ಗಿಕ ಸಂಪತ್ತುಗಳಾದ ಉರುವಲು ಮತ್ತು ನೀರು ಅತ್ಯವಶ್ಯಕ. ಇಂದು ಅಂತರ್‌ಜಲದ ಮಟ್ಟ ದಿನದಿನಕ್ಕೆ ಕಡಿಮೆಯಾಗುತ್ತಿರುವಾಗ ಸರಕಾರ ಕೊರೆದಿರುವ ಬೋರ್‌ವೆಲ್‌ಗಳು ಕಾರ್ಯನಿರ್ವಹಿಸದೆ ಇರುವ ಪರಿಸ್ಥಿತಿಯಲ್ಲಿ ಕ.ಕೃ.ನೀ. ಅಂತರ್‌ಜಲದ ಬಗ್ಗೆ ಸಂಪೂರ್ಣ ಮೌನ ತಾಳಿರುವುದು ಹಾಸ್ಯಾಸ್ಪದ. ಇನ್ನೂ ಉರುವಲಿನ ಬಗ್ಗೆಯೂ ಸಂಪೂರ್ಣ ಮೌನ ಮುಂದುವರೆದಿದೆ. ಇಂದು ಬೋರ್‌ವೆಲ್‌ಗಳು ಸ್ತ್ರೀಯರಲ್ಲಿ ಆಂತರಿಕ ಕಲಹಕ್ಕೆ ಎಡೆ ಮಾಡಿಕೊಟ್ಟಿರುವಾಗ ಮತ್ತು ದಿನೇ ದಿನೇ ಗೃಹಬಂಧನಕ್ಕೆ ತೊಡಗಿಸುತ್ತಿರುವಾಗ ನೀರು ಮತ್ತು ನೀರಿನ ಸರಬರಾಜಲ್ಲ ನೀರಿನ ಸವಲತ್ತು ಹೆಚ್ಚಾಗಬೇಕು.

ವೈದ್ಯಕೀಯ ಸೌಲಭ್ಯಗಳ ಕೊರತೆಯಿರುವಾಗ ಗ್ರಾಮೀಣ ಮಹಿಳೆಯರು ಸಸ್ಯ ಔಷಧಿಗಳ ಗಣಿಗಳಾಗಿದ್ದಾರೆ. ಇವರ ಮೂಲಕವೇ 'ಬೇವು' ಅಂತರರಾಷ್ಟ್ರೀಯ ಮಟ್ಟದಲ್ಲಿ ಔಷಧಿ ಗುಣಗಳಿಗಾಗಿ ಮಾನ್ಯತೆ ಪಡೆದಿದ್ದು. ಇಂತಹ ಅನೇಕ ಸಸ್ಯಗಳ ಉಪಯೋಗ ಮಹಿಳೆಯರಿಗೆ ತಿಳಿದಿದೆ. ಆ ಜ್ಞಾನ ವೈಜ್ಞಾನಿಕ ವ್ಯಕ್ತಿಗಳ ಜ್ಞಾನಕ್ಕಿಂತ ಹಿರಿದಾದದು. ತಮಿಳುನಾಡಿನ ಹೊಸೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ವಿಜ್ಞಾನಿಗಳು 122 ವೈದ್ಯಕೀಯವಾಗಿ ಉಪಯೋಗಕ್ಕೆ ಬರುವ ಸಸ್ಯಗಳನ್ನು ಗುರುತು ಹಚ್ಚಿದ್ದರೆ, ಅದೇ ಗ್ರಾಮಗಳಲ್ಲಿನ ಮಹಿಳೆಯರು 172 ಸಸ್ಯಗಳನ್ನು ಗುರುತು ಹಚ್ಚಿದ್ದಾರೆ. ಇಂತಹ ಜ್ಞಾನಕ್ಕೆ ಇಂದು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪೈಪೋಟಿ ಇದೆ. ಕೆಲವು ಅಂತರರಾಷ್ಟ್ರೀಯ ಔಷಧಿ ತಯಾರಿಕೆ ಕಂಪನಿಗಳು, ಮಹಿಳೆಯರು ಔಷಧಿಗಾಗಿ ಉಪಯೋಗಿಸುವ ಸಸ್ಯಗಳನ್ನು ಔಷಧಿಗಳನ್ನಾಗಿ ಮಾರ್ಪಡಿಸಿ ಲಾಭಗಳಿಸುವ ಸನ್ನಾಹ ನಡೆಸುತ್ತಿವೆ. ಗ್ರಾಮೀಣ ಮಹಿಳೆಯರ ಸಹಾಯ ಪಡೆದು ತಯಾರಿಸಿದ ಔಷಧಿಗಳ ಮೇಲೆ 'ಪೇಟೆಂಟ್'ಪಡೆದು ಮಹಿಳೆಯರನ್ನೇ ವಂಚಿಸಲು ನಡೆಸುತ್ತಿರುವ ಸನ್ನಾಹ ಇದು. ಈ ದಿಸೆಯಲ್ಲಿ ಕ.ಕೃ.ನೀ. ಕೇವಲ ಹಾರಿಕೆಯ ಮಾತುಗಳನ್ನಾಡಿದೆ ಯಾವುದೇ ನಿರ್ದಿಷ್ಟ ಕ್ರಮ ಇಲ್ಲಿ ಇಲ್ಲ. ಇದರಿಂದಾಗಿ, ಮಹಿಳೆ ತನ್ನ ಸಸ್ಯ ಸಂಪತ್ತಿನ ಜ್ಞಾನದ ಲಾಭದಿಂದ ವಂಚಿತಳಾಗುತ್ತಾಳೆ. ಕೇವಲ ಒಂದು ತಲೆಮಾರಲ್ಲಿ, ಅನೇಕ ತಲೆಮಾರುಗಳ ಮಹಿಳೆಯರಿಗೆ ಆಗುತ್ತಿರುವ ವಂಚನೆ ಇದು. ಇಂತಹ ವಂಚನೆ ಬೆಳೆ ಕ್ಷೇತ್ರದಲ್ಲೂ ನಡೆಯುತ್ತಿದೆ.

ಅನೇಕ ಬಡಕುಟುಂಬದ ಮಹಿಳೆಯರು ಆಹಾರ ಕೊರತೆಯನ್ನು ನಿವಾರಿಸಿಕೊಳ್ಳಲು ಸೊಪ್ಪನ್ನು ಅವಲಂಬಿಸಿರುತ್ತಾರೆ. ಮುಳಬಾಗಿಲು ತಾಲ್ಲೂಕಿನ ಕೆಲವು ಮಹಿಳೆಯರು 104 ರಿಂದ 146 ಜಾತಿ ಸೊಪ್ಪುಗಳನ್ನು (ವರ್ಷ ಪೂರ್ತಿ ದೊರೆಯುವ ರೀತಿಯಲ್ಲಿ) ಗುರುತಿಸಬಲ್ಲರು. ಈ ಜೈವಿಕ ಸಂಪತ್ತು ಅಪಾರ, ಇವುಗಳ ರಕ್ಷಣೆ, ಪೋಷಣೆಯಾಗಿರುವುದು ಮಹಿಳೆಯರಿಂದ. ಈ ದಿನ ಅವುಗಳನ್ನು ಸಂಸ್ಕರಿಸಿ ಮಾರಾಟ ಮಾಡುವ ಕಂಪನಿಗಳಿಗೆ, ಖಾಸಗಿ ಬಂಡವಾಳಕ್ಕೆ ಕ.ಕೃ.ನೀ. ಪ್ರೋತ್ಸಾಹ ಕೊಡುತ್ತದೆಯೇ ವಿನಃ ಮಹಿಳೆಯರಿಗಲ್ಲ.

ಕ.ಕೃ.ನೀ. ಯಾವುದೇ ರೀತಿಯಲ್ಲಿ ಗ್ರಾಮೀಣ ಮಹಿಳೆಯರನ್ನು ಗಣನೆಗೆ ತಂದುಕೊಳ್ಳದೆ, ಕೇವಲ ಅಂತರರಾಷ್ಟ್ರೀಯ ಮಾರುಕಟ್ಟೆ ಕಡೆ ಗಮನವಿತ್ತು, ಮಹಿಳೆ ವಿರೋಧೀ ಪರಿಸ್ಥಿತಿಗಳ ನಡುವೆಯೂ ತನ್ನ ಅಸ್ತಿತ್ವಕ್ಕಾಗಿ, ತನ್ನ ವ್ಯಕ್ತಿತ್ವದ ಬೆಳವಣಿಗೆಗಾಗಿ ರಕ್ಷಣೆ ಮಾಡಿಕೊಂಡು ಬಂದಿರುವ ಅನೇಕ ಕ್ಷೇತ್ರಗಳು ಕ.ಕೃ.ನೀ. ಯಿಂದಾಗಿ ನಶಿಸಿ ಮಹಿಳೆಯರನ್ನು ಇನ್ನೂ ಹೆಚ್ಚು ಶೋಷಣೆ ಮತ್ತು ಪುರುಷಾಧೀನಕ್ಕೆ ತಳ್ಳುವ ಸಾಧ್ಯತೆ ಇದೆ.

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ

ಒಂದು ವರದಿ

ಬೆಂಗಳೂರಿನಲ್ಲಿರುವ ಎಲ್ಲಾ ಮಹಿಳಾ ಗುಂಪುಗಳು ಒಟ್ಟುಗೂಡಿ ಮಹಿಳಾ ಸಂಘರ್ಷ ಒಕ್ಕೂಟ– ಕರ್ನಾಟಕದ, ಅಡಿಯಲ್ಲಿ ಈ ಸಲದ ಮಹಿಳಾ ದಿನಾಚರಣೆಯನ್ನು ಆಚರಿಸಿದವು. ಮಹಿಳಾ ದಿನಾಚರಣೆ ಯನ್ನು ಯಾವ ರೀತಿ ಆಚರಿಸಬೇಕೆಂದು ಎಲ್ಲರೊಂದಿಗೆ ಚರ್ಚಿಸಲಾಯಿತು. ಈ ಸಲಹೆ ಮಹಿಳಾ– ದಿನಾಚರಣೆಯನ್ನು, ರಾಜಾಸ್ಥಾನದ ಭವರಿ ಭಾಯಿಗಾದ- ಅನ್ಯಾಯವನ್ನು ವಿರೋಧಿಸಿ, ಪ್ರತಿಭಟನಾ ದಿನವನ್ನಾಗಿ ಆಚರಿಸಬೇಕೆಂದು ನಿರ್ಧರಿಸಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಹಲವು ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಯಿತು.

ನ್ಯಾಯಲಯವು ಭವರಿಗೆ ನೀಡಿದ ಅನ್ಯಾಯದ ತೀರ್ಪನ್ನು ಹಾಗು ಬಿ.ಜೆ.ಪಿ.ಯವರು ಆರೋಪಿಗಳಿಗೆ ಮಾಡಿದ ಸನ್ಮಾನವನ್ನು ಖಂಡಿಸಿ, ವಿವಿಧ ಭಾಷೆಗಳಲ್ಲಿ ಪಾಂಫ್ಲೇಟ್‌ಅನ್ನು ಮುದ್ರಿಸಿ ಹಂಚಲಾಯಿತು.

ಮಹಿಳಾ ದಿನಾಚರಣೆಗೆ ಜನರನ್ನು ಸಂಘಟಿಸಲು ನಗರದ ವಿವಿಧೆಡೆ, ಪಾಂಫ್ಲೆಟ್‌ಗಳನ್ನು ಹಂಚಲಾಯಿತು. ದಿನಾಂಕ 4-3-96ರಂದು B.E.L. ಹಾಗು H.M.T. ಫ್ಯಾಕ್ಟರಿಯ ಆವರಣದಲ್ಲಿ ಪಾಂಫ್ಲೇಟ್‌ಗಳನ್ನು ಹಂಚಲಾಯಿತು.

ದಿನಾಂಕ 5-3-96ರಂದು I.T.I. ಹಾಗು ಅಲಸೂರು ಬಸ್ ನಿಲ್ದಾಣದಲ್ಲಿ ಪಾಂಫ್ಲೇಟ್‌ಗಳನ್ನು ಹಂಚಲಾಯಿತು.

ದಿನಾಂಕ 6-3-96 ರಂದು ಶಿವಾಜಿನಗರದ ಸುತ್ತ ಮುತ್ತ ಪಾಂಫ್ಲೇಟ್‌ಗಳನ್ನು ಹಂಚಲಾಯಿತು.

ದಿನಾಂಕ 7-3-96 ರಂದು ಟೆಲಿಫೋನ್ ಎಕ್ಸ್‌ಚೆಂಜ್, ವಿಧಾನಸೌಧ, ಕೆ.ಆರ್. ಸರ್ಕಲ್, ಮಾರ್ಥಾಸ್ ಆಸ್ಪತ್ರೆ, R.B.I. ಬಳಿ ಪಾಂಫ್ಲೇಟ್‌ಗಳನ್ನು ಹಂಚಲಾಯಿತು. ಆದೇ ದಿನ ಸಂಜೆ 4–30 ರಿಂದ 5-30ರ ವರೆಗೆ ಹೈಕೋರ್ಟಿನ ಬಳಿ ಎಲ್ಲರೂ ಕಪ್ಪು ಬಟ್ಟೆ ಧರಿಸಿ, ಕಪ್ಪು ದಿನವನ್ನು ಆಚರಿಸಲಾಯಿತು. ಮಾರ್ಚ್ 8ರಂದು 3–30ಕ್ಕೆ ಮೈಸೂರು ವೃತ್ತದ ಬಳಿ ಎಲ್ಲರು ಸೇರಿ ಅಲ್ಲಿಂದ ಸಿಲ್ವರ್ ಜೂಬಿಲಿ ಪಾರ್ಕ್‌ನವರೆಗೆ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಸಿಲ್ವರ್ ಜೂಬಿಲಿ ಪಾರ್ಕ್‌ನಲ್ಲಿ ವಿವಿಧ ಸಂಘಟನೆ ಗಳ ಪ್ರತಿನಿಧಿಗಳು ಭಾಷಣ ಮಾಡಿದರು. ಭವರಿ ಭಾಯಿಯನ್ನು ಕುರಿತು ಬೀದಿ ನಾಟಕವನ್ನು ಮಾಡಲಾಯಿತು. ವಿವಿಧ ಸಂಘಟನೆಯ ಸದಸ್ಯರು ಹಾಡುಗಳನ್ನು ಹಾಡಿದರು: 7 ಗಂಟೆ ಸುಮಾರಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ನನ್ನ ಮುಖ್ಯ ಕಾಳಜಿ, ಮಹಿಳೆಯರು ಮತ್ತು ವಿದ್ಯೆ. ಯಾವ ಪಕ್ಷ ಹೆಣ್ಣುಮಕ್ಕಳಿಗೆ ಕಡ್ಡಾಯವಾಗಿ ಉಚಿತ ಶಿಕ್ಷಣ ಕೊಡುವುದೊ ಆ ಪಕ್ಷವನ್ನೆ ಚುನಾಯಿಸಬೇಕು.

—ರೇಣುಕಾ ಚೌಧರಿ
ತೆಲುಗು ದೇಶಂ ಪಕ್ಷ

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರಿಗೆ ತಕ್ಕದಾಗಿ ಸಿಗಬೇಕಾದ ಸನ್ಮಾನ ಸಿಗಬೇಕು. ಹಾಗೂ ಅವರ ಆಶೋತ್ತರಗಳು ಸಾರ್ವಜನಿಕ ಯೋಜನೆಗಳಲ್ಲಿ ಪ್ರತಿಫಲಿತವಾಗಬೇಕು.

—ಸುಭಾಷಿಣಿ ಅಲಿ
ಸಿ.ಪಿ.ಎಂ.

ಮಹಿಳೆಯರ ಮೇಲಿರುವ ತಾರತಮ್ಯದ ಬಗ್ಗೆ ಅವರಿಗೆ ಅರಿವು ಮೂಡಿಸಬೇಕು. ಹೊಸ ಆರ್ಥಿಕ ನೀತಿಯಿಂದಾಗಿ ಸಂಘಟಿತ ಕ್ಷೇತ್ರದಿಂದ ಹೊರದೂಡಲ್ಪಟ್ಟಿರುವ ಮಹಿಳೆಯರಿಗೆ, ಪರ್ಯಾಯ ತರಬೇತಿಯನ್ನು ಕೇಳಬೇಕು.

—ಪ್ರಮಿಳಾ ದಂಡವತೆ
ಜನತಾ ದಳ

ಉದ್ಯೋಗ ಹೆಚ್ಚಿಸುವ ಯೋಜನೆಗಳನ್ನು ನಿರ್ಮಿಸಬೇಕು. ಹಾಗೂ ನೀರು, ಶೌಚಾಲಯ, ಉರುವಲುಗಳಂತ ಗ್ರಾಮೀಣ ಮೂಲಭೂತ ಅಗತ್ಯಗಳನ್ನು ಪೂರೈಸುವ ಯೋಜನೆಗಳು ಬೇಕು.

—ಜಯ ಜೈಟ್ಲಿ
ಸಮತಾ ಪಕ್ಷ

REGD NO. KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ

ವಿಳಾಸ :

" ಮಾನಸ "
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು-560 067